
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

31 ಮೇ 2017 ಪುಟ 16 ರೂ. 15/-

ರಾಮನಿಂದ ದೇಶ ಉದ್ಧಾರ ಆಗಲಿಲ್ಲ




4 ವರ್ಷ

80/100

ಮೈಸೂರು ಹುಣಸೂರು ಟಿಕೆಟ್ ಸಂಕಟ

ಕುಮಟಾ-ಹೊನ್ನಾವರ

ದಿಕ್ಕೆಟ್ಟ ದಿನಕರ ಶೆಟ್ಟಿ




ಬಳ್ಳಾರಿ ದಲಿತನ ವಿರುದ್ಧ ರಾಮುಲು ಭಂಟರು



ಚಂದ್ರಶೇಖರನ ಭೀಮ ಸೇನೆ

'ಉದ್ಯೋಗ ವಾರ್ತೆ': ಅರ್ಪಿತ್ ಎಂಬ ಹುಡುಗನ ಆತ್ಮಹ

ಅಂಚಿನಿಂದ.....



ಡಾ.ವಾಸು ಎಚ್.ವಿ.

ಹಲವು ಪತ್ರಿಕೆಗಳಲ್ಲಿ ಮತ್ತು ಕೆಲವು ಚಾನೆಲ್‌ಗಳಲ್ಲಿ ಈ ಸುದ್ದಿ ಮೇ ಮೊದಲ ವಾರದಲ್ಲಿ ಬಂದಿದೆ. ಅರ್ಪಿತ್ ಎಂಬ ಗುಬ್ಬಿ ಮೂಲದ ಹುಡುಗ ಬೆಂಗಳೂರಿನ ಪಿಇಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದುತ್ತಿದ್ದ. ಈತ ತನ್ನ ಅಕ್ಯಾಡೆಮಿಕ್ ಸಾಧನೆಗಾಗಿ ಚಿನ್ನದ ಪದಕಗಳನ್ನು ಪಡೆದುಕೊಂಡಿದ್ದ ವಿದ್ಯಾರ್ಥಿ. ಆ ಕಾರಣಕ್ಕಾಗಿಯೇ ಈತ ಮತ್ತು ಇನ್ನಿತರ ನಾಲ್ಕು ವಿದ್ಯಾರ್ಥಿಗಳನ್ನು ಅಮೆರಿಕಕ್ಕೂ ಕಳಿಸಲಾಗಿತ್ತು. ಆ ನಂತರ ಅವರ ಕಾಲೇಜಿನಲ್ಲಿ ಉದ್ಯೋಗಕ್ಕಾಗಿ ಕ್ಯಾಂಪಸ್ ಆಯ್ಕೆ ನಡೆದಿದೆ. ಆದರೆ, ಅದರಲ್ಲಿ ಅರ್ಪಿತ್ ಆಯ್ಕೆಯಾಗಿಲ್ಲ, ಆತನ ಜೊತೆಗಿದ್ದ ಇತರ ನಾಲ್ಕು ಜನರು ಆಯ್ಕೆಯಾಗಿದ್ದಾರೆ. ಅರ್ಪಿತ್ ಬಹಳ ಬೇಸರದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಅರ್ಪಿತ್‌ಗೆ ತಂದೆಯೂ ಇರಲಿಲ್ಲ; ಕುಟುಂಬ ದಿಕ್ಕುಗಾಣದೇ ರೋದಿಸುತ್ತಿದೆ.

ಆತನ ಆತ್ಮಹತ್ಯೆಗೆ ಮಾಧ್ಯಮಗಳ ಮೂಲಕ ತಿಳಿದುಬಂದ ಮೇಲಿನ ಮಾಹಿತಿಯಾಚೆಗೆ ಇನ್ನೂ ಹಲವು ಕಾರಣಗಳು ಇರಲಿಕ್ಕೆ ಸಾಧ್ಯ. ಮೊನ್ನಿನ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳ ಫಲಿತಾಂಶದ ನಂತರವೂ ಹಲವು ವಿದ್ಯಾರ್ಥಿಗಳು ಜೀವ ಕೊನೆಗೊಳಿಸಿಕೊಂಡ ಪ್ರಕರಣಗಳು ವರದಿಯಾಗಿದೆ. ಇವುಗಳಿಗೆ ಸಾರ್ವತ್ರಿಕ ಕಾರಣಗಳಾಚೆ ವ್ಯಕ್ತಿಗತ ಕಾರಣಗಳೂ ಇರಬಹುದು. ಆಯಾ ವಿದ್ಯಾರ್ಥಿಗಳ ಬೇಜವಾಬ್ದಾರಿತನ, ಪೋಷಕರು ಹಾಕುವ ಒತ್ತಡ ಇತ್ಯಾದಿ ಇತ್ಯಾದಿ ಕಾರಣಗಳು ಬೇರೆ ಬೇರೆ ವಿದ್ಯಾರ್ಥಿಗಳಿಗೆ ಬೇರೆ ಬೇರೆ ರೀತಿಯಲ್ಲಿ ಮತ್ತು ಭಿನ್ನ ಪ್ರಮಾಣದಲ್ಲಿ ಇದ್ದಿರಬಹುದು.

ಅದೇನೇ ಇರಲಿ, ಈ ಸಾವುಗಳು ನ್ಯಾಯವೇ? ಖಂಡಿತಾ ನ್ಯಾಯವಲ್ಲ ಎಂದು ಎಲ್ಲರೂ ಭಾವಿಸುತ್ತೇವೆ. ಕುಟುಂಬದಲ್ಲಿ ಎಷ್ಟೇ ಒಳ್ಳೆಯ ಪರಿಸ್ಥಿತಿ ಇದ್ದಾಗಲೂ ಕೆಲವರು ಇಂತಹ ಅತಿರೇಕದ ಕ್ರಮಂಗಳಿಗೆ ಮುಂದಾಗಬಹುದು. ಆದರೆ ಉದ್ಯೋಗ, ಪರೀಕ್ಷೆಗಳ ಫಲಿತಾಂಶ, ಮದುವೆ, ಕೆಲಸದ ಒತ್ತಡ ಇತ್ಯಾದಿ ಇತ್ಯಾದಿ ಅಂಶಗಳು ನಮ್ಮ ಸಮಾಜದಲ್ಲಿ ಕೆಲವರು ಜೀವವನ್ನೇ ಕಳೆದುಕೊಳ್ಳಲು ಕಾರಣವಾಗುತ್ತಿವೆ ಎಂದರೆ, ನಾಗರಿಕ ಸಮಾಜ ಆ ಕುರಿತು ಚರ್ಚಿಸುವುದು ಮತ್ತು ಕ್ರಿಯಾಶೀಲವಾಗುವುದು ಅತ್ಯಗತ್ಯವಾಗಿದೆ.

ಉದ್ಯೋಗ ಸೃಷ್ಟಿಯ ಬಲೂನು ಬಿಟ್ಟಿದ್ದ ಮೋದಿ ಸರ್ಕಾರ


ಎಲ್ಲಾ ಪಕ್ಷಗಳನ್ನೂ ಪರೀಕ್ಷೆಗೆ ಒಳಪಡಿಸುವುದು ಅಗತ್ಯ; ಆದರೆ ಮೋದಿ ಸರ್ಕಾರದ ಪರೀಕ್ಷೆ ಅತ್ಯಗತ್ಯ. ಏಕೆಂದರೆ, ಅಭಿವೃದ್ಧಿ, ಯುವಕರಿಗೆ ಉಜ್ವಲ ಭವಿಷ್ಯ ಮತ್ತು ಪ್ರತೀ ವರ್ಷ ಎರಡು ಕೋಟಿ ಹೊಸ ಉದ್ಯೋಗಗಳ ಭರವಸೆಯನ್ನು ಮೋದಿಯವರು ಹಾಗೂ ಅವರ ಪಕ್ಷ ದೇಶದ ಜನತೆಗೆ ನೀಡಿತ್ತು, ವಿಶೇಷವಾಗಿ ಯುವಜನರಲ್ಲಿ ಆ ರೀತಿಯ ಭರವಸೆ ಮೂಡಿಸಲಾಗಿತ್ತು. ವಿವಿಧ ಸಮೀಕ್ಷೆಗಳು ತೋರಿಸಿದಂತೆ ಯುವಜನರಲ್ಲಿ ಹೆಚ್ಚಿನವರು ಬಿಜೆಪಿಯ ಪರವಾಗಿ ಓಟು ಹಾಕಿದ್ದರು. ಮೋದಿ ಸರ್ಕಾರಕ್ಕೆ ಈಗಾಗಲೇ ಮೂರು ವರ್ಷಗಳು ತುಂಬಿವೆ. ಉದ್ಯೋಗ ಸೃಷ್ಟಿಯ ವಿಚಾರದಲ್ಲಿ ಈ ಸರ್ಕಾರದ ಸಾಧನೆಯೇನು?

ಮೊದಲ ವರ್ಷ, 2014ನ್ನು ಬಿಟ್ಟುಬಿಡೋಣ. ಆ ವರ್ಷವಿಡೀ ಹಿಂದಿನ ಸರ್ಕಾರವನ್ನು ದೂರುವುದರಲ್ಲೇ ಅವರು ಕಳೆದರು. ಯಾರಾದರೂ ಸಾಧನೆಯ ಕುರಿತು ಕೇಳಿದರೆ, 60 ವರ್ಷಗಳಿಂದ ಆಳಿದವರು ನಡೆಸಿದ ದುರಾಡಳಿತದ ಕೊಳೆಯನ್ನು ಒಂದೇ ವರ್ಷದಲ್ಲಿ ತೊಳೆಯುವುದು ಸಾಧ್ಯವೇನು ಎಂಬ ಉತ್ತರ ಬರುತ್ತಿತ್ತು. 2015ರಲ್ಲಿ ಕೇಂದ್ರ ಕಾರ್ಮಿಕ ಇಲಾಖೆಯ ಪ್ರಕಾರ ಇಡೀ ದೇಶದಲ್ಲಿ 1.35 ಲಕ್ಷ ಉದ್ಯೋಗಗಳು ಮಾತ್ರ ಸೃಷ್ಟಿಯಾಗಿದ್ದವು. 2016ರಲ್ಲಿ ಸುಮಾರು ಎರಡು ಕೋಟಿ ಉದ್ಯೋಗಗಳು ಕಡಿಮೆಯಾದವು. ಉತ್ಪಾದನಾ ಕ್ಷೇತ್ರವು 2013ಕ್ಕೂ ಹಿಂದಿನಿಂದಲೇ ಕುಸಿಯಲು ಆರಂಭವಾಗಿತ್ತು, ಮೋದಿಯವರ ನೋಟು ರದ್ದತಿ ಕ್ರಮವು ಸಣ್ಣ ಉದ್ದಿಮೆಗಳನ್ನು ಮಾತ್ರವಲ್ಲದೇ, ಎಲ್ಲಾ ಬಗೆಯ ಉತ್ಪಾದಕ ಹಾಗೂ ವಾಣಿಜ್ಯ ಕ್ಷೇತ್ರಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರಿತು. ಇದರ ಪರಿಣಾಮವಾಗಿ ಕಟ್ಟಡ ನಿರ್ಮಾಣ ಕ್ಷೇತ್ರವೂ ಸೇರಿದಂತೆ ಹಲವಾರು ಕ್ಷೇತ್ರಗಳು ಕುಸಿದಿವೆ. ಹೀಗಾಗಿ ಉದ್ಯೋಗಗಳು ಕಡಿಮೆಯಾಗಿವೆ.

ಸಿದ್ದರಾಮಯ್ಯನವರ ಸರ್ಕಾರದಲ್ಲಿ ಉದ್ಯೋಗಗಳು

ಸಿದ್ದರಾಮಯ್ಯನವರ ಸರ್ಕಾರವು ಈ ವಾರದಲ್ಲಿ ಕೌಶಲ್‌ಕಾರ್ ಎಂಬ ಒಂದು ಆ್ಯಪ್ ಬಿಡುಗಡೆ ಮಾಡಿದೆ. ಅದರ ಮೂಲಕ ವಿದ್ಯಾರ್ಥಿ ಯುವಜನರು ನೋಂದಣಿ ಮಾಡಿಕೊಂಡರೆ, ಕೌಶಲ್ಯ ತರಬೇತಿ ಮತ್ತು ಉದ್ಯೋಗದ ಭರವಸೆ ನೀಡಲಾಗುತ್ತಿದೆ. 'ನುಡಿದಂತೆ ನಡೆಯುತ್ತಿದ್ದೇವೆ' ಎಂದು ಹೇಳಿಕೊಳ್ಳುತ್ತಿರುವ ಈ ಸರ್ಕಾರವು ಅಧಿಕಾರಕ್ಕೆ ಬರುವ ಮುಂಚೆ ಪ್ರಣಾಳಿಕೆಯಲ್ಲಿ ಏನು ಹೇಳಿದ್ದರು ಎಂಬುದನ್ನು ನೋಡೋಣ: 'ಕೈಗಾರಿಕಾ ನಗರಗಳು ಮತ್ತು ಕೇಂದ್ರಗಳ ಸ್ಥಾಪನೆ. ಈ ಪಥಕ್ಕೆ ರಾಜ್ಯದ ಮುಖ್ಯ ವಿಮಾನ ನಿಲ್ದಾಣ ಮತ್ತು ಬಂದರುಗಳ ಜೊತೆ ಸಂಪರ್ಕ ವ್ಯವಸ್ಥೆ (ಸಿದ್ಧ ಉಡುಪು, ಬಟ್ಟೆ, ಕಿರುತಾಂತ್ರಿಕ ಉಪಕರಣಗಳು, ಕೌಶಲ್ಯ ವಸ್ತುಗಳು, ಕೃಷಿ ಉತ್ಪನ್ನ ಉದ್ದಿಮೆಗಳು ವಿದ್ಯುತ್ ಮತ್ತು ವಿದ್ಯುನ್ಮಾನ ಉಪಕರಣಗಳು ಮತ್ತು ಆಟೋಮೊಬೈಲ್ ಇತ್ಯಾದಿ ಕೈಗಾರಿಕೆಗಳನ್ನು ಈ ಯೋಜನೆ ಉತ್ತೇಜಿಸುವುದು) ಇದರಿಂದ ಅಂದಾಜು 50 ಲಕ್ಷ ಉದ್ಯೋಗಗಳ ಸೃಷ್ಟಿ.'

ಒಟ್ಟು ಐದು ವರ್ಷಗಳಲ್ಲಿ 50 ಲಕ್ಷ ಉದ್ಯೋಗಗಳು ಸೃಷ್ಟಿಯಾಗಬೇಕಿತ್ತು, ಚುನಾವಣೆಯ ವರ್ಷದಲ್ಲಿ ವಿಶೇಷ ಯೋಜನೆ ತಯಾರಿಸಿದ ನಂತರವೂ ಅವರು ನೀಡುತ್ತಿರುವುದು ಐದು ಲಕ್ಷ ಉದ್ಯೋಗಗಳ ಭರವಸೆ ಅಷ್ಟೇ. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಇರುವ ಹುದ್ದೆಗಳಲ್ಲೇ ಎರಡು ಲಕ್ಷಕ್ಕೂ ಹೆಚ್ಚು ಖಾಲಿಯಿವೆ. ಅಷ್ಟು ಮಾತ್ರವಲ್ಲದೇ ಕಳೆದ ನಾಲ್ಕು ವರ್ಷಗಳಲ್ಲಿ ಸಿಬ್ಬಂದಿ ವೇತನಕ್ಕೆ ಎಂದು ನಿಗದಿಯಾಗಿದ್ದ ಸುಮಾರು 18,000 ಕೋಟಿಗಳಷ್ಟು ಹಣವನ್ನು ಸಿದ್ದರಾಮಯ್ಯನವರ ಸರ್ಕಾರ ಬಳಸಿಯೇ ಇಲ್ಲ! ಏಕೆಂದರೆ, ಅಷ್ಟು ಸಿಬ್ಬಂದಿ ನೇಮಕಾತಿಯೇ ಆಗಲಿಲ್ಲ!!





ಕಾಂಗ್ರೆಸ್ ಸರ್ಕಾರದ ಮಂತ್ರಿಗಳ 'ಒಳನೋಟ'

ಆಹಾರ ಖಾತೆ ಮಂತ್ರಿಯಾಗಿದ್ದ ದಿನೇಶ್ ಗುಂಡೂರಾವ್ ಮತ್ತು ಹಿಂದೆ ಆರೋಗ್ಯ ಸಚಿವರೂ, ಹಾಲಿ ಆಹಾರ ಖಾತೆ ಸಚಿವರೂ ಆದ ಯು.ಟಿ.ಖಾದರ್ ಅವರು ಆಯಾ ಇಲಾಖೆಗಳ ಗುತ್ತಿಗೆ ಸಿಬ್ಬಂದಿ ಪ್ರತಿಭಟನೆ ನಡೆಸಿದಾಗ ಹೇಳಿದ ಕೆಲವು ಮಾತುಗಳನ್ನು ಗಮನಿಸಿದರೆ, ಈ ಸರ್ಕಾರದ 'ಒಳನೋಟ' ಅರ್ಥವಾಗುತ್ತದೆ. ಅವರ ಪ್ರಕಾರ "ನಮ್ಮ ಇಲಾಖೆಯ ಕೆಲಸವನ್ನು ನೀವು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಈ ಇಲಾಖೆಗಳು ಇರುವುದು ಜನರಿಗಾಗಿಯೇ ಹೊರತು, ಈ ಉದ್ಯೋಗಗಳನ್ನು ಸೃಷ್ಟಿ ಮಾಡುವುದಕ್ಕಾಗಿ ಆರೋಗ್ಯ ಇಲಾಖೆಯನ್ನಾಗಲೀ, ಅನ್ನಭಾಗ್ಯದಂತಹ ಯೋಜನೆಗಳನ್ನಾಗಲೀ ರೂಪಿಸಿಲ್ಲ". ಹಾಗಾಗಿ ಉದ್ಯೋಗದ ಖಾತರಿ ಅಥವಾ ಭದ್ರತೆಯನ್ನು ಈ ಕಾರ್ಮಿಕರು ಕೇಳಬಾರದು.

ಆಗ ಅವರಿಗೆ ಒಂದು ಮರುಪ್ರಶ್ನೆ ಕಾರ್ಮಿಕರಿಂದ ತೂರಿಬಂದಿತು. "ಹಾಗಾದರೆ, ನಿಮ್ಮ ಸರ್ಕಾರದ ಯಾವ ಇಲಾಖೆ ಜನರಿಗಾಗಿ ಇಲ್ಲ ಎಂಬುದನ್ನು ಹೇಳುವಿರಾ?" ಅದಕ್ಕೆ ಅವರಲ್ಲಿ ಉತ್ತರವಿರಲಿಲ್ಲ. ಖಾಸಗಿ ವಲಯವಿರಲಿ ಅಥವಾ ಸರ್ಕಾರೀ ವಲಯವಿರಲಿ, ಈ ನಾಡಿನ ಜನರಿಗೆ ವಿವಿಧ ಸರಕು ಅಥವಾ ಸೇವೆಯನ್ನು ಕಲ್ಪಿಸಿದರೆ ಮಾತ್ರ ಉದ್ಯೋಗಗಳು ಸೃಷ್ಟಿಯಾಗುತ್ತವೆ. ಯಾವ ಸರಕು ಉತ್ಪಾದನೆಯೂ ಆಗದೇ ಇದ್ದರೆ, ಸೇವೆಯನ್ನು ನೀಡದೇ ಇದ್ದರೆ ಉದ್ಯೋಗಗಳು ಎಲ್ಲಿ ಸೃಷ್ಟಿಯಾಗುತ್ತವೆ?

ಬಹುಶಃ ಇಂತಹ ಒಳನೋಟದಿಂದಾಗಿಯೇ, 2011-12ರಲ್ಲಿ 1.42 ಲಕ್ಷ ಹುದ್ದೆಗಳು ಖಾಲಿ ಇದ್ದರೆ, 2016ರ ಹೊತ್ತಿಗೆ 2.70 ಲಕ್ಷ ಹುದ್ದೆಗಳು ಖಾಲಿ ಬಿದ್ದವು. (ಪ್ರಜಾವಾಣಿ 13.05.2016)

ಈ ಹಿಂದಿನ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರದ ಸಾಧನೆ

ರಾಜ್ಯದಲ್ಲಿ ಐದು ವರ್ಷಗಳ ಸಂಪೂರ್ಣ ಆಡಳಿತ ನಡೆಸಿದ ಬಿಜೆಪಿ ಪಕ್ಷವು 2013ರ ಚುನಾವಣೆಯ ಪ್ರಣಾಳಿಕೆಯಲ್ಲಿ ಹೀಗೆ ಹೇಳಿತ್ತು: 'ನಮ್ಮ ಸರ್ಕಾರವು 26 ಲಕ್ಷ ಉದ್ಯೋಗ ಸೃಷ್ಟಿಸಲು 506 ಯೋಜನೆಗಳನ್ನು ಮುಕ್ತಾಯಗೊಳಿಸಿದೆ: 5.31 ಲಕ್ಷ ಜನರಿಗೆ ಉದ್ಯೋಗ ದೊರಕಿದೆ.' ಈ ಎರಡು ವಾಕ್ಯಗಳಲ್ಲಿನ ವೈರುಧ್ಯ ನೋಡಿದರೆ ಅಳಬೇಕೋ, ನಗಬೇಕೋ ಗೊತ್ತಾಗುವುದಿಲ್ಲ. ಇದರ ಜೊತೆಗೆ ನಂತರದ ಐದು ವರ್ಷಗಳಲ್ಲಿ ಅವರ ಗುರಿಯೇ ಬಹಳ ಕಡಿಮೆಯಾಗಿಬಿಟ್ಟಿತು! ಐದು ಲಕ್ಷ ವೃತ್ತಿಪರ ಕುಟುಂಬಗಳಿಗೆ ನೆರವು ನೀಡುವ ಅಂತ್ಯೋದಯ ಕಾರ್ಯಕ್ರಮ ಮತ್ತು 10 ಲಕ್ಷ ಯುವಕ ಯುವತಿಯರಿಗೆ ಕೌಶಲ್ಯ ತರಬೇತಿ ಮತ್ತು ಉದ್ಯೋಗ ಸೃಷ್ಟಿ. ಬಹುಶಃ ಮರುವರ್ಷ ನಡೆಯುವ ಲೋಕಸಭಾ ಚುನಾವಣೆಯಲ್ಲಿ ಮೋದಿಯವರು ಕೋಟಿ ಕೋಟಿ ಉದ್ಯೋಗ ಸೃಷ್ಟಿ ಮಾಡುವುದರಿಂದ, ರಾಜ್ಯ ಸರ್ಕಾರ ಹೆಚ್ಚು ಪ್ರಯತ್ನ ಮಾಡುವ ಅಗತ್ಯವಿಲ್ಲ ಎಂದು ಅಂದಿನ ಬಿಜೆಪಿ ಪ್ರಣಾಳಿಕೆ ಕರ್ತೃಗಳು ಭಾವಿಸಿರಬಹುದು.

ಜೆ.ಡಿ.ಎಸ್. ಸಾಧನೆ ಮತ್ತು ಮುನ್ನೋಟ

2013ರ ಜೆಡಿಎಸ್ ಪ್ರಣಾಳಿಕೆ ಪ್ರಕಾರ, ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ಲಕ್ಷಾಂತರ ಯುವಕರಿಗೆ ಉದ್ಯೋಗ ನೀಡಲಾಯಿತು. ಲಕ್ಷಾಂತರ ಎನ್ನುವುದರ ಅರ್ಥವೇನು ಎಂದು ಯಾರಿಗೂ ಗೊತ್ತಿಲ್ಲ. ಆದರೆ, ಮುಂದಿನ ಐದು ವರ್ಷಗಳಿಗೆ ಅವರ ಮುನ್ನೋಟ ಸ್ಪಷ್ಟವಿತ್ತು! 'ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ, 30 ಲಕ್ಷ ಉದ್ಯೋಗ ನೀಡಲಿದೆ!!' ರೈತಪರ ಸರ್ಕಾರ, ಮಣ್ಣಿನ ಮಕ್ಕಳ ಆಡಳಿತ ಎಂದು ಹೇಳಿಕೊಳ್ಳುವ ಈ ಪಕ್ಷಕ್ಕೆ ಕೃಷಿ ಕ್ಷೇತ್ರದ ಕುರಿತೇ ಸರಿಯಾದ ಮುನ್ನೋಟ ಇಲ್ಲ. ಜೆಡಿಎಸ್ ಆಡಳಿತ ನಡೆಯುತ್ತಿದ್ದಾಗ, ಸರಣಿ ರೈತ ಆತ್ಮಹತ್ಯೆಗಳು ನಡೆದವು. ಆಗ, ಮುಖ್ಯಮಂತ್ರಿ ಎಚ್.ಡಿ.ಕೆ ಒಂ... ಸಂವಾದ ನಡೆಸಿದರು.

ಅದರಲ್ಲಿ ರೈತರ ಸಂಕಷ್ಟದ ಕಥೆಗಳನ್ನು ಸಂ... ತಾಳ್ಮೆಯಿಂದ ಕೇಳಿಸಿಕೊಂಡ ಕುಮಾರಸ್ವಾಮಿಯವರ... ಸಿದ್ಧಪಡಿಸಿಕೊಂಡು ಬಂದಿದ್ದ ಭಾಷಣವನ್ನು ಮು... ಕೊಂಡು ಮಾತನಾಡಿದರು. ಅವರು ನೀಡಿದ... ಏನೆಂದರೆ 'ರೈತರು ಗುತ್ತಿಗೆ ಕೃಷಿಯಂತಹ ಕೃ... ಮುಂದಾಗಬೇಕು' ಎಂದು. ಸ್ವಾವಲಂಬಿ ರೈತರನ್ನು ... ಗುತ್ತಿಗೆ ಕೊಟ್ಟು, ತಮ್ಮದೇ ತೋಟದಲ್ಲಿ ಜೀತ... ಎಂದು ರೈತಪರ ಮುಖ್ಯಮಂತ್ರಿ ಕರೆ ನೀಡಿದರು! ... ದೇಶದ ಬಹುಸಂಖ್ಯಾತ ಜನರಿಗೆ ಉದ್ಯೋಗ ನೀ... ವುದು ಕೃಷಿ ಕ್ಷೇತ್ರವೇ ಆಗಿದೆ. ಪಾಶ್ಚಿಮಾತ್ಯ ... ರೀತಿಯಲ್ಲಿ ಇದನ್ನು ಒಂದು ದಿನ ಇದ್ದಕ್ಕಿದ್ದಂತೆ ... ವುದು ಸಾಧ್ಯವಿಲ್ಲ. ಹೀಗಿರುವಾಗ ಕೃಷಿಯನ್ನು ... ಬಗೆ ಹೇಗೆ ಎಂಬುದರ ಬಗ್ಗೆ ರೈತರ ಪಕ್ಷದ ... ಮಂತ್ರಿಯು ಬಳಿ ಒಂದೇ ಒಂದೇ ಯೋಜನೆ ...

ಕೆಲವು ಅಂಕಿ-ಅಂಶಗಳು

- ಮೋದಿ ಸರ್ಕಾರದ ಮಹೋನ್ನತ ಕೃತ್ಯಗಳಲ್ಲಿ... ನೋಟು ರದ್ದತಿಯಿಂದಾದ ಉದ್ಯೋಗ ನಷ... ಗೊತ್ತೇ. ನೋಟು ರದ್ದತಿಯ 34 ದಿನಗಳ... ಅಖಿಲ ಭಾರತ ಉತ್ಪಾದಕರ ಸಂಘಟನೆ(ಎಐ... ಪ್ರಕಾರ 35% ಉದ್ಯೋಗ ನಷ್ಟವಾಯಿತು. ... ಎಷ್ಟು ಕಪ್ಪುಹಣ ಹೊರತಂದಿದೆ ಎಂ... ಕುರಿತಾಗಲೀ, ಉದ್ಯೋಗ ನಷ್ಟದ ಕುರಿ... ಇದುವರೆಗೆ ಅಧಿಕೃತ ಹೇಳಿಕೆ ನೀಡಿಲ್ಲ.
- 2015ರಲ್ಲಿ ಕರ್ನಾಟಕ ಲೋಕ... ಆಯೋಗವು ಎಫ್‌ಡಿಎ, ಎಸ್‌ಡಿಎ, ... ಬ್ಯಾಕ್‌ಲಾಗ್, ಕೆಎಫ್‌ಸಿಎಸ್‌ಸಿಯ ಹಿರಿಯ... ಕಿರಿಯ ಸಹಾಯಕರ ಒಟ್ಟು 2,463 ಹುದ್ದೆ... ಅರ್ಜಿ ಆಹ್ವಾನಿಸಿತು. ಆಗ ಬಂದ ಅರ್ಜಿಗ... 18.85 ಲಕ್ಷ.
- ಎನ್‌ಎಸ್‌ಡಿಸಿ (National... development council-ರಾಷ್ಟ್ರೀಯ... ಅಭಿವೃದ್ಧಿ ನಿಗಮ) 2013ರಲ್ಲಿ ನಡೆಸಿದ ಸ... ಪ್ರಕಾರ ಕರ್ನಾಟಕದಲ್ಲಿ 18ರಿಂದ 39 ... ಉದ್ಯೋಗಾಕಾಂಕ್ಷಿಗಳು 2.3 ಕೋಟಿ ಇದ್ದರೆ,... 95 ಲಕ್ಷ ಯುವಜನತೆ ಉದ್ಯೋ... ಪಡೆದುಕೊಳ್ಳುವುದು ಸಾಧ್ಯವಾಗಿಲ್ಲ.
- ಹುಸಿ ಭರವಸೆ ಹಾಗೂ ಮುನ್ನೋ... ಕೊಡುವುದರಲ್ಲಿ ನಮ್ಮ ಸರ್ಕಾರಗಳು ಹಿಂದ... ಉದಾ: 2014-15ರ ಕೇಂದ್ರ ಹಣಕಾಸು ... ವಾರ್ಷಿಕ ವರದಿಯ ಪ್ರಕಾರ 2021ರ ... ದೇಶದಲ್ಲಿ ಉದ್ಯೋಗ ಸೃಷ್ಟಿಯ ದರವು... ಜನಸಂಖ್ಯೆಯ ಬೆಳವಣಿಗೆಯ ದರವನ್ನು ದಾಟ... ಹಾಗಾಗಿ ಉದ್ಯೋಗ ನೀಡಲು ಬೇಕಾದ... ಹೆಚ್ಚಿಸುವುದಷ್ಟೇ ಈಗಿನ ಕೆಲಸವಂತೆ! ... ರೂಪಿಸಲಾದ ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ... 15 ಕೋಟಿ ಯುವಜನತೆಯನ್ನು ... ಸಹಭಾಗಿತ್ವದಲ್ಲಿ - ಕುಶಲಗೊಳಿಸಲು ಸೂಚಿ... ಇದುವರೆಗೆ ಅದು 51 ಲಕ್ಷ ಜನರಿಗೆ ಕೌ... ಕಲಿಸಿ 15 ಲಕ್ಷ ಜನರಿಗೆ ಉದ್ಯೋಗ ... ಎಂದು ಹೇಳುತ್ತಿದೆ.
- ಮೂರು ತಿಂಗಳಿಗೊಮ್ಮೆ (8 ಉದ್ದಿಮೆ ... ಉದ್ಯೋಗದ ಲಭ್ಯತೆಯ ಸ್ಥಿತಿಯ ಸಮೀ... ಕಾರ್ಮಿಕ ಮತ್ತು ಉದ್ಯೋಗ ಸಚಿವಾಲ... ಮಾಡಲಾಗುತ್ತದೆ. ಅದರ ಪ್ರಕಾರ ಮೋ... ಉದ್ಯೋಗ ಸೃಷ್ಟಿಯು ಎಷ್ಟಿದೆ ಗೊತ್ತೇ? ... ಸರ್ಕಾರವು ಒಂದು ವರ್ಷದಲ್ಲಿ ... ಉದ್ಯೋಗವನ್ನು ಬಿಜೆಪಿ ಸರ್ಕಾರವು ... ವರ್ಷಗಳಲ್ಲಿ ಮಾಡಿತು. ಜವಳಿ, ಐಟಿ ಮತ್ತ... ಕ್ಷೇತ್ರಗಳಲ್ಲಿ ಎನ್‌ಡಿಎ ಸರ್ಕಾರದಲ್ಲಿ ಹೆಚ್ಚಿನ ... ಕಂಡು ಬಂದಿದೆಯಾದರೂ, ಚರ್ಮೋ... ಆಟೋಮೊಬೈಲ್, ಆಭರಣಗಳು, ಸಾರಿಗೆ, ಗ... ಕೈ ಮಗ್ಗ, ವಿದ್ಯುತ್ ಮಗ್ಗಗಳ ಕ್ಷೇತ್ರಗಳು ...
- ಭಾರತದಲ್ಲಿ ಉದ್ದಿಮೆಗಳ ಕ್ಷೇತ್ರದಲ್ಲಿ ಅ... ಒಟ್ಟು ಉದ್ಯೋಗಗಳಲ್ಲಿ ಶೇ.45ರಷ್ಟು ಸ... ಸಣ್ಣ ಮತ್ತು ಮಧ್ಯಮ ಪ್ರಮಾಣದ ಉ... ನೀಡುತ್ತವೆ. ಈ ವಿಭಾಗಗಳಲ್ಲಿ ಒಟ್ಟು 6.... ಉದ್ಯೋಗಗಳಿವೆ.

ಮತ್ತೊಬ್ಬ ದಲಿತ ಸೂರ್ಯನ ಉದಯ



ಈಗ ಎಲ್ಲೆಡೆ ಚಂದ್ರಶೇಖರ್ ಆಜಾದ್ ಎಂಬ ಯುವಕನದ್ದೇ ಸದ್ದು. ಉತ್ತರ ಪ್ರದೇಶದಲ್ಲಿ ಯೋಗಿ ...ತ್ಯನಾಥ್ ಅಧಿಕಾರಕ್ಕೆ ಏರಿ ಮೂರು ತಿಂಗಳೂ ಆಗಿಲ್ಲ; ...ಲೇ ಅಲ್ಲಿನ ಮುಖ್ಯಮಂತ್ರಿಗೆ ಮುಖಭಂಗ ಮಾಡಿರುವ ...ದ್ರಶೇಖರ್ ಯೋಗಿಯ ನಿದ್ದೆ ಕೆಡಿಸುತ್ತಿದ್ದಾನೆ. ಅಷ್ಟೇ ...ಲ್ಲ, ದೇಶದಾದ್ಯಂತ ಪ್ರಗತಿಪರರಲ್ಲಿ ಸಂಚಲನ ...ಮೂಡಿಸಿರುವ ಚಂದ್ರಶೇಖರ್ ಯುವಜನತೆಯಲ್ಲಿ ...ರೋಮಾಂಚನ ಸೃಷ್ಟಿಸಿದ್ದಾನೆ. ಯಾರು ಈ ಚಂದ್ರಶೇಖರ್? ...ಮಾಡುತ್ತಿರುವುದು ಏನನ್ನು?

ತನ್ನ ಯೌವನವನ್ನು ಡೆಹರಾಡೂನ್‌ನಲ್ಲಿ ಕಳೆದ ...ದ್ರಶೇಖರ್ 2013ರ ಹೊತ್ತಿಗೆ ಕಾನೂನು ಪದವಿ ...ದು ವಕೀಲನಾಗಬೇಕೆಂದು ಕನಸು ಕಾಣುತ್ತಿದ್ದ. ಆದರೆ ...ೇ ಹೊತ್ತಿಗೆ ಆತನ ತಂದೆ ಗೋವರ್ಧನ್ ದಾಸ್ ...ರರಲ್ಲಿ ಕ್ಯಾನ್ಸರ್ ರೋಗ ಕಾಣಿಸಿಕೊಂಡಿತು. ಸರ್ಕಾರಿ ...ಯಲ್ಲಿ ಶಿಕ್ಷಕರಾಗಿದ್ದ ದಾಸ್ ಅವರು ತಮ್ಮ ವೃತ್ತಿಯ ...ುತ್ತ ಬೇರೆ ಬೇರೆ ಕಡೆ ಸೇವೆಸಲ್ಲಿಸಿದ್ದರಿಂದ ಅವರ ...ವಿಗೆ ಬಾರದಂತೆ ತಂದೆ ಮತ್ತು ಮಗನ ನಡುವೆ ...ತರ ಬೆಳೆದಿತ್ತು. ಆದರೆ ಕ್ಯಾನ್ಸರ್‌ಗೆ ಚಿಕಿತ್ಸೆ ಕೊಡಿಸುವಾಗ ...ರಿಬ್ಬರೂ ಹತ್ತಿರವಾದರು. ದಲಿತರಾದ ದಾಸ್ ಅವರು ...ಶಿಕಾರಣಕ್ಕೆ ತಮಗಾದ ಅವಮಾನಗಳನ್ನು ತಮ್ಮ ಪುತ್ರನಿಗೆ ...ರಿಸಿದರು. ಅವರು ಶಾಲೆಯ ಮುಖ್ಯಸ್ಥರಾಗಿದ್ದರೂ ...ಾ ಸಿಬ್ಬಂದಿ ಅವರಿಗೆ ಪ್ರತ್ಯೇಕವಾಗಿ ಕುಡಿಯುವ ನೀರು ...ುತ್ತಿದ್ದರು. ಸಭೆಗಳಲ್ಲಿ ಅವಮಾನ ಮಾಡುತ್ತಿದ್ದರು. ಇಂತಹ ...ರಾರು ಪ್ರಕರಣಗಳನ್ನು ಅವರು ನೆನಪು ಮಾಡಿಕೊಂಡರು. ...ದ್ರಶೇಖರನಿಗೆ ಇಂತಹ ಅವಮಾನಗಳು ಆಗಿರದಿದ್ದರೂ ...ನ ತಂದೆಯ ಬದುಕು ಆತನ ಕಣ್ಣು ತೆರೆಸಿತು. ದಾಸ್ ...ರು ತೀರಿಕೊಂಡ ನಂತರ ತನ್ನ ಜನರಿಗೆ ಏನನ್ನಾದರೂ ...ಡಬೇಕು ಎಂದು ನಿರ್ಧರಿಸಿದ ಚಂದ್ರಶೇಖರ್ ...ರನಪುರ್ ಜಿಲ್ಲೆಯಲ್ಲಿರುವ ತನ್ನ ಮೂಲ ಊರಾದ ...ತ್ಮಲಪುರಕ್ಕೆ ಹಿಂದಿರುಗಿದ. ಚುತ್ಮಲಪುರ್ ಹೆಚ್ಚಾಗಿ ...ತರು ಮತ್ತು ಮುಸಲ್ಮಾನರು ಇರುವ ಊರು. ಅಲ್ಲಿ ... ಹಲವು ದಲಿತ ಮಿತ್ರರನ್ನು ಜೊತೆಹಾಕಿಕೊಂಡ ...ದ್ರಶೇಖರ್ ಎರಡು ವರ್ಷಗಳ ಹಿಂದೆ 'ಭೀಮ್ ಆರ್ಮಿ' ...ಬ ಸಂಘಟನೆಯನ್ನು ಹುಟ್ಟುಹಾಕಿದ. ಇದರ ಉದ್ದೇಶ ...ತಿ ದೌರ್ಜನ್ಯವನ್ನು ವಿರೋಧಿಸುವುದು.

...ಹೆಚ್ಚಾಗಿ ವಾಟ್ಸ್‌ಆಪ್ ಗುಂಪುಗಳಲ್ಲಿ ಕ್ರಿಯಾಶೀಲವಾಗಿದ್ದ ...ಭೀಮ ಸೇನೆಗೆ ಒಂದು ದಿನ ಒಂದು ಕರೆ ಬಂತು. ...ಪೂತರು ನಡೆಸುವ ಒಂದು ಇಂಟರ್ ಕಾಲೇಜಿನಲ್ಲಿ ...ಕೂರ್ ವಿದ್ಯಾರ್ಥಿಗಳು ದಲಿತ ವಿದ್ಯಾರ್ಥಿಗಳಿಂದ ...ಶರಿಯನ್ನು ಗುಡಿಸುತ್ತಿದ್ದರು, ತಮಗಿಂತ ಮುನ್ನ ನೀರು ...ಿದರೆ ಥಳಿಸುತ್ತಿದ್ದರು, ಶ್ರದ್ಧೆಯಿಂದ ಓದಿದರೆ ...ಮುಸ್ತಿದ್ದರು. ಭೀಮಸೇನೆಯ ಬಗ್ಗೆ ಗೊತ್ತಿದ್ದ ಒಬ್ಬ ...ತ ವಿದ್ಯಾರ್ಥಿ ಮಾಡಿದ ಕರೆಗೆ ಸ್ಪಂದಿಸಿದ ಚಂದ್ರಶೇಖರ್ ...ತ್ತು ಅವರ ಮಿತ್ರರು ಕಾಲೇಜಿಗೆ ಭೇಟಿ ಕೊಟ್ಟು ಜಾತಿ ...ಸತಮ್ಮ ಮಾಡುತ್ತಿದ್ದ ಠಾಕೂರ್ ವಿದ್ಯಾರ್ಥಿಗಳನ್ನು ...ಯವಾಗಿ' ವಿಚಾರಿಸಿದರು! ಅವತ್ತಿನಿಂದ ಆ ಕಾಲೇಜಿನ ...ಕೂರ್ ವಿದ್ಯಾರ್ಥಿಗಳ ಅಟ್ಟಹಾಸ ನಿಂತಿತು. ಇನ್ನೊಂದು ...ರಿ ದಲಿತ ಮದುಮಗನೊಬ್ಬ ಕುದುರೆ ಏರಿ ...ಾಹವಾಗಲು ಹೊರಟಾಗ ಠಾಕೂರರು ಪ್ರತಿಭಟಿಸಿ ... ಕುದುರೆಯಿಂದ ಇಳಿಯುವಂತೆ ಮಾಡಿದರು. ಆಗ ...ಸ ಮಿತ್ರನೊಬ್ಬ ಭೀಮ ಸೇನೆಗೆ ಕರೆ ಮಾಡಿದ. ಕೂಡಲೆ ... ಹಾಜರಾದ ಸೇನೆ ದಲಿತ ವರ ಕುದುರೆ ಏರಿ ...ಗುವಂತೆ ನೋಡಿಕೊಂಡರು. ಇದೆಲ್ಲದರಿಂದಾಗಿ ಭೀಮ ...ಸೇನೆ ಬಗ್ಗೆ ದಲಿತ ಸಮುದಾಯದಲ್ಲಿ ಅರಿವು ...ಾಡಲಾರಂಭಿಸಿತು.

...ಆದರೆ ಭೀಮ ಸೇನೆ ಎಲ್ಲರ ಗಮನಕ್ಕೆ ಬಂದದ್ದು ...ಿದ ವರ್ಷ. ಶಹರನಪುರ್ ಹತ್ತಿರದಲ್ಲೇ ಇರುವ ಘರ್ಕೋಲಿ ಎಂಬ ಹಳ್ಳಿಯಲ್ಲಿ ದಲಿತ ಯುವಕರು ಅಂಬೇಡ್ಕರ್ ಪ್ರತಿಮೆಯ ಹತ್ತಿರ 'ದಿ ಗ್ರೇಟ್ ಚಮ್ಮಾರ್ ಡಾ. ಭೀಮ್‌ರಾವ್ ಅಂಬೇಡ್ಕರ್ ಗ್ರಾಮ ಘರ್ಕೋಲಿ' ಎಂಬ ಬೋರ್ಡ್ ಹಾಕಿದರು. ಇದು ಅದೇ ಹಳ್ಳಿಯ ಠಾಕೂರರನ್ನು ಕೆರಳಿಸಿತು. "ಚಮ್ಮಾರನೊಬ್ಬ ಅದು ಹೇಗೆ 'ಗ್ರೇಟ್' ಆಗಲು ಸಾಧ್ಯ" ಎಂದು ವಾದಿಸಿದ ಠಾಕೂರರು ಮೊದಲು ಆ ಬೋರ್ಡ್ ಕಿತ್ತುಹಾಕಬೇಕೆಂದು ತಾಕೀತು ಮಾಡಿದರು. ಅದಕ್ಕೆ ಬಗ್ಗದ ದಲಿತ ಯುವಕರು "ನಾವು ಅದನ್ನು ನಮಗೆ ಸೇರಿರುವ ಖಾಸಗಿ ಭೂಮಿಯಲ್ಲಿ ಹಾಕಿಕೊಂಡಿದ್ದೇವೆ. ನಿಮ್ಮದೇನು ರಗಳೆ" ಎಂದರು. "ಹೋಗಲಿ 'ಗ್ರೇಟ್' ಪದವನ್ನು ತೆಗೆದು ಹಾಕಿ" ಎಂದರು ಠಾಕೂರರು. ಯಾಕೆಂದರೆ ಅವರ ಪ್ರಕಾರ ಆ ಪದವು ಚಮ್ಮಾರರು ಇತರರಿಗಿಂತ ಗ್ರೇಟ್ ಎಂಬುದನ್ನು ಸೂಚಿಸುತ್ತಿತ್ತು; ಅದನ್ನು ಅವರಿಂದ ಸಹಿಸಲಾಗಲಿಲ್ಲ. ಅದಕ್ಕೂ ದಲಿತರು ಬಗ್ಗಲಿಲ್ಲ. ಆಗ ಠಾಕೂರರು ಪೊಲೀಸರಿಗೆ ದೂರು ಸಲ್ಲಿಸಿದರು. ಈ ಪ್ರಕರಣದ ಇತ್ಯರ್ಥಕ್ಕೆ ಡಿವೈಎಸ್ಪಿ ಆನಂದ್ ಪಾಂಡೆ ಬಂದ. ಆತ ಬ್ರಾಹ್ಮಣ. ಠಾಕೂರರ ಜೊತೆ ಕೈಜೋಡಿಸಿದ ಪೊಲೀಸಪ್ಪ ಆ ಬೋರ್ಡ್‌ಗೆ ಕಪ್ಪು ಬಣ್ಣ ಬಳಿಸಿದ. ಅದಾದ ಕೆಲ ಗಂಟೆಗಳಲ್ಲಿ ಅದ್ಯಾರೋ ಅಂಬೇಡ್ಕರ್ ಅವರ ಪ್ರತಿಮೆಗೂ ಕಪ್ಪು ಬಣ್ಣ ಬಳಿದರು. ಇದು ದಲಿತರನ್ನು ಕೆರಳಿಸಿತು. ಅವರಲ್ಲಿ ಒಬ್ಬ ಭೀಮ ಸೇನೆಗೆ ಫೋನ್ ಮಾಡಿದ. ತಮ್ಮ ಪಂಚಾಯತಿಯನ್ನು ವಿರೋಧಿಸಿದ ದಲಿತರನ್ನು ಬಡಿಯಲು ಪೊಲೀಸರು ಸಜ್ಜಾಗುತ್ತಿದ್ದಂತೆ ಹತ್ತಾರು ಮೋಟಾರ್ ಬೈಕ್‌ಗಳನ್ನೇರಿ ದೊಡ್ಡ ಗುಂಪೊಂದು "ಜೈ ಭೀಮ್" ಎಂದು ಕೂಗುತ್ತಾ ಹಾಜರಾಯಿತು. ಅದರ ನೇತೃತ್ವ ವಹಿಸಿದ್ದವ ಬಿಳಿ ಶರ್ಟ್, ಕಪ್ಪು ಪ್ಯಾಂಟ್, ಕೊರಳ ಸುತ್ತ ನೀಲಿ ಸ್ಕಾರ್ಫ್ ಕಟ್ಟಿಕೊಂಡಿದ್ದ ಅಂದವಾದ ಯುವಕ. ಅವನೇ ಚಂದ್ರಶೇಖರ್ ಆಜಾದ್. ಅವತ್ತು ದಲಿತರ ಮತ್ತು ಪೊಲೀಸರ ನಡುವೆ ನಡೆದ ಚಕಮಕಿಯಲ್ಲಿ ಡಿವೈಎಸ್ಪಿ ಸಾಹೇಬನಿಗೂ ಲಾತಾ ಬಿದ್ದು ಪೊಲೀಸರೆಲ್ಲ ಓಡಿಹೋದರು.



ಆನಂತರ ಚಂದ್ರಶೇಖರನನ್ನು ಪೊಲೀಸರು ಬಂಧಿಸಿದರಲ್ಲದೆ ಆತನ ವಿರುದ್ಧ ರಾಷ್ಟ್ರೀಯ ರಕ್ಷಣಾ ಕಾಯ್ದೆಯಡಿ ಕ್ರಮ ತೆಗೆದುಕೊಳ್ಳಲು ಮುಂದಾದರು. ದಲಿತರ ಪರ ಹೋರಾಡಿದ್ದಕ್ಕೆ ರಾಷ್ಟ್ರೀಯ ರಕ್ಷಣಾ ಕಾಯ್ದೆಯಡಿ ಕ್ರಮವೇ ಎಂದು ವಿರೋಧಿಸಿದ ಪ್ರಜ್ಞಾವಂತರು ಚಂದ್ರಶೇಖರನ ಪರವಾಗಿ ದೊಡ್ಡ ರ್‍ಯಾಲಿಯನ್ನು ನಡೆಸಿದರು. ಪೊಲೀಸರು ತಪ್ಪಾಗಿ ಚಂದ್ರಶೇಖರನನ್ನು ಬಿಡುಗಡೆ ಮಾಡಿದರು. ಈ ಪ್ರಕರಣದ ನಂತರ ಭೀಮ ಸೇನೆ ಇನ್ನೂ ದೊಡ್ಡದಾಯಿತು. ಚಂದ್ರಶೇಖರ್ ಪ್ರಕಾರ ಇವತ್ತು ಭೀಮಸೇನೆಯಲ್ಲಿ 40,000 ಯುವಕರು ಇದ್ದಾರಲ್ಲದೆ, ಇತರೆ ಏಳು ರಾಜ್ಯಗಳಲ್ಲಿ ಅದರ ವಿಭಾಗಗಳಿವೆ. ಎಲ್ಲಕ್ಕಿಂತ ಮಿಗಿಲಾಗಿ ಭೀಮ ಸೇನೆಯು ಇಂದು ದಲಿತರಲ್ಲಿ ಆತ್ಮವಿಶ್ವಾಸವನ್ನು ಮೂಡಿಸುತ್ತಿದ್ದು ತಮ್ಮ ಮೇಲೆ ದೌರ್ಜನ್ಯ ಎಸಗುವವರನ್ನು ವಿರೋಧಿಸುವ ಛಲ ಸೃಷ್ಟಿ ಮಾಡಿದೆ.

ಈಗ ಕಳೆದ ನಾಲ್ಕೈದು ವಾರಗಳಿಂದ ಭೀಮ ಸೇನೆ ಸುದ್ದಿಯಲ್ಲಿದೆ ಮತ್ತು ಚಂದ್ರಶೇಖರ್ ಗಾಯಬ್ ಆಗಿದ್ದಾನೆ.

ಇದೆಲ್ಲ ಶುರುವಾಗಿದ್ದು ಅಂಬೇಡ್ಕರ್ ಅವರ ಹುಟ್ಟುಹಬ್ಬದ ದಿನದಂದು. ಏಪ್ರಿಲ್ 14 ರಂದು ಶಹರನಪುರ್ ಜಿಲ್ಲೆಯ ಶಬ್ಬೀರ್ಪುರ್ ಹಳ್ಳಿಯ ದಲಿತರು ಅಂಬೇಡ್ಕರ್ ಪ್ರತಿಮೆಯನ್ನು ಸ್ಥಾಪಿಸಲು ಇಚ್ಛಿಸಿದ್ದರು. ಇದನ್ನು ವಿರೋಧಿಸಿದ ಠಾಕೂರರು "ಪ್ರತಿಮೆ ಸ್ಥಾಪಿಸಲು ಸ್ಥಳೀಯ ಆಡಳಿತದ ಅನುಮತಿ ಪಡೆಯಿರಿ" ಎಂದು ಅಡ್ಡಿಪಡಿಸಿದರು. ಇದಾದನಂತರ ಮೇ 5ರಂದು ರಜಪೂತ ರಾಜ ಮಹಾರಾಣಾ ಪ್ರತಾಪನ ಜನ್ಮದಿನ ಬಂತು. ಅಂದು ರಜಪೂತರು ದೊಡ್ಡ ಮೆರವಣಿಗೆಯಲ್ಲಿ ಹೊರಟರು. ಅದಕ್ಕೆ ಅಡ್ಡಿಪಡಿಸಿದ ದಲಿತರು "ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಲು ಸ್ಥಳೀಯ ಆಡಳಿತದ ಅನುಮತಿ ಅಗತ್ಯವಾದರೆ ಈ ಮೆರವಣಿಗೆಗೂ ಅನುಮತಿ ಬೇಕು" ಎಂದು ವಾದಿಸಿದರು. ದಲಿತರ 'ಉದ್ಧಟತನ' ಹೆಚ್ಚಾಯಿತು ಎಂದು ಕೋಪಗೊಂಡ ರಜಪೂತರು ದಲಿತರ ಮನೆಗಳಿಗೆ ಬೆಂಕಿ ಹಚ್ಚಿ ಅವರು ಪೂಜಿಸುವ ರವಿ ದಾಸ್ ಎಂಬ ಸಂತನ ಮಂದಿರವನ್ನೂ ಧ್ವಂಸ ಮಾಡಿದರು.

ಈ ಮಧ್ಯೆ ಇನ್ನೊಂದು ಘಟನೆಯೂ ನಡೆದಿತ್ತು. ಏಪ್ರಿಲ್ 20ರಂದು ಬಿಜೆಪಿ ಸಂಸದ ಸದಕ್ ದುಧಲಿ ಎಂಬ ಹಳ್ಳಿಯಲ್ಲಿ ಅಂಬೇಡ್ಕರ್ ಜಯಂತಿ ಆಚರಿಸಲು ಮುಂದಾದ. ಅದಕ್ಕೆ ಆತ ಭೀಮ ಸೇನೆಯನ್ನೂ ಆಹ್ವಾನಿಸಿದ್ದ. ಆದರೆ ಏಪ್ರಿಲ್ 14ರಂದೇ ಅಂಬೇಡ್ಕರ್ ಜಯಂತಿಯನ್ನು ಆಚರಿಸಿದ್ದ ಬೀಮ ಸೇನೆ ಭಾಗವಹಿಸಲು ನಿರಾಕರಿಸಿತು. ಯಾಕೆಂದರೆ ಬಿಜೆಪಿ ಸಂಸದನ ನಿಜ ಉದ್ದೇಶ ಅಂಬೇಡ್ಕರ್ ಜಯಂತಿ ಆಚರಿಸುವುದಲ್ಲ, ಬದಲಾಗಿ ಸದ್ಯದಲ್ಲೇ ನಡೆಯಲಿರುವ ಶಹರನಪುರ ಮುನಿಸಿಪಲ್ ಚುನಾವಣೆಗೆ ಸಿದ್ಧತೆಯ ಭಾಗವಾಗಿ ಅವತ್ತು ಮುಸ್ಲಿಮರ ವಿರುದ್ಧ ದಲಿತರನ್ನು ಛೂ ಬಿಟ್ಟು ಕೋಮು ಗಲಭೆಯನ್ನು ಮಾಡಿಸುವುದು ಎಂಬುದು ಭೀಮ ಸೇನೆಗೆ ಗೊತ್ತಿತ್ತು. ಅವತ್ತು ಹಾಗೆಯೇ ಆಯಿತು. ಅನುಮತಿ ಇಲ್ಲದಿದ್ದರೂ ಮುಸಲ್ಮಾನರ ಕೇರಿಗೆ ಹೋದ ಚೆಡ್ಡಿಗಳು "ಈ ದೇಶದಲ್ಲಿ ವಾಸಿಸಬೇಕೆಂದರೆ, ಯೋಗಿ ಯೋಗಿ ಎಂದು ಜಪಿಸಬೇಕು" ಎಂಬ ಘೋಷಣೆಗಳನ್ನು ಕೂಗಿದ್ದರು. ನಿರೀಕ್ಷಿಸಿದಂತೆ ಕೋಮುಗಲಭೆ ನಡೆಯಿತು. ಮಾತ್ರವಲ್ಲ ತಮ್ಮೊಂದಿಗೆ ಕೈಜೋಡಿಸದಿದ್ದ ಭೀಮ ಸೇನೆಯ ಬಗ್ಗೆ ಚೆಡ್ಡಿಗಳಿಗೆ ಕೋಪ ಬಂತು.

ಮೇ 9 ರಂದು ಶಬ್ಬೀರ್ಪುರದಲ್ಲಿ ನಡೆದ ದಲಿತರ ಮೇಲಿನ ದಾಳಿಯನ್ನು ಖಂಡಿಸಿ ಶಹರನಪುರದಲ್ಲಿ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು. ಅದು ಭೀಮ ಸೇನೆಯ ನೇತೃತ್ವದಲ್ಲಿ ನಡೆದದ್ದಲ್ಲ, ಆದರೆ ಅವತ್ತು ಜನರನ್ನು ದೊಡ್ಡ ಸಂಖ್ಯೆಯಲ್ಲಿ ಸೇರಿಸುವಲ್ಲಿ ಅದರ ಪಾತ್ರವಿತ್ತು. ಅವತ್ತು ಪೊಲೀಸರು ದಲಿತರ ಪ್ರತಿಭಟನೆಗೆ ಅನುಮತಿ ಇರಲಿಲ್ಲವಾದ್ದರಿಂದ ಜನರು ಸೇರಕೂಡದು ಎಂದು ತಾಕೀತು ಮಾಡಿದರು. ದಲಿತರು ಕೇಳಲಿಲ್ಲ. ಪರಿಣಾಮವಾಗಿ ಪೊಲೀಸರು ಮತ್ತು ದಲಿತರ ನಡುವೆ ದೊಡ್ಡ ಸಂಘರ್ಷ

ಕಂಡಹಾಗೆ



• ಗೌರಿ ಲಂಕೇಶ್

editorlankesh@gmail.com

ನಡೆಯಿತು. ಸುಮಾರು 30 ದಲಿತರನ್ನು ಬಂಧಿಸಲಾಯಿತು. ತನ್ನನ್ನೂ ಪೊಲೀಸರು ಬಂಧಿಸುತ್ತಾರೆಂದು ಅರ್ಥ ಮಾಡಿಕೊಂಡ ಚಂದ್ರಶೇಖರ್ ಅವತ್ತಿನಿಂದ ಭೂಗತನಾಗಿದ್ದಾನೆ. ಈಗ ಆತನ ಮೇಲೆ ರಾಷ್ಟ್ರೀಯ ರಕ್ಷಣಾ ಕಾಯ್ದೆಯಡಿ ಕ್ರಮಕೈಗೊಳ್ಳಲು ನಿರ್ಧರಿಸಿರುವ ಪೊಲೀಸರು ಯಾವ ಪುರಾವೆ ಇಲ್ಲದೆ ಚಂದ್ರಶೇಖರನಿಗೆ ನಕ್ಸಲರ ನಂಟಿದೆ ಎಂದು ಆರೋಪಿಸಿದ್ದಾರೆ.

ವಿಚಿತ್ರವೆಂದರೆ ಈ ಚಂದ್ರಶೇಖರ್ ವಿದ್ಯಾರ್ಥಿಯಾಗಿದ್ದಾಗ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಎಂಬ ಚೆಡ್ಡಿ ಸಂಘಟನೆಯಲ್ಲಿದ್ದ. ಆಗ ಅವನಿಗೆ ಆರೆಸ್ಸೆಸ್‌ನ ಅಸಲಿಯತ್ತು ಅರ್ಥವಾಯಿತು. "ಹಿಂದೂ-ಮುಸ್ಲಿಮ್ ಗಲಭೆ ನಡೆದರೆ ಎಬಿವಿಪಿ ಆ ಸ್ಥಳಕ್ಕೆ ಹಾಜರಾಗುತ್ತಿತ್ತು. ಆದರೆ ದಲಿತರ ಮೇಲೆ ಮೇಲುಜಾತಿಯ ಹಿಂದೂಗಳು ದೌರ್ಜನ್ಯ ನಡೆಸಿದರೆ ಎಬಿವಿಪಿ ಅಲ್ಲಿಗೆ ಬರುತ್ತಲೇ ಇರಲಿಲ್ಲ" ಎನ್ನುತ್ತಾನೆ ಚಂದ್ರಶೇಖರ್. ಆಗ ಅಂಬೇಡ್ಕರ್ ಬರಹಗಳನ್ನು ಓದಲಾರಂಭಿಸಿದ ಚಂದ್ರಶೇಖರ್ ಭೀಮ ಸೇನೆ ಸ್ಥಾಪಿಸಿ ತನ್ನ ಸಮುದಾಯದ ಏಳಿಗೆಗೆ ದುಡಿಯಲು ನಿರ್ಧರಿಸಿದ. ಆತನ ಭೀಮ ಸೇನೆ ಇವತ್ತು ಶಹರನಪುರದಲ್ಲಿ ಹಲವಾರು 'ಶಾಲೆ'ಗಳನ್ನು ನಡೆಸುತ್ತದೆ. ಅಲ್ಲಿ ಕಾಲೇಜು ಮುಗಿಸಿರುವ ದಲಿತ ಯುವಕರು ಶಾಲೆಗಳಲ್ಲಿ ಓದುತ್ತಿರುವ ದಲಿತ ಮಕ್ಕಳಿಗೆ ಪ್ರತಿ ದಿನ ಪಾಠ ಹೇಳಿಕೊಡುತ್ತಾರೆ. ಹಾಗೆಯೇ ಹಿರಿಯ ದಲಿತ ಅಧಿಕಾರಿಗಳು ಯುವ ದಲಿತರಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ತರಬೇತಿ ಕೊಡುತ್ತಾರೆ.


"ಭಾರತಕ್ಕೆ ಅಪಾಯ ಇರುವುದು ಮುಸ್ಲಿಮರಿಂದಲ್ಲ, ಬ್ರಾಹ್ಮಣ್ಯದಿಂದ" ಎನ್ನುವ ಚಂದ್ರಶೇಖರ್ "ಸಂವಿಧಾನವನ್ನು ವಿರೋಧಿಸುವ ಆರೆಸ್ಸೆಸ್ ದೇಶದ್ರೋಹಿಗಳು" ಎನ್ನುತ್ತಾನೆ. "ಸಮಾನ ಶಿಕ್ಷಣ ವ್ಯವಸ್ಥೆ ಮಾತ್ರ ಇಲ್ಲಿನ ಅಸಮಾನತೆಯನ್ನು ಅಳಿಸಲು ಸಾಧ್ಯ", "ಮುಸಲ್ಮಾನರು ಮತ್ತು ದಲಿತರ ನಡುವೆ ಸಾಮಾಜಿಕ ಐಕ್ಯತೆಯನ್ನು ಸಾಧಿಸಬೇಕು", "ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿ ಇರಬೇಕು" ಎನ್ನುತ್ತಾನೆ. ಮಹಿಳಾ ಪರವಾದ ಚಿಂತನೆಯನ್ನು ಹೊಂದಿರುವ ಚಂದ್ರಶೇಖರ್ ತನ್ನ ಅಡ್ಡಹೆಸರು ರಾವಣ ಎನ್ನುತ್ತಾನೆ. ಕಾರಣ ಕೇಳಿದರೆ "ರಾವಣ ಮಹಿಳೆಯರಿಗೆ ರಕ್ಷಣೆ ನೀಡಿದ್ದ. ಆತ ಸೀತೆಯನ್ನು ಮುಟ್ಟಲೂ ಇಲ್ಲ, ತನ್ನ ಸಹೋದರಿ ಶೂರ್ಪನಖಿಗೆ ಆದ ಅವಮಾನಕ್ಕೆ ಸೇಡು ತೀರಿಸಿಕೊಳ್ಳಲು ಯುದ್ಧ ಮಾಡಿದ" ಎನ್ನುತ್ತಾನೆ. "ರಾಮಮಂದಿರವನ್ನು ಅಲ್ಲೇ ನಿರ್ಮಿಸುತ್ತೇವೆ" ಎಂದು ಚೀರಾಡುವವರೇ ಅಧಿಕಾರದಲ್ಲಿ ಇರುವ ರಾಜ್ಯದಲ್ಲಿ 'ರಾವಣ' ನನ್ನ ಅಡ್ಡಹೆಸರು ಎಂದು ಹೇಳುವುದು ಸುಮ್ಮನೆ ಮಾತಲ್ಲ!!


ಸದ್ಯಕ್ಕೆ 30 ವರ್ಷ ಪ್ರಾಯದ ಚಂದ್ರಶೇಖರ್ ಆಜಾದ್ ಭೂಗತನಾಗಿದ್ದಾನೆ. ಆದರೆ ಬರುವ ಭಾನುವಾರ (ಮೇ 21ರಂದು) ದೆಹಲಿಯ ಜಂತರ್‌ಮಂತರ್‌ನಲ್ಲಿ ಪ್ರತ್ಯಕ್ಷನಾಗುತ್ತೇನೆ ಎಂದು ಹೇಳಿಕೆ ಕೊಟ್ಟಿರುವ ಚಂದ್ರಶೇಖರ್ ಅವತ್ತು ಅಲ್ಲಿಗೆ ದಲಿತರು ದೊಡ್ಡ ಸಂಖ್ಯೆಯಲ್ಲಿ ಬರಬೇಕೆಂದು ಕರೆ ಕೊಟ್ಟಿದ್ದಾನೆ.

ಒಟ್ಟನಲ್ಲಿ ನೀಲಿ ಆಗಸದಲ್ಲಿ ಚಂದ್ರಶೇಖರ್ ಆಜಾದ್ ಎಂಬ ಇನ್ನೊಂದು ನಕ್ಷತ್ರ ಪ್ರಜ್ವಲಿಸಲಾರಂಭಿಸಿದೆ. ರೋಹಿತ್ ವೇಮುಲ, ಕನ್ಹಯ್ಯ ಕುಮಾರ್, ಉಮರ್ ಖಾಲಿದ್, ಶೆಹ್ಲಾ ರಶೀದ್ ಮತ್ತು ಚಂದ್ರಶೇಖರ್ ಎಂಬ ಈ ನಕ್ಷತ್ರಗಳು ಎಲ್ಲರಲ್ಲಿ ಭರವಸೆ ಮೂಡಿಸುತ್ತಿವೆ. ■

ಕುಮಟಾ-ಹೊನ್ನಾವರ

ಕುಮಾರಣ್ಣನ ಕರಾರುವಾಕ್ ದಾಳಿಗೆ ದಿಕ್ಕೆಟ್ಟ ದಿನಕರ ಶೆಟ್ಟಿ!


ದಿನಕರ ಶೆಟ್ಟಿ


ಕುಮಾರಸ್ವಾಮಿ


ಉತ್ತರ ಕನ್ನಡದ ರಾಜಕೀಯ ನೈತಿಕ ಅಧಃಪತನದಲ್ಲಿ ಜಾರುತ್ತಿದೆ. ಕಪ್ಪುಹಣವಂತರು, ಕರಾಮತ್ತುಗಾರರು ಮತ್ತು ಯಾವ್ಯಾವುದೋ ಪಕ್ಷದ ಸಾಮರ್ಥ್ಯರನ್ನೆಲ್ಲ ಹೆಕ್ಕಿಹೆಕ್ಕಿ ಬುಟ್ಟಿಗೆ ಹಾಕಿಕೊಳ್ಳುತ್ತಿರುವ ಭಂಡ ಬಿಜೆಪಿ ಭೂಪರಿಗೆ ಜಿಲ್ಲೆಯ ರಾಜಕಾರಣ ಕುಲಗೆಡಿಸಿದ ಕೀರ್ತಿ ಸಲ್ಲಬೇಕು. ಜನಪರ ರಾಜಕಾರಣದ ಪ್ರಾಥಮಿಕ ಆಶಯದ ಅರಿವೇ ಇಲ್ಲದ ದಂಡ-ಪಿಂಡಗಳು ಎದ್ದೆದ್ದು ನೆಗೆಯುತ್ತಿರುವ ಸದ್ದು-ಸಪ್ಪಳ ಜಿಲ್ಲೆಯ ಎಲ್ಲ ಆರು ಅಸೆಂಬ್ಲಿ ಕ್ಷೇತ್ರದಲ್ಲಿ ಮೊಳಗುತ್ತಿದೆ. 2018ರ ಚುನಾವಣೆಗೆ ತರಹೇವಾರಿ ವೇಷ ಕಟ್ಟುತ್ತಿರುವ ಪುಢಾರಿಗಳು ಮೇವಿರುವತ್ತ ಗುಳೆ ಹೊರಟಿರುವುದು ಕರುಣಾಜನಕವಾಗಿದೆ!


ಜಿಲ್ಲೆಯ ರಾಜಕೀಯ ಪಡಸಾಲೆಯಲ್ಲೀಗ ಚಿತ್ರ-ವಿಚಿತ್ರ ವಿಶ್ಲೇಷಣ-ಅಂದಾಜು ಊಹಾಪೋಹಗಳದೇ ಹಾವಳಿ. ಮುಂದಿನ ಆರೆಂಟು ತಿಂಗಳಲ್ಲಿ ಉತ್ತರ ಕನ್ನಡದ ರಾಜಕಾರಣದಲ್ಲಿ ದೊಡ್ಡ ಅಲ್ಲೋಲಕಲ್ಲೋಲವೇ ಆಗಬಹುದೆಂಬ ಚರ್ಚೆ ಬಿರುಸುಗೊಂಡಿದೆ. ಈ ಪ್ರಳಯವೆಂದರೆ ಮತ್ತೇನೂ ಅಲ್ಲ; ಡಾನ್ ದೋಷಪಾಂಡೆ ತನ್ನ ಕುಲಕಂಠೀರವ ಪ್ರಶಾಂತನ ಕಟ್ಟಿಕೊಂಡೇ ಕಾಂಗ್ರೆಸ್‌ಗೆ ಟಾಟಾ ಹೇಳಿ ಬಿಜೆಪಿ ಪಾಲಾಗಲು ಸಮಯ ಸಾಧಿಸುತ್ತಿದ್ದಾನೆಂಬುದು. ದೇಶಪಾಂಡೆಯ ಮೂರು ದಶಕದ ಐತಿಹಾಸಿಕ ದ್ರೋಹ-ದಗಾ-ದಗಲುಬಾಜಿ ಬಲ್ಲವರು ಅಂಥದೊಂದು "ವಿಪ್ಲವ" ಆಗುವ ಅಂದಾಜು ಹಾಕಿದ್ದಾರೆ. ಬಿಜೆಪಿಯ ರೌಡಿ ಎಂಪಿ ಎಂಬ ಅಭಿದಾನದ ಅನಂತಕುಮಾರ್ ಹೆಗಡೆಯಂತೂ ತಾನು ರಾಜ್ಯ ಬಿಜೆಪಿ ಉಪಾಧ್ಯಕ್ಷನಾಗಿರುವುದೇ ಬೇರೆ ಪಕ್ಷದ ಪೊಕ್ಕು-ಜೊಳ್ಳುಗಳನ್ನು ಸೆಳೆದು ಹಡಗು ತುಂಬಿಕೊಂಡು ಯಡ್ಡಿ ಸಂಪುಟದಲ್ಲಿ ಸಚಿವನಾಗಲಿಕ್ಕೆಂಬ ಹೆಡ್ಡ ಲೆಕ್ಕಾಚಾರ ಹಾಕಿರುವುದು ಹಾಸ್ಯಾಸ್ಪದವಾಗಿದೆ.


ಉತ್ತರ ಕನ್ನಡದ ಅಸೆಂಬ್ಲಿ ಕ್ಷೇತ್ರಗಳ ಪೈಕಿ ಕುಮಟಾ-ಹೊನ್ನಾವರದಲ್ಲಿ 'ಆಕಾಲಿಕ' ಕದನ ಕುತೂಹಲ ವಿರ್ಮಿಟ್ಟಿದೆ. ಎಮ್ಮೆಲ್ಲೆ ಆಗುವ ತಲಬು ತಡೆಯಲಾಗದೆ ತತ್ತರಿಸುತ್ತಿರುವ ಪುಂಡ ಪ್ರಚಂಡರು ಬಿಜೆಪಿಗೆ ಲಗ್ಗೆ ಹಾಕುತ್ತಲೇ ಇದ್ದಾರೆ. ಹೀಗಾಗಿ ಕೇಸರಿ ಪಡೆಯಲ್ಲಿ ಶಾಸಕ ಚಟದವರ ಸಂಖ್ಯೆ ದಿನದಿನವೂ ಹೆಚ್ಚಾಗುತ್ತಿದೆ. ಬಿಜೆಪಿಯಲ್ಲಿ ವಲಸಿಗರ ಗೊಂದಲ ಹೆಚ್ಚಾದರಷ್ಟೇ ತನ್ನ ಎಮ್ಮೆಲ್ಲೆ ಕನಸಿನ ಹಿಡನ್ ಅಜೆಂಡಾ ಈಡೇರುತ್ತದೆಂಬ ಸ್ಕೆಚ್ ಹಾಕಿ ಕುಂತಿದ್ದಾನೆ ಅನಂತ್ಮಾಣಿ. ಮಜಾ ಅಂದರೆ, ಬಿಜೆಪಿಯಲ್ಲಿನ ತಲ್ಲಣ-ತಳಮಳದ ಅಡ್ಡ ಪರಿಣಾಮ ಕಾಂಗ್ರೆಸ್ ಮತ್ತು ಜೆಡಿಎಸ್‌ನಲ್ಲೂ ಆಗುತ್ತಿದೆ.

ಬಿಜೆಪಿಯಲ್ಲಿ ಟಿಕೆಟ್‌ಗಾಗಿ ಸಾಲುಗಟ್ಟಿ ನಿಂತಿರುವವರ ಸಂಖ್ಯೆ ಈಗ ಒಂದು ಡಜನ್ ದಾಟಿದೆ. ಮತ್ತೆ ಎಂಪಿ ಆಗುವ ಧೈರ್ಯವಿಲ್ಲದ ಮುಖೇಡಿ ಅನಂತ್ಮಾಣಿ ಚಕ್ರವ್ಯೂಹ ರಚಿಸಿ ಒಬ್ಬೊಬ್ಬರನ್ನಾಗಿ ಟಿಕೆಟ್ ಆಕಾಂಕ್ಷಿಗಳನ್ನು ಅದರೊಳಗೆ ತಳ್ಳಿ ತಾನೇ ಕುಮಟಾ-ಹೊನ್ನಾವರದ ಶಾಸಕನಾಗುವ ಹುನ್ನಾರ ನಡೆಸಿದ್ದಾನೆ. ಇದು ಅರ್ಥವಾಗದ ಅಕ್ಕಿಕಳ್ಳ ನಾಗರಾಜ ನಾಯಕ್, ಕಳ್ಳ ಹಣದ ಸುಬ್ರಾಯ ವಾಳ್ಕೆ, ದಗಲುಬಾಜಿ ದಿನಕರ ಶೆಟ್ಟಿ, ಎಡಬಿಡಂಗಿ ಸೂರಜ್ ಸೋನಿ, ವೆಂಕಟೇಶ್ ನಾಯಕ್, ಸೋರಿಗೆ ಉದ್ಯಮಿ ಪುಟ್ಟ ಹೆಗಡೆ, ಸಜರೀನ್ ಡಾಕ್ಟರ್ ಜಿ.ಜಿ. ಹೆಗಡೆ ವಗೈರೆಗಳು ಕಮಲ ಹಿಡಿಯುವ ಅವಸರದಲ್ಲಿ ಕೆಸರಿಗೆ ಬೀಳುತ್ತಿದ್ದಾರೆ. ಮತ್ತೊಂದೆಡೆ ಬಾಡಿಗೆ ಮಾತುಗಾರ ಸೂಲಿಬೆಲೆ ಬರ್ಕವರ್ತಿ ತಾನು ಹೊನ್ನಾವರದ ಮಣ್ಣಿನ ಮಗನೆನ್ನುತ್ತ ಕೇಶವಕೃಪಾದಲ್ಲೇ ಟಿಕೆಟ್ ಟ್ರ್ಯಾಕ್ಟೀಸ್ ನಡೆಸಿದ್ದಾನೆ. ಬಿಜೆಪಿಯಲ್ಲಿ ದಿನಗಳೆದಂತೆ ನೂಕುನುಗ್ಗಲು ಜೋರಾಗುತ್ತಿರುವುದು ಬಣ್ಣ-ಬಣ್ಣದ ಹಗಲುಕನಸು ಕಾಣುತ್ತ ಆ ಪಾರ್ಟಿ ಸೇರಿದ್ದ ಮಾಜಿ ಶಾಸಕ ದಿನಕರ ಶೆಟ್ಟಿಯ ನಿದ್ದೆಗೆಡಿಸಿ ತಿಂಗಳುಗಳೇ ಕಳೆದುಹೋಗಿದೆ, ಪಾಪ!

ಯಡ್ಡಿಯ ಪರಮಾಪ್ತ ಚೇಲಾ ಬಿ.ಜೆ. ಪುಟ್ಟಸ್ವಾಮಿ ಎಂಬ ಸ್ವಜಾತಿ (ಗಾಣಿಗ) ಬಂಧು, ಬೈಂದೂರಿನ ಸುಕುಮಾರ ಶೆಟ್ಟಿ, ದೇವದುರ್ಗದ ಶಾಸಕ ಶಿವನಗೌಡ ನಾಯಕ್, ಸಂಸದ ಅನಂತ್ಮಾಣಿ... ಮುಂತಾದವರಿಂದ ಲಾಬಿ ಮಾಡಿಸಿ ಬಿಜೆಪಿಗೆ ಸೇರಿದ್ದ ದಿನಕರ ಶೆಟ್ಟಿಯ ಮುಖದಲ್ಲಿ ಮುಂಚಿನ ಉತ್ಸಾಹ, ಲಹರಿ ಇಲ್ಲದಾಗಿದೆ. ಜೆಡಿಎಸ್‌ನಲ್ಲಿ ಏಕಮೇವಾದ್ವಿತೀಯನಾಗಿ ಕುಮಟಾ-ಹೊನ್ನಾವರದಲ್ಲಿ ಮೆರೆಯುತ್ತಿದ್ದ ದಿನಕರನಿಗೆ ಈಗ ಬಿಜೆಪಿಯಲ್ಲಿ ಪರದೇಶಿಯಂತಾಗಿ ಅಂಗಲಾಚುವ ದಯನೀಯ ಸ್ಥಿತಿ ಬಂದಿದೆ. ಜೆಡಿಎಸ್‌ನಲ್ಲಿ ಎಲ್ಲರಿಗೆ 'ಹಾಕುವ' ಸ್ಥಾನದಲ್ಲಿದ್ದ ದಿನಕರ ಬಿಜೆಪಿಯಲ್ಲಿ ಚೆಡ್ಡಿಗಳು ಹಾಕಿದ ತಂಗಳು ತಿನ್ನಬೇಕಾಗಿದೆ. ಟಿಕೆಟ್ ಸಿಗುವ ಭರವಸೆ ಕ್ಷಣ-ಕ್ಷಣವೂ ಕ್ಷೀಣಿಸುತ್ತಿದೆ. ಒಂದೆಡೆ ಮಹಾರಾಷ್ಟ್ರ ಚೆಡ್ಡಿ ಬಳಗದ ವ್ಯವಹಾರಿಕ ಸಖ್ಯ ಹೊಂದಿರುವ ಸುಬ್ಬಾಳ್ಕೆ, ಮತ್ತೊಂದೆಡೆ ಖುದ್ದು ಸೋಲಿಬೆಲೆ ಬರ್ಕ, ಮಗದೊಂದೆಡೆ ಹವ್ಯಕ ಲಾಬಿ, ಇನ್ನೊಂದೆಡೆ ಡೆಡ್ಲಿ ಅನಂತ್ಮಾಣಿಗಳ ನಡುವೆ ಸಿಕ್ಕಿ ಬಿದ್ದಿರುವ ದಿನಕರನ ಪಾಡು ಹೇಳತೀರದಾಗಿದೆ.


ಮಧು ಬಂಗಾರಪ್ಪ


ರಾಘು ಸ್ವಾಮಿ


ಪ್ರದೀಪ್ ನಾಯಕ್

ದಿನಕರ ಶೆಟ್ಟಿಗೆ ಎಲ್ಲಕ್ಕಿಂತಲೂ ಹೆಚ್ಚು ಮಾರಕವಾಗಿರುವುದು ಜೆಡಿಎಸ್‌ನ ಯುವ ಅಧಿನಾಯಕ ಕುಮಾರಸ್ವಾಮಿಯ ಸೇಡು! ತಾನು ಎಷ್ಟೆಲ್ಲ ರಮಿಸಿದರೂ, ಕೇಳಿದಾಗೆಲ್ಲ ಕಾಸು ಕೊಟ್ಟರೂ ಧಿಕ್ಕರಿಸಿ ಜೆಡಿಎಸ್ ಬಿಟ್ಟುಹೋದ ಕೃತಘ್ನ ದಿನಕರನಿಗೆ ಪಾಠ ಕಲಿಸುವ ಹಠಕ್ಕೆ ಕುಮಾರಸ್ವಾಮಿ ಬಿದ್ದಿದ್ದಾರೆ. ದಿನಕರ ಬಿಜೆಪಿ ಸೇರಿದ ಕ್ಷಣವೇ ಆತನನ್ನು ಕುಮಟಾದಲ್ಲಿ ಸೋಲಿಸುವ ಪ್ರತಿಜ್ಞೆ ಮಾಡಿರುವ ಕುಮಾರಸ್ವಾಮಿ ಆಟ ಆರಂಭಿಸಿದ್ದಾರೆ. ಕುಮಟಾ ಮತ್ತು ಹೊನ್ನಾವರದಲ್ಲಿ ಕಳೆದ ವಾರ ಎರಡು ಹಗಲು-ಎರಡು ರಾತ್ರಿ ಕಳೆದಿರುವ ಕುಮಾರಸ್ವಾಮಿ ಜೆಡಿಎಸ್ ಅಡಿಯಿಂದಲೇ ಕಟ್ಟುವ ಕೆಲಸಕ್ಕೆ ಕೈಹಾಕಿದ್ದಾರೆ. ಗ್ರಾಮದರ್ಶನ ಎಂಬ ಕುಮಾರಸ್ವಾಮಿಯ 'ಎಲೆಕ್ಷನ್ ಪ್ರಚಾರ' ಸಭೆಗಳಿಗೆ ದೊಡ್ಡ ಸಂಖ್ಯೆಯಲ್ಲೇ ಜನ ಜಮೆಯಾಗಿದ್ದರು. ಕುಮಟಾ ಮತ್ತು ಹೊನ್ನಾವರ ಭಾಗದಲ್ಲಿ ಗಣನೀಯವಾಗಿರುವ ಗ್ರಾಮ ಒಕ್ಕಲು ಮತ್ತು ಹಾಲಕ್ಕಿ ಒಕ್ಕಲು ಸಮುದಾಯವನ್ನೇ ಗುರಿಯಾಗಿಟ್ಟು ಕುಮಾರಸ್ವಾಮಿ ಪರ್ಯಟನೆ ದಿನಕರನ ನಿರ್ಗಮನದ ನಂತರ ಸ್ಥಳೀಯ ಜೆಡಿಎಸ್ ಖಾಲಿ ಆಗಿಲ್ಲ ಎಂಬುದನ್ನು ಖಾತ್ರಿ ಮಾಡಿದೆ.

ತಾನೆಂದರೆ ಕುಮಟಾದ ಜೆಡಿಎಸ್; ತನ್ನಿಂದಲೇ ಹೊನ್ನಾವರದ ಜೆಡಿಎಸ್ ಎಂಬ ಅಹಂನಲ್ಲಿದ್ದ ದಿನಕರ ಶೆಟ್ಟಿಯನ್ನು ಬೆಚ್ಚಿ ಬೀಳಿಸಿದೆ ಕುಮಾರಸ್ವಾಮಿಯ ಪಟ್ಟುಗಳು. ಬೆಳಗ್ಗೆ 9 ರಿಂದ ರಾತ್ರಿ 9ರ ತನಕ ಬಡವರ-ನೊಂದವರ-ಸಾಮಾಜಿಕವಾಗಿ ಕೆಳಸ್ತರದಲ್ಲಿರುವವರ ಮನೆ-ಮನೆ ಬಾಗಿಲಿಗೆ ಹೋಗಿ ಮಾತಾಡಿಸಿದ ಕುಮಾರಸ್ವಾಮಿ ಹಿಗ್ಗಿಹೀರೆಕಾಯಾಗುವಂಥ ಪ್ರತಿಸ್ಪಂದನವೇ ಸಿಕ್ಕಿದೆ. ರಾಜ್ಯದ ಮಾಜಿ ಸಿಎಂ ಆದರೂ ಯಾವುದೇ ಹಮ್ಮು-ಬಿಮ್ಮು ಇಲ್ಲದೆ ಬಡವರ ಮನೆ ಅಂಗಳ-ಜಗುಲಿಗೆ ಬಂದು ಕೂತಿದ್ದು ಜನ ಮೆಚ್ಚುಗೆ ಪಡೆದಿದೆ. ಹಾಲಕ್ಕಿ ಒಕ್ಕಲಿಗ ಸಮೂಹವನ್ನು ಎಸ್‌ಟಿಗೆ ಸೇರಿಸಲು ಶ್ರಮಿಸುತ್ತೇನೆಂದು ಹೇಳಿದ್ದು ಜಾನಪದ ಕೋಗಿಲೆ ಪದ್ಮಶ್ರೀ ಸುಕ್ರಜ್ಜಿಯಿಂದ 'ಭೇಷ್' ಅನ್ನಿಸಿಕೊಂಡಿದ್ದು ಜೆಡಿಎಸ್‌ನಲ್ಲಿ ಹೊಸ ಚೈತನ್ಯ ಮೂಡಿಸಿದೆ. ಹಾಲಕ್ಕಿಗಳನ್ನು ಎಸ್‌ಟಿಗೆ ಸೇರಿಸಲು ಪ್ರಯತ್ನಿಸುವ ಮಾತು ಆಗಾಗ ಕುಮಾರಸ್ವಾಮಿ ಹೇಳುತ್ತ ಬಂದರೂ ಆತನಿಂದ ಏನೂ ಮಾಡಲಾಗಿಲ್ಲ ಎಂಬುದು ಬೇರೆ ಮಾತಾದರೂ ದಿನಕರನ ಬೆನ್ನಿಗೆ ಇಷ್ಟು ದಿನ ನಿಂತಿದ್ದ ಹಾಲಕ್ಕಿ ಮತ್ತು ಪಟಗಾರ (ಗ್ರಾಮ ಒಕ್ಕಲಿಗ) ಸಮುದಾಯಗಳು ಜೆಡಿಎಸ್ ಬಿಟ್ಟುಹೋಗದಂತೆ ತಡೆ ಹಿಡಿಯಲು ಯಶಸ್ವಿಯಾಗಿದ್ದಾರೆ. ಇದು ದಿನಕರನ ಚಡಪಡಿಕೆ ನೂರ್ಮಡಿಸಿ ಬಿಟ್ಟಿದೆ!!

ಹಾಲಕ್ಕಿ ಗೌಡರು, ಗ್ರಾಮ ಒಕ್ಕಲಿಗರ ಪಟಗಾರರು ಅಷ್ಟೇ ಅಲ್ಲ, ಇತರ ಹಿಂದುಳಿದ ವರ್ಗದವರನ್ನೂ ಕುಮಾರಸ್ವಾಮಿ ಆಕರ್ಷಿಸಿದ್ದಾರೆ. ಇದೊಂಥರಾ ಬದಲಾವಣೆಯ 'ಹವಾ' ಎಬ್ಬಿಸಿದೆ. ಕುಮಾರಸ್ವಾಮಿಯ ಓಡಾಟದಿಂದ ಸ್ಥಳೀಯ ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಆದ ಹಾನಿಯ ಲೆಕ್ಕ ಈ ಹೊತ್ತಲ್ಲಿ ಹಾಕುವುದು ಕಷ್ಟ. ಆದರೆ ದಿನಕರ ಶೆಟ್ಟಿಗೆ ಮಾತ್ರ ದೊಡ್ಡ ಹೊಡೆತ ಕೊಟ್ಟು ಆತನ ಎದೆಗುಂದಿಸಿರುವುದು ಖಂಡಿತ! ತನಗೆ ಕೈಕೊಟ್ಟು ಹೋದ ದಿನಕರ ಶೆಟ್ಟಿ ಬಗ್ಗೆ ಒಂದೇ ಒಂದು ಮಾತಾಡದೆ ಹಳ್ಳಿಗಾಡಿನಲ್ಲಿ ಹಗಲಿರುಳು ತಿರುಗಾಡಿದ ಕುಮಾರಸ್ವಾಮಿ ಮುಂದಿನ ಚುನಾವಣೆಯ ಜೆಡಿಎಸ್ ಅಭ್ಯರ್ಥಿಯನ್ನು ಘೋಷಿಸಿ ಹೋಗಿದ್ದಾರೆ. ದಿನಕರ ಶೆಟ್ಟಿಯ ಅಚ್ಚುಮೆಚ್ಚಿನ ಸಹಚರನಾಗಿದ್ದ ಚಿಪ್ಪಿ ಮಾಫಿಯಾ ಡಾನ್ ಪ್ರದೀಪ್ ನಾಯಕ್ ಹೆಸರನ್ನು ಕುಮಾರಸ್ವಾಮಿ ಆಳೆದು-ಸುರಿದು ಪ್ರಕಟಿಸಿರುವುದು ದಿನಕರ ಶೆಟ್ಟಿಗೆ ಬಿಜೆಪಿ ಕ್ಯಾಂಡಿಡೇಟಾದರೂ ಗಂಡಾಂತರಕಾರಿಯೇ!

ತನ್ನ ಎಲೆಕ್ಷನ್ ಪಟ್ಟು-ಪರಾಕ್ರಮಗಳೆಲ್ಲ ಬಲ್ಲ ಪ್ರದೀಪ್ ನಾಯಕ್‌ನ ಎದುರಿಸುವುದು ದಿನಕರ ಶೆಟ್ಟಿಗೆ ಕಷ್ಟ. ದಿನಕರನ ಶಿಷ್ಯನಾಗಿ ಜೆಡಿಎಸ್ ಸೇರಿದ್ದ ಪದ್ದು ಈಗ ಗುರುವಿಗೇ ಸೆಡ್ಡು ಹೊಡೆವಷ್ಟು ಬೆಳೆದಿರುವುದು ರೋಚಕ ವೃತ್ತಾಂತ. ಅಘನಾಶಿನಿ ನದಿಯ ಮುಖಜ ಪ್ರದೇಶದ ಅಪಾರ ಬೆಲೆಯ ಕಪ್ಪೆ ಚಿಪ್ಪು ಮತ್ತು ಸಿಲಿಕಾ ಸ್ಯಾಂಡನ್ನು ಕದ್ದು ಮಾರಿದ ಪದ್ದು ಉತ್ತರ ಕನ್ನಡದ ಜನಾರ್ದನ ರೆಡ್ಡಿ ಎಂಬಂತೆ ಕೊಬ್ಬಿದ ಪ್ರಚಂಡ ಪುಂಡ. ಹೆಣ್ಣುಬಾಕ ಸ್ವಾಮಿ ರಾಘುನನ್ನು ತೋಳ್ಬಲದ ರಕ್ಷಣೆಯಿಂದ ಗೋಕರ್ಣದಲ್ಲಿ ಪೊ... 'ಪುಣ್ಯ'ವೂ ಈತನಿಗೇ ಸಲ್ಲುತ್ತದೆ! ಹವ್ಯಕರ ಓ... ತನ್ನ ಪಾದಕ್ಕೆ ಬಂದು ಬೀಳುವ ಕುಮಟಾ-ಹೊನ್ನಾ... ವಿವಿಧ ಪಕ್ಷದ ಪುಢಾರಿಗಳಲ್ಲಿ ರಾಘು ಸ್ವಾಮಿ ... ನಂಬುವುದು ಈ ಪದ್ದುವನ್ನು ಮಾತ್ರ. ಇಂಥ ... ನೀಡುತ್ತಿದ್ದ ಹಪ್ತಾ ಹಾಗು ತನ್ನ ರಾಜಕಾರಣದ ಖ... ವೆಚ್ಚ ನಿಭಾಯಿಸುತ್ತಿದ್ದರಿಂದ ದಿನಕರ ಆತನ ದೋ... ದಂಧೆಗೆಲ್ಲ ಶಾಸಕತ್ವದ ರಕ್ಷಣೆ ನೀಡುತ್ತಾ ಹೋದ...

ದಿನಕರ ಶೆಟ್ಟಿಯ ಶಾಸಕಗಿರಿ ಅವಧಿಯಲ್ಲಿ ಗೋ... ಜಿಪಂ ಕ್ಷೇತ್ರದ ಸದಸ್ಯನಾಗಿದ್ದ ಪದ್ದಣ್ಣ 2... ಚುನಾವಣೆಯಲ್ಲಿ ದಿನಕರ ಗ್ರಹಣ ಹಿಡಿದು ಮಾಜಿ... ಆದರೆ ಪದ್ದು ಮಾತ್ರ ಮಿರ್ಜಾನ್ ಕ್ಷೇತ್ರಕ್ಕೆ ವಲಸೆ ಹೋ... ಮತ್ತೆ ಜಿಪಂ ಸದಸ್ಯನಾಗಿ ಗೆದ್ದುಬಿಟ್ಟ. ಆತನ ಕಪ್ಪು ... ಮಹಿಮೆ ಮತ್ತು ಜನರ ನಡುವಿನ ಒಡನಾಟದ ... ಹಾಗಿತ್ತು. ಪದ್ದು ಅದ್ಯಾವ ಪರಿ ಬೆಳೆದನೆಂದರೆ, ... ಮುಖ್ಯ ಕಾರ್ಯದರ್ಶಿಯಾಗಿದ್ದ ರಾಮ್‌ಪ್ರ... ಮನೋಹರನಂಥವರಿಗೆ ಗೋಕರ್ಣ ಬೀಚ್ ರೆಸಾರ್... ಮೇಜುವಾನಿ ಮಾಡಿ ಕಾಂಗ್ರೆಸ್ ಶಾಸಕಿ ಶಾರದಾ ... ಮತ್ತಾಕೆಯ ಪುತ್ರರತ್ನ ರವಿಕುಮಾರ್‌ಗೇ ... ಕೊಡುವಷ್ಟು ಕೀರ್ತಿವಂತನಾಗಿ ಹೋದ! ಇದರಿಂದ ... ಶಾಸಕಿ ಶೆಟ್ಟಿಯಮ್ಮನ ಮಗ ಪದ್ದುನ ಅಕ್ರಮ ದ... ಕಡಿವಾಣ ಹಾಕಿಬಿಟ್ಟ! ಆರ್ಥಿಕವಾಗಿ ಪದ್ದುನ ಸೊರ... ಅದು ತನಗೆ ಮುಂದೆ ಗಂಡಾಂತರವೆಂಬ ದೂರಾಲೋ... ರವಿಯದಾಗಿತ್ತು.

ಪದ್ದು ಕಾಲಾ ಪೈಸಾ ರಾಜಕೀಯದಲ್ಲಿ ... ಪ್ರಭಾವಿಯಾಗಿದ್ದರೂ ಜೆಡಿಎಸ್‌ನಲ್ಲಿ ದಿನಕರನ ಮಿ... ಎತ್ತರಕ್ಕೇರಲು ಆತನಿಗಿರಲಿಲ್ಲ. ದಿನಕರ ಜೆಡಿ... ರಾಜಾಧಿರಾಜನಂತಿದ್ದ. ಅಂಥ ಸ್ವಾತಂತ್ರ್ಯ ಕುಮಾರ... ದೇವೇಗೌಡರು ಆತನಿಗೆ ದಯಪಾಲಿಸಿದ್ದರು. ಕುಮ... ಎರಡು ಜಿಪಂ ಕ್ಷೇತ್ರ ಜೆಡಿಎಸ್ ಗೆದ್ದಿತ್ತು, ಕ... ತಾಪಂ, ಪುರಸಭೆ ಗೆದ್ದುಕೊಂಡಿತ್ತು, ಜೆಡಿಎಸ್‌ನಲ್ಲಿ ... ನಾಯಕತ್ವಕ್ಕೊಂದು ಖದರಿತ್ತು, ಶಾಸಕಿ ಶಾರದಾರ... ನಖರಾದಿಂದ ಜನ ಬೇಸತ್ತಿದ್ದರು.

ಬಿಜೆಪಿಯಲ್ಲಿ ಜನಮನ ಗೆಲ್ಲುವ ಸಾಚಾ ಅಭ್ಯ... ಇರಲಿಲ್ಲ. ಹೀಗಾಗಿ ಮತ್ತೆ ಜೆಡಿಎಸ್‌ನಿಂದ ... ಗೆಲ್ಲುತ್ತಾರೆಂಬುದು ಸಾರ್ವತ್ರಿಕ ಅಭಿಪ್ರಾಯವಾಗಿತ್ತು ... ಚುನಾವಣಾ ಖರ್ಚಿಗೆ ಬೇಕಾದ ಹಣ ಜೆಡಿಎ... ಸಿಗಲಾರದೆಂಬ ಒಂದೇ ಒಂದು ಕಾರಣಕ್ಕೆ ದಿನಕರ... ಪಾಲಾಗಿ ಹೋದ. ಹಣವೆಂದರೆ ಹಪಹಪಿಸುವ ... ತಪ್ಪು ಲೆಕ್ಕಾಚಾರದಿಂದ ಬಿಜೆಪಿ ಸೇರಿ ಸಾಬರ ರ... ಮಾತಾಡುವ ದುರಂತಕ್ಕೆ ತಲುಪಿದ್ದಾನೆ, ಪಾಪ! ಗ... ಸಂಸ್ಕೃತಿಯ ಬಿಜೆಪಿಯಲ್ಲಿ ಮೂಲೆಗುಂಪಾಗಿರುವ ... ಎಂಪಿಯ 'ಕ್ಲಾಸ್'ಗೆ ತತ್ತರಿಸಿ ಹೋಗಿದ್ದಾನೆ. ಕ್ಯಾಂಡಿಡೇಟಾದ್ರೂ ಸಹಿಸಿ ಕೆಲ್ಸ ಮಾಡ್ಬೇಕು.... ಬೇಡ... ಇವರು ಬೇಕು ಅಂತ ಹೇಳೋ ... ಬಿಜೆಪಿಯಲ್ಲಿ ನಂಗೆ ಬಿಟ್ರೆ ಮತ್ತ್ಯಾರಿಗೂ ಇಲ್ಲ... ಹೇಳಿದಂಗೆ ಕೇಳ್ಬೇಕು...." ಎಂದು ಅನ... ಅಬ್ಬರಿಸಿದಾಗೆಲ್ಲಾ "ಯಾಕಾದ್ರೂ ಈ ಪಕ್ಷ ಸೇರಿದೆನೊ..." ಎಂದು ದಿನಕರ ಪರಿತಪಿಸುವಂತಾಗಿದೆ.

ಬಿಜೆಪಿ ಸೇರಿದರೆ ಸಲೀಸಾಗಿ ಶಾಸಕನಾಗು... ಭ್ರಮೆಗೆ ಬಿದ್ದಿದ್ದ ದಿನಕರ ಶೆಟ್ಟಿ ಉತ್ತರ ಕನ್ನಡದ ... ಉಸ್ತುವಾರಿ ಸೊರಬದ ಶಾಸಕ ಮಧು 'ಬಂ' ... ಸಂಬಂಧ ಕೆಡಿಸಿಕೊಂಡಿದ್ದ. ಅಪ್ಪನಂತೆ ಉತ್ತರ ... ಮೇಲೆ ನಿಯಂತ್ರಣ ಸಾಧಿಸುವ ಪ್ಲಾನ್ ಹಾಕಿಕೊ... ಮಧುಗೆ ಸ್ವಜಾತಿ ದೀವರನ್ನು ದಿನಕರ ಕಡೆಗಣಿ... ಕೆರಳಿಸಿತ್ತು. ಹಿಂದೆ ಭಟ್ಕಳದ ಶಿವಾನಂದ ನಾಯ... ಜೆಡಿಎಸ್‌ಗೆ ತಂದು ಶಾಸಕನಾಗಿಸುವ ಮಧು ... ಇದೇ ದಿನಕರ ಮತ್ತು ಹಳಿಯಾಳದ ಸುನಿಲ್ ... ಕಲ್ಲು ಹಾಕಿದ್ದರು. ಶಿವಾನಂದ ನಾಯ್ಕ್, ಜೆಡಿ... ಬೆಳೆದರೆ ತಮ್ಮ ಅಸ್ತಿತ್ವಕ್ಕೆ ಧಕ್ಕೆ ಬರುತ್ತದೆ. ಮಧು ... ಜೋಡಿ ಬಲಾಢ್ಯವಾಗುತ್ತದೆಂಬುದು ದಿನಕರ...


ಕುಮಾರಸ್ವಾಮಿ ಗ್ರಾಮದರ್ಶನ

...ರಗಾಲ್ದ ಕಾರ್ಯಕ್ರಮ ಸಿರಿಗಾಲ್ದಲ್ಲಿ ನಿಲ್ಲಬೇಕು ಕಂಡ್ರ



"ಅಂತೂಇಂತೂ ಸಿದ್ದರಾಮಯ್ಯ ನಾಕೊರ್ಸ ...ಬಸೇಬುಟ್ಟ ಕಣ ಮಾವ" ಎಂದ ಉಗ್ರಿ.

"ನಾಕೊರ್ಸಾಯ್ತೆ! ನಾನೆಲ್ಲೊ ಆರೇಳೊರ್ಸಾಯ್ತು ...ಕಂಡೆ" ಎಂದ ಕಾಳಮಾವ.

"ಇದೇನು ದೊಡಪ್ಪ ಹಿಂಗಂತಿ. ಐದೊರ್ಸಕ್ಕೊಂದು ಯಲಕ್ಷನ್ ಬರುವಾಗ ನೀನ್ಯಂಗೆ ಆರೇಳೊರ್ಸ ಅಂತೀ" ...ದ ವಾಟಿಸ್ಸೆ.

"ಅವುನು ಬಂದು ವಿಟೋದಿನಾಯ್ತು ಅನ್ನಂಗಾಯ್ತಾ ...ಕಂಡ್ರ."

"ಅದ್ಯಾಕಂಗಾಯ್ತು ಅಂತ ನನಿಗ್ಗೊತ್ತು ದೊಡಪ್ಪ ಏನಂದ್ರೆ ... ಅದಲ್ಲ ಯಲ್ರಿಗೂ ಒಂದೇ ತರ ಇರಲ್ಲ. ಒಬ್ಬೊಬ್ಬರಿಗೆ ...ದೊಂದು ಟೈಮಿರತದೆ. ಅದರಲ್ಲಿ ನಿನಿಗೆ ಜಾಸ್ತಿ ...ಮಿರತದೆ."

"ಅದ್ಯಂಗ್ಲ ಒಬ್ಬೊಬ್ಬರಿಗೆ ಒಂದೊಂದು ಟೇಮಿರತದೆ" ...ದಳು ಜುಮ್ಮಿ.

"ಯಂಗೇ ಅಂದ್ರಕ್ಕಾ ಈಗ ಸರಕಾರಿ ನೌಕರನ ಟೈಮು ...ಂಗದೇ? ಹತ್ತೂವರಿಗೆ ಆಫೀಸಿಗೊಯ್ತನೆ. ಫೈಲಿಟಗತನೆ. ...ವ ಬಿಚ್ಚದಕೂ ಮದ್ಲು ಕಾಫಿ ಕುಡಿಯನ ಅನ್ನುಸ್ತದೆ. ...ಗ ಯಲ್ಲ ಎದ್ದು ನಿಧಾನಕೆ ಕ್ಯಾಂಟೀನಿಗೋಗಿ ಅಷ್ಟೇ ...ಧಾನಕ್ಕೆ ಬತ್ತರೆ. ಅಂಗೂಹಿಂಗೂ ಒಂದೂವರಿಯಾಯ್ತು. ...ಟಕ್ಕೆ ಉಪಾಸ ಇದ್ದೊರಂಗೆ ಹಾತೊರಿತರೆ."

"ಅದೇನೊ ನಿಜ ಬುಡು."

"ಊಟಾಯ್ತಾ, ತಿರಗ ನಾಲ್ಕು ಗಂಟೆಗೆ ಕಾಫಿಗೋಯ್ತರೆ. ...ಲ್ಲಿಂದ ಬಂದು ಹೊರಡಕ್ಕೆ ತಯಾರಾಯ್ತರೆ. ಐದು ...ಟ್ಯಾದೇಟಿಗೆ ಓಡ್ತರೆ. ಅಲ್ಲಿಗ್ಗೆ ಆ ನನಮಕ್ಕಳ ಒಂದು ...ಮುಗಿತು. ಸುಮಾರು ಏಳು ಗಂಟೆ ಏಳು ಮಿನಿಟನಂಗೆ ...ಗಿತದೆ. ಆದ್ರಿಂದ ಅವರ ದಿನ ಕಡಮೆ. ಅಂದ್ರೆ ...ಖವಾಗಿರೊರ ಸಮಯ ಓಡ್ತದೆ. ಅದೆ ನಮ್ಮ ಸಮಯ ...ಂದಕೆ ಹೋಗದಿಲ್ಲ."

"ನಿಜ ಕಂಡ್ರ ನೀನೇಳಿದ್ದು."

"ಇನ್ನೂ ಅದೆ ಕೇಳಕ್ಕ ಮದ್ಲಿಗೆ ನೀನೇನು ಮಾಡತಿದ್ದೇ? ...ತ್ತರೆ ಎದ್ದು, ಅಟ್ಟಿ ಬಾಗಲ ಕಸ ಗುಡಿಸಿ, ನೀರ್ಹಾಕಿ, ...ಕರ ಈಚಿಗೆ ಕಟ್ಟಿ, ಕ್ವಟಗೆ ಗುಡಿಸಿ, ಮಂಕರಿಗೆ ಸಗಣಿ ...ಬಿಕಂಡು ಹೋಗಿ, ದರೆ ವಲಕಾಕಿ, ಅಕಡಿಂದ ಬತ್ತ ...ಲ್ಲನೊ, ಸೌದೆನೊ ತತ್ತಿದ್ದೆ. ಅಮಾಲೆ ಅಡಗೆ ಮಾಡಿ, ...ನೂ ಯಮ್ಮೆನೂ ಹಿಡಕಂಡು ಹೋಗಿ ಮೇಸಿಗಂಡು ...ತ್ತಿದ್ದೆ. ಆಗ ನಿನ್ನ ಕಣ್ಣೆದುರಿಗೆ ಹುಟ್ಟಿದ ಸೂರ್ಯ ನಿನ್ನ ...ದ್ರಿಗೆ ಮುಳಗೊನು. ದಿನ ಅನ್ನದು ಒಂದು ಯುಗದಂಗೆ ...ದು. ನಮ್ಮ ದೊಡಪ್ಪನ ಸಮಸ್ಯೆನೂ ಅದೆ. ಯಾರು ...ರ್ಯನ ಜೊತೆ ಕೆಲಸ ಮಾಡ್ತರೊ ಅವುರಿಗೆ ದಿನವೇ ...ಗದಿಲ್ಲ, ಅಂಗಾಗಿ ನಮ್ಮ ದೊಡಪ್ಪನಿಗೆ ಈ ...ದ್ದರಾಮಯ್ಯ ಬಂದು ದಶಕದ ಮ್ಯಾಲಾದಂಗೆ ಕಾಣ್ತಾ ...ದೆ. ಅಲವೆ ದೊಡಪ್ಪ?"

"ನಿನಿಗೇನನ್ನಸ್ತು ಅದೇಳ್ಳ."

"ನನಿಗ್ಯಲ್ಲ ನಾರುಮಲ್ಲಾಗೆ ಕಾಣ್ತವೆ ದೊಡಪ್ಪ. ಆದ್ರೆ ಡ್ರಿಂಕ್ಸ್ ಮಾಡಿ ಮನಿಕಂಡ್ರೆ ಟೈಮು ಪಾಸ್ಯಾಗಿ ಹೋಗಿರತದೆ. ಖಾಲಿ ಹೊಟ್ಟೆಲಿ ದಿನ ದೂಡದೆ ಕಷ್ಟ. ಸಿದ್ದರಾಮಯ್ಯ ಡ್ರಿಂಕ್ಸ್ ರೇಟ್ ಕಡಿಮೆ ಮಾಡ್ಲಿಲ್ಲ, ಆದ್ರಿಂದ ಅವುನಾಡಳಿತ ನನಗಿಷ್ಟ ಇಲ್ಲ."

"ಕಡಮೆ ಮಾಡಕ್ಕೆ ಹ್ವಂಟದ್ದ ಕಣೊ. ಇಪ್ಪತ್ತು ರೂಪಾಯಿಗೊ, ಹದಿನೈದು ರೂಪಾಯಿಗೊ ಒಂದು ಕ್ವಾಟ್ರು ಮಾಡಕ್ಕೆ ವಂಟದ್ದ. ಎಡೂರಪ್ಪನೂ, ಕುಮಾರಣ್ಣನೂ ಈ ಸಿದರಾಮಯ್ಯ ಶರಾಪು ಮಾರೊರ ಜ್ವತೆ ಶಾಮೀಲಾಗಿ ತಿರಗ ಶರಾಪು ತತ್ತಾ ಅವುನೆ ಅಂತ ಕೂಗಾಡಿದ್ರು. ಅದಕವುನು ಸುಮ್ಮನಾದ" ಎಂದ ಉಗ್ರಿ.

"ನೀನೇನೇ ಅನ್ನು, ಎಡೂರಪ್ಪ ಸರಾಪು ನಿಲ್ಸಿ ವಳ್ಳೆದು ಮಾಡಿದ ಕಂಡ್ರ. ಇಲ್ದೆಯಿದ್ರೆ ನಮ್ಮೂರಲ್ಲಿ ಇನ್ನು ಐದಾರು ಜನ ಸತ್ತೋಗರು" ಎಂದಳು ಜುಮ್ಮಿ.

"ಅವುನು ನಿಲ್ಸದ್ರಲ್ಲಿ ಒಂದು ಸೀಕ್ರೆಟಿತ್ತಂತೆ ಕಣಕ್ಕ. ಅವುನ ಏರಿಯಾದಲ್ಲಿ ಸರಾಪು ಮಾರೊರ್ಯಲ್ಲ ಬಂಗಾರಪ್ಪನ ಕಾಲ್ದಲ್ಲಿ ಲೈಸೆನ್ಸ್ ತಗಂಡಿದ್ದ ಈಡಿಗರಂತೆ. ಅದ ನೋಡಿ ಸಿಟ್ಟು ಮಾಡಿಕಂಡು ಎಡೂರಪ್ಪ ಸರಾಪು ನಿಲ್ಸಿದ್ನಂತೆ" ಎಂದ ವಾಟಿಸ್ಸೆ.

"ಅದೇನಾರ ಆಗ್ಲಿ ಕಂಡ್ರ. ಹೆಂಗಸರು ನಿರುಮ್ಮಳಾಗಿ ನಿದ್ದೆ ಮಾಡಂಗೆ ಮಾಡಿದನಲ್ಲ ಅದೇಳು."

"ಅಂಗರೆ ನೀನು ಎಡೂರಪ್ಪನ ಫಾಲೋ ಮಾಡ್ತಿಯಾ?"

"ಕಾಂಗ್ರೆಸ್ಸಲ್ಲಿದ್ದಿನಿ, ಅದ್ಯಾಕ್ಲ ಅವುನ ಜ್ವತೆ ಹೋಗ್ಲಿ?"

"ಆದ್ರು ನೀನು ಮೋದಿ ಬಗ್ಗೆ ಸಾಪ್ಟಾಗಿ ಮಾತಾಡಿದ್ದು ನಮಿಗೆ ತಲುಪ್ಯದೆ ಕಣಕ್ಕ."

"ಮಾತಾಡಿದ್ದಿನಿ ಕಂಡ್ರ. ಅದರಲ್ಲೇನು? ಅವುನು ಸಾವುರ್ರುಪಾಯಿ, ಐನೂರ್ರುಪಾಯಿ ನೋಟ ನಿಲ್ಸಿದ್ನಲ್ಲ ಅದ್ಕೆ ವಳ್ಳೊನು ಅಂದೆ."

"ಇದೇನಕ್ಕ ಸನ್ಯಾಸತ್ವ ತಗಂಡಿರೊ ಬೆಕ್ಕನಂಗೆ ಕಾಣ್ತನವುನು. ಅವುನ್ನ ವಳ್ಳೆ ಮನ್ಸ ಅಂತಿಯಲ್ಲಕ್ಕ?"

"ಯಾರಿಗೂ ಸರಿಯಾಗಿ ದುಡ್ಡು ಕೊಡದೆ ಯಲ್ಲಾನು ಪೆಟಗೆಲಿ ತುಂಬಿಕೊಂಡು ಕುಂತಿದ್ರಂತಲ್ಲಾ, ಅಂತ ನನ ಮಕ್ಕಳ ದುಡ್ಡೇ ನ್ಯಡಿದಂಗೆ ಮಾಡಿದನಲ್ಲಾ, ಅದೇನು ಸದರವಾಗಿ ಕ್ಯಲಸುವುಲ?"

"ಆಹ, ನೀನು ಉತ್ತರ ಪ್ರದೇಸದಲ್ಲಿ ಇರಬೇಕಿತ್ತು ಕಣಕ್ಕ."

"ಅಲ್ಲ ಕಂಡ್ರಾ, ಆ ಕಾಯಿಸಿದ್ದ ಏನು ವಸಿ ಜನಕ್ಕೆ ಅನ್ಯಾಯ ಮಾಡಿದ್ನೆ? ಯಲ್ಲಾರ ದುಡ್ನ ಪೆಟಗೆಲಿ ಮಡಿಕಂಡು ಕುಂತಿದ್ದ, ಅದ ತಿಪ್ಪೆಗೆ ಸುರಿಯಂಗೆ ಮಾಡಿದ್ದ ನೀನೆ ನೋಡಲಿಲವೆ?"

"ತಿಪ್ಪಗೆಲ್ಲಿ ಸುರುದ್ನಕ್ಕ? ಅವುನ ಮ್ಯಾಗಲ ಸೇಡಿಗೆ ಏನೇನೊ ಮಾತಾಡಬ್ಯಾಡ. ಆ ದುಡ್ಡನ್ಯಲ್ಲ ಬ್ಯಾಂಕಿಗೆ ಜಮಾ ವೋಟು ಮಾಡೀ ಗುಲಾಬಿ ಬಣ್ಣದ ನೋಟ ತಂದು ಮಡಿಕಂಡ. ಅಲ್ಲಿಗೇನಾಯ್ತು?"

"ಆ ಟೇಮಲ್ಲಿ ಕಾಳಮಾವ ಐವತ್ತೊರಸದ ಹಿಂದಿನ ನೋಟ ತಂದಿದ್ದ ಅಲವೆ ಮಾವ?" ಎಂದ ಉಗ್ರಿ.

"ಅದೂ ಸೀಗೆಕಾಯಿ ಹುಣಸೆ ಕಾಯಿನ್ಯಲ್ಲ ಸಾಬರಿಗೆ ಮಾರಿದ್ದ ದುಡ್ಡು ಕಂಡ್ರ. ಬೆಳ್ಳೂರು ಸನಾವುಲ್ಲ ಸಾಬಿ ಕೊಟ್ಟ ದುಡ್ಡ ಅಂಗೇ ಮಡಿಗಿಬುಟ್ಟಿದ್ದೆ. ನೋಟು ಅಂದ್ರೆ, ಈಗಿನ ನೋಟ ಮೂರಾಕ ಬೇಕು ಆಟಗಲಿದ್ದೊ. ಜಾಸ್ತಿಯೇನಿಲ್ಲ ಐದಿದ್ದೊ, ಅವ ಬದ್ಲಾಸಕ್ಕೆ ಅಂತ ಬ್ಯಾಂಕಿಗೋದ್ರೆ ಮ್ಯಾನೇಜರು ಬೋದು ಕಳಿಸ್ದ."

"ಬೈಯ್ಯಂಗಿಲ್ಲ ದೊಡಪ್ಪ, ನೀನಾಗ್ಲೆ ನನಿಗೆ ಕಂಪ್ಲೇಟ್ ಮಾಡಿದ್ರೆ ನಾನು ಮ್ಯಾನೇಜರ್‌ನ ವಿಚಾರಿಸಿಕೊಳ್ತಿದ್ದೆ" ಎಂದ ವಾಟಿಸ್ಸೆ.

"ತೆಪ್ಪು ನಮ್ಮದಾಗಿರುವಾಗ ಬೈಸಿಗಳದೆ ಇನ್ನೇನು ಮಾಡೀ?"

"ಏನು ಮಾಡಿದೆ ಆ ನೋಟ?"

"ಮನೆಲೆ ಮಡಗಿದ್ದಿನಿ. ನೀನು ಬೇಕಾರೆ ತಗಂಡೋಗಿ ನ್ಯಡಸು."

"ಬ್ಯಾಡ, ಮೋದಿ ಮೆಚ್ಚಗಂಡಿರೊ ನಮ್ಮ ಜುಮ್ಮಕ್ಕನಿಗೆ ಕೊಡು."

"ಹಳೆ ನೋಟ ಕಂಡೆಂ ಮಾಡಬ್ಯಾಡ ಕಣೊ. ಈಗ್ಲು ನ್ಯಡುಸ್ತಾ ಅವುರಂತೆ" ಎಂದ ಉಗ್ರಿ.

"ಅಲ್ಲಿಗೆ ಮೋದಿ ಪ್ರೋಗ್ರಾಂ ಕ್ವಲಾಪ್ಸಾಯ್ತಲ್ಲಾ ಉಗ್ರಿ. ಏನಪ್ಪಾ ಅಂದ್ರೆ ಆಡಳಿತ ಮಾಡೋರಿಗೆ ಸಣ್ಣತನ, ಸೇಡು ಇರಬಾರ್ದು. ಇದ್ರೆ ದೇಸಕ್ಕೆ ವಳ್ಳೆದಾಗದಿಲ್ಲ."



• ಬಿ.ಚಂದ್ರೇಗೌಡ

ಕಟ್ಟೆಪುರಾಣ

"ಅಂಗರೆ ಮೋದಿಯಿಂದ ವಳ್ಳೆದಾಗದಿಲವೇನ್ಲ"

"ಇಲ್ಲ ಕಣಕ್ಕ. ಅವುನ ಪಾರ್ಟಿಯೋರು, ಅವುನ್ನ ನಂಬಿರೊ ಬಂಡವಾಳದೊರಿಗೆ ವಳ್ಳೆದಾಯ್ತದೆ. ಇನ್ನ ಬಡಬಗ್ಗರು ಯಕ್ಕುಟ್ಟಿ ಹೋಯ್ತರೆ" ಎಂದ ವಾಟಿಸ್ಸೆ.

"ಆ ಲ್ಯಕ್ಕದಲ್ಲಿ ಸಿದರಾಮಯ್ಯ ಬಡಬಗ್ಗರ ಆತಗಂಡ ಕಂಡ್ರ" ಎಂದ ಕಾಳಮಾವ.

"ನಿಜಕಣ ಮಾವ. ಅವುನು ಅನ್ನಭಾಗ್ಯ ಕೊಡದೆಯಿದ್ರೆ ಇಪ್ಹೊತ್ತಿಗೆ ನಮ್ಮೂರಿನ ಅರ್ಧ ಜನ ಬೆಂಗಳೂರಿಗೊಯ್ತಿದ್ರು" ಎಂದ ಉಗ್ರಿ.

"ಮಿಸ್ಟರ್ ಉಗ್ರಿ, ಸಿದ್ದರಾಮಯ್ಯನ ಅನ್ನಭಾಗ್ಯ ಸರಿ. ನಾನೂ ಕೂಡ ಫಲಾನುಭವಿ. ಆದ್ರೆ ನಮ್ಮ ಸೀರಚಿಗಪ್ಪನಿಂದ ಹಿಡದು ನಿಂಗಣ್ಣ, ನಂಜಣ್ಣ, ಕುಚ್ಚಣ್ಣ... ಇವುರ್ಯಲ್ಲ ದನಗಳ ಮಾರಿ ನೇಗಲು ನೊಗನ ಮೂಲಿಗೆ ಮಡಗಿದ್ರು. ಯಾಕೇಳು?"

"ಯರಡೋರ್ಸದಿಂದ ಮಳೆಯಾಗಲಿಲ್ಲ ಅದ್ಕೆ."

"ಸುಳ್ಳು ಕಣೊ. ಬಿಟ್ಟಿ ಅಕ್ಕಿ ಸಿಕ್ಕಿದೇಟಿಗೆ ಬ್ಯಾಸಾಯನೆ ಬುಟ್ಟವುರೆ ಗೊತ್ತೆ."

"ಮುಂದೆ ಇಂತ ಕಾರ್ಯಕ್ರಮ ನಿಂತಾಗ ತಿರಗ ನೇಗಲು ನೊಗ ಹುಡುಕ್ತರೆ ಬುಡ್ರ" ಎಂದ ಕಾಳಮಾವ.

"ಅಂಗಾದ್ರೆ ಸರಿ ದೊಡಪ್ಪ, ಇಂತ ಕಾರ್ಯಕ್ರಮನ ಯಾವಾಗ್ಲು ಮುಂದುವರುಸುಬಾರ್ದು. ಬರಗಾಲ ನೋಡಿಕಂಡು ಜಾರಿ ಮಾಡಬೇಕು. ಸಿರಿಗಾಲ ನೋಡಿಕಂಡು ನಿಲ್ಲುಸಬೇಕು."

"ಸಿದರಾಮಯ್ಯನಿಗೆ ಬರಗಾಲ ಬತ್ತದೆ ಅಂತ ಗೊತ್ತಿದ್ದಕೆ ಅಕ್ಕಿ ಕೊಡಕ್ಕೆ ಸುರುಮಾಡಿದನೇನೊ" ಎಂದಳು ಜುಮ್ಮಿ.

"ಅವುನ ಕಾರ್ಯಕ್ರಮ ಯಲ್ಲ ಚನ್ನಾಗ್ಯವೆ. ಆದ್ರೆ ಅಧಿಕಾರಿಗಳು ಮೈಗಳ್ಳ ನನ್ನ ಮಕ್ಕಳು. ಯಾವ ಸರಕಾರ ಬಂದ್ರು ಏನೂ ಮಾಡಿಕಳಕ್ಕಾಗದಿಲ್ಲ ಅವುರ" ಎಂದ ಉಗ್ರಿ.

"ಅವುರಿಗ್ಯಲ್ಲ ಎಡೂರಪ್ಪಗೆ ಸರಿಕಣೊ. ನೋಡಾಗ್ಲೆ ನಂಜನಗೂಡು, ಗುಂಡ್ಲುಪ್ಯಾಟೇಲಿ ಸರಿಯಾಗಿ ಕ್ಯಲಸ ಮಾಡಿರೊ ಅಧಿಕಾರಿಗಳ ಹೆಸರು ಬರ ಕಂಡಿದ್ದನಂತೆ, ಪವರಿಗೆ ಬಂದ ಕೂಡ್ಲೆ ವಿಚಾರಿಸಿಗತ್ತನಂತೆ. ಅಂತ ಅಧಿಕಾರಿಗಳಿಗೆ ಅವುನೇ ಸರಿ."

"ಅಂಗಂತರೆ ಕಣೊ. ಇದೇ ಸಿದರಾಮಯ್ಯ ಅಂದ್ರೆ ಅಧಿಕಾರಿಗಳು ನಡುಗೊರು. ಅದೇ ಇವತ್ತು ನೋಡು ಇವುನೆ ಅವುರಿಗೆ ಹೊಂದಿಕೊಂಡು ಹೋಗಂಗಾಗ್ಯದೆ."


"ಅವುರಿಗೆ ಹೊಂದಿಕಂಡಿದ್ಕೆ ಅವುನ ಕಾರ್ಯಕ್ರಮ ಮುಲುಕಿಬಿದ್ದವೆ. ಈ ಒಂದೊರ್ಸದಲ್ಲಿ ಅದೇನು ಮಾಡ್ತನೊ ನೋಡನಿರು."

"!?" ■


...ಕನಕಗಿರಿ: ಬಿಜೆಪಿ ಟಿಕೆಟ್‌ಗೆ ತ್ರಿಮೂರ್ತಿ ಕದನ

ಕೊಪ್ಪಳ ಜಿಲ್ಲೆಯ ಏಕೈಕ ಮೀಸಲು ಕ್ಷೇತ್ರ ...ಕಗಿರಿಯಲ್ಲಿ ಬಿಜೆಪಿ ಟಿಕೆಟ್‌ಗಾಗಿ ಬಿಜೆಪಿಯ ರಾಜ್ಯ ...ಸ್‌ಸಿ ಮೋರ್ಚಾದ ಕಾರ್ಯದರ್ಶಿ ಬಸವರಾಜ ...ಸಗೂರ, ಜಿಲ್ಲಾ ಬಿಜೆಪಿ ಎಸ್‌ಸಿ ...ೋರ್ಚಾದ ಕಾರ್ಯದರ್ಶಿ ...ಕುಂದರಾವ್ ಭವಾನಿಮಠ್ ...ತ್ತು ಬೋವಿ ಸಮಾಜದ ...ಬಂಡ ಲಂಕೇಶ್ ಗುಳದಾಳ ...ಧ್ಯೆ ತ್ರಿಕೋಣ ಪೈಪೋಟಿ ...ರುವಾಗಿದೆ.

2008ರಲ್ಲಿ ಕಾಂಗ್ರೆಸ್ ...ಕೆಟ್‌ನಡಿ ಸ್ಪರ್ಧಿಸಿ ಪಕ್ಷೇತರ ...ಗಡಗಿಯ ಎದುರು ಚಿಲ್ಲರೆ ...ಡು ಸಾವಿರ ಮತಗಳಿಂದ ...ೋತಿದ್ದ ಮುಕುಂದರಾವ್ ...ವಾನಿಮಠ್ ಈ ಸಲ ಬಿಜೆಪಿ ...ಳಿಯುದಲ್ಲಿದ್ದಾನೆ. ಹಾಗೆ ...ೋಡಿದರೆ 2008ರಲ್ಲೇ ಆತ ...ಲ್ಲುತ್ತಾನೆ ಎಂದು ಹೇಳಲಾಗುತ್ತಿತ್ತು, ...ಾಕೆಂದರೆ ಬಿಜೆಪಿ ಟಿಕೆಟ್‌ಗೆ ...ಗಳನ್ನು ಬಾಗಲಕೋಟೆಯಿಂದ ...ನಕಗಿರಿಗೆ ಬಂದಿದ್ದ ಶಿವರಾಜ್ ...ಗಡಗಿ ಅವಕಾಶ ತಪ್ಪಿಸಿದ ...ವಿಂದ ಕಾರಜೋಳ ತನ್ನ ...ಧಿಕ ರಾಜಕೀಯ ನಾಯಕನನ್ನು ...ನಾಗಿದ್ದರು. ಹಾಗಾಗಿ ಸಿಡಿದೆದ್ದ ತಂಗಡಗಿ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ. ತನ್ನ ರಾಜಕೀಯ ಗುರು ಮಲ್ಲಿಕಾರ್ಜುನ ಖರ್ಗೆ ಮರ್ಜಿಯಿಂದ ಕಾಂಗ್ರೆಸ್ ಟಿಕೆಟನ್ನು ಸಲೀಸಾಗಿ ಗಿಟ್ಟಿಸಿಕೊಂಡಿದ್ದ ಭವಾನಿಮಠ್‌ಗೆ ಅಂದಿನ ಕಾಂಗ್ರೆಸ್ ಸಂಸದ ಕೆ. ವಿರೂಪಾಕ್ಷಪ್ಪ ಕೈಕೊಡದಿದ್ದರೆ ಖಂಡಿತ ಆತ ಗೆಲ್ಲುತ್ತಿದ್ದ. ತಂಗಡಗಿ ಸ್ಪರ್ಧೆಯಿಂದ ಬಿಜೆಪಿ ಮತಗಳು ಛಿದ್ರಗೊಂಡಿದ್ದವು. ಅದರ ಲಾಭ ಕಾಂಗ್ರೆಸ್‌ಗೆ ಸಿಗಬೇಕಿತ್ತು. ಆದರೆ ಕೆ.ವಿರೂಪಾಕ್ಷಪ್ಪ ಒಳಗಿಂದೊಳಗೇ ತಂಗಡಗಿ ಸಪೋರ್ಟ್ ಮಾಡಿದ್ದರಿಂದ ಕೇವಲ ಎರಡು ಸಾವಿರ ಮತಗಳಿಂದ ತಂಗಡಗಿ ಗೆದ್ದು ಬಂದಿದ್ದ.



ಭವಾನಿಮಠ್




ಬಸವರಾಜ


ಆಮೇಲೂ ಬಿಜೆಪಿ ಸರ್ಕಾರದಲ್ಲಿ ಮಂತ್ರಿಯಾಗಿದ್ದ ತಂಗಡಗಿಯ ದರ್ಪ, ಭ್ರಷ್ಟಾಚಾರಗಳ ವಿರುದ್ಧ ಹೋರಾಟ ಮಾಡುತ್ತ ಪಕ್ಷವನ್ನು ಸಂಘಟಿಸಿದ್ದ ಭವಾನಿಮಠ್‌ಗೆ ಕಾಂಗ್ರೆಸ್ ಪಾರ್ಟಿಯೇ ಕೈಕೊಟ್ಟಿತು. ತಂಗಡಗಿಗೆ ರತ್ನಗಂಬಳಿ ಹಾಸಿ ಪಕ್ಷಕ್ಕೆ ಸೇರಿಸಿಕೊಳ್ಳುವ ಭರದಲ್ಲಿ ಭವಾನಿಮಠ್‌ರನ್ನು ಮೂಲೆಗುಂಪು ಮಾಡಿತು. 2013ರ ಕೈ ಟಿಕೆಟನ್ನೂ ತಂಗಡಗಿ ಕೈಗಿಟ್ಟ ಪಕ್ಷ ಭವಾನಿಮಠ್‌ರನ್ನು ನಿರ್ಲಕ್ಷಿಸಿತು. ಇದರಿಂದ ಸಿಡಿದೆದ್ದ ಭವಾನಿಮಠ್ ಬಿ.ಶ್ರೀರಾಮುಲುನ ಬಿ.ಎಸ್.ಆರ್ ಪಕ್ಷದಿಂದ ಸ್ಪರ್ಧಿಸಿ ಸೋತಿದ್ದ.

ಬದಲಾದ ಪರಿಸ್ಥಿತಿಯಲ್ಲಿ ಬಿಎಸ್‌ಆರ್ ಪಕ್ಷವೇ ಬರ್ಕಾಸ್ತಾದ ಮೇಲೆ ಭವಾನಿಮಠ್ ಕೂಡಾ ಬಿಜೆಪಿ ಸೇರಿಕೊಂಡ. ಮೊನ್ನೆ ನಡೆದ ಜಿಪಂ ಚುನಾವಣೆಯಲ್ಲಿ ತನ್ನ ಮಡದಿ ಭಾಗ್ಯವತಿಯನ್ನು ನವಲಿ ಕ್ಷೇತ್ರದಿಂದ ಗೆಲ್ಲಿಸಿಕೊಂಡ ಭವಾನಿಮಠ್ 2018ರ ಸಮರಕ್ಕೆ ತಾಲೀಮು ನಡೆಸುತ್ತಿದ್ದಾನೆ. ಆದರೆ ಭವಾನಿಮಠ್‌ಗೆ ಅಡ್ಡಗಾಲು ಆಗಿರೋದು ಯಡ್ಡಿಯ ಪರಮ ಶಿಷ್ಯ ಬಸವರಾಜ ದಡೆಸುಗೂರ.

ಮೂಲತಃ ರಾಯಚೂರಿನ ಸಿಂಧನೂರಿನವನಾದ ಬಸವರಾಜ ದಡೆಸಗೂರ ಬಿಜೆಪಿಯ ಅಂಗಳದಲ್ಲಿ ಗುರುತಿಸಿಕೊಂಡಾತ. ಕಳೆದ ಬಾರಿ ತನ್ನ ಹೆಂಡತಿಯನ್ನು ರಾಯಚೂರ ಜಿಲ್ಲಾ ಪಂಚಾಯತಿ ಅಧ್ಯಕ್ಷೆಯಾಗಿಸಿದ್ದ ಅಷ್ಟರಮಟ್ಟಿಗೆ ಪ್ರಭಾವಶಾಲಿ. ಇಂಥಾ ಬಸವರಾಜ ಕನಕಗಿರಿಗೆ ಎಂಟ್ರಿಕೊಟ್ಟು ನೀರಿನಂತೆ ಹಣ ಚೆಲ್ಲಾಡಿ ರಾತ್ರೋರಾತ್ರಿ ಫುಲ್ ಫೇಮಸ್ ಆಗಿದ್ದಾನೆ. ಯಡ್ಡಿ ಕೆಜೆಪಿ ಕಟ್ಟಿದಾಗ ಆತನ ಹಿಂದೆ ಹೋಗಿದ್ದ ದಡೆಸುಗೂರ 2013ರ ಚುನಾವಣೆಯಲ್ಲಿ ಕನಕಗಿರಿಯ ಕೆಜೆಪಿ ಅಭ್ಯರ್ಥಿಯಾಗಿದ್ದ. ಯಡ್ಡಿಯ ಕಾರಣಕ್ಕೆ ಕನಕಗಿರಿಯ ಲಿಂಗಾಯತರು ಇಡಿಯಾಗಿ ದಡೆಸುಗೂರನ ಬೆಂಬಲಕ್ಕೆ ನಿಂತಿದ್ದರು. ಆ ಎಲೆಕ್ಷನ್‌ನಲ್ಲಿ ಬಿಎಸ್‌ಆರ್ ಪಾರ್ಟಿಯಿಂದ ಸ್ಪರ್ಧಿಸಿದ್ದ ಭವಾನಿಮಠ್ 28 ಸಾವಿರ ಮತ ಕೀಳದಿದ್ದರೆ ಆತನೇ ಗೆಲ್ಲುತ್ತಿದ್ದ. ಕಾಂಗ್ರೆಸ್‌ನ ತಂಗಡಗಿ ವಿರುದ್ಧ ಕೇವಲ 5 ಸಾವಿರ ಮತಗಳ ಅಂತರದಿಂದ ಸೋತ ಬಸವರಾಜನಿಗೆ ತನ್ನ ಗುರು ಯಡ್ಡಿಯೇ ರಾಜ್ಯಾಧ್ಯಕ್ಷನಾಗಿರುವುದು ಪ್ಲಸ್ ಪಾಯಿಂಟ್. ಅದೇ ವಿಶ್ವಾಸದಲ್ಲಿ ಆತ ಕ್ಷೇತ್ರದ ತುಂಬಾ ಓಡಾಡುತ್ತಿದ್ದಾನೆ.



ಶಿವರಾಜ್ ತಂಗಡಗಿ




ವಿರೂಪಾಕ್ಷಪ್ಪ

ಈ ಇಬ್ಬರ ನಡುವೆ ಲಂಕೇಶ ಗುಳದಾಳ ಬಿಜೆಪಿ ಟಿಕೆಟ್‌ಗಾಗಿ ಕಸರತ್ತು ನಡೆಸುತ್ತಿದ್ದಾನೆ. ಈತನಿಗೆ ಪ್ಲಸ್ ಪಾಯಿಂಟ್ ಆಗಿರೋದೆ ಜಾತಿ. ಬಸವರಾಜ್ ಮತ್ತು ಮುಕುಂದರಾವ್ ಇಬ್ಬರೂ ಮಾದಿಗ ಜನಾಂಗಕ್ಕೆ ಸೇರಿದವರು. ಹಾಲಿ ಕಾಂಗ್ರೆಸ್ ಶಾಸಕ ತಂಗಡಗಿ ಬೋವಿ ಜನಾಂಗಕ್ಕೆ ಸೇರಿದವ. ಇದನ್ನೇ ನೆಪ ಮಾಡಿಕೊಂಡ ತಂಗಡಗಿ ನಾವು ವಡ್ಡರು ಜಗಲಿ ಕಟ್ಟುವವರು, ಅವರಿಬ್ಬರು ಮಾದಿಗರು ಮನೆ ಕಟ್ಟುವವರು ಎಂಬ ಸ್ಪೃಶ್ಯ-ಅಸ್ಪೃಶ್ಯ ಗಿಮಿಕ್ ರಾಜಕಾರಣ ಮಾಡುತ್ತಿದ್ದಾನೆ. ಅಂತಹವನಿಗೆ ಎದಿರೇಟು ಕೊಡಬೇಕೆಂದರೆ ಅವನದೇ ಬೋವಿ ಜನಾಂಗಕ್ಕೆ ಸೇರಿದ ತನಗೆ ಟಿಕೆಟ್ ಕೊಡಬೇಕು ಅನ್ನೋದು ಲಂಕೇಶ್ ಗುಳದಾಳನ ವಾದ. ಈತನ ಹೆಂಡತಿಯೂ ಜಿಪಂ ಸದಸ್ಯೆಯಾಗಿದ್ದು ಬಸವರಾಜ ದಡೆಸುಗೂರ ಮತ್ತು ಭವಾನಿಮಠ್‌ರಂತೆ ಹೊರಗಿನವನಾಗಿರದೆ ಇದೇ ಕನಕಗಿರಿ ಕ್ಷೇತ್ರದವನಾಗಿರೋದು ಲಂಕೇಶ್ ಗುಳದಾಳನ ಇನ್ನೊಂದು ಪ್ಲಸ್ ಪಾಯಿಂಟ್. ರಾಜ್ಯದಲ್ಲಿ ಬಿಜೆಪಿಗೆ ಬಿಜೆಪಿಯೇ ಭಿನ್ನಮತದ ಕುಲುಮೆಯಲ್ಲಿ ಕೊತಕೊತ ಕುದಿಯುತ್ತಿರುವಾಗ ಕನಕಗಿರಿಯ ಟಿಕೆಟ್ ಯಾರಿಗೆ ಸಿಗುತ್ತೊ ಸಿಗಲ್ವೊ ಗೊತ್ತಿಲ್ಲ. ಆದರೆ ಈ ಮೂವರು ತಮ್ಮದೇ ಲೆಕ್ಕಾಚಾರದಲ್ಲಿ ಕಸರತ್ತು ನಡೆಸುವುದನ್ನು ಮಾತ್ರ ಬಿಟ್ಟಿಲ್ಲ.

■ ಸ.ಶರಣಪ್ಪ ಪಾಟೀಲ್ ಕರಮುದಿ

ಮೈಸೂರು: ಜೆಡಿಎಸ್‌ಗೆ ಹುಣಸೂರು ಟಿಕೆಟ್ ಸಂಕಟ



ಜಿ.ಟಿ. ದೇವೇಗೌಡ


ಎಚ್.ವಿಶ್ವನಾಥ್ ಜೆಡಿಎಸ್ ಸೇರುವುದು ಬಹುತೇಕ ನಿಕ್ಕಿಯಾಗಿದೆ. ಜೆಡಿಎಸ್ ಅವರಿಗಾಗಿ ಹುಣಸೂರು ಕ್ಷೇತ್ರವನ್ನು ಮೀಸಲಿಡುವುದೂ ಅಷ್ಟೇ ಗಟ್ಟಿಯಾಗಿದೆ. ಆದರೆ ವಿಶ್ವನಾಥ್ ಮತ್ತು ಜೆಡಿಎಸ್ ನಡುವೆ ಟು-ವೇ ಪ್ರೇಮಪ್ರಸಂಗದಷ್ಟು ಸಲೀಸಾಗಿ ನಡೆಯುತ್ತಿದ್ದ ಪ್ರಕರಣ ಇದೀಗ ಜಿ.ಟಿ. ದೇವೇಗೌಡರ ಎಂಟ್ರಿಯಿಂದ ಟ್ರಯಾಂಗಲ್ ಲವ್‌ಸ್ಟೋರಿಯಂತಾಗಿರೋದು ಜೆಡಿಎಸ್ ದಿಗ್ಗಜರ ತಲೆ ಬಿಸಿ ಮಾಡಿದೆ. ಯಾಕೆಂದರೆ ಪಕ್ಕಾ ಫ್ಯಾಮಿಲಿ ರಾಜಕಾರಣಿಯಾದ ಚಾಮುಂಡೇಶ್ವರಿ ಕ್ಷೇತ್ರದ ಎಂಎಲ್‌ಎ ಜಿ.ಟಿ. ದೇವೇಗೌಡರಿಗೆ ತಮ್ಮ ಮಡದಿಯನ್ನು ಜಿಲ್ಲಾ ಪಂಚಾಯತ್ ಮೆಂಬರ್ ಮಾಡಿದರೂ ಅದ್ಯಾಕೋ ಸಮಾಧಾನವಿಲ್ಲ, ಹಾಗಾಗಿ ಮಕ್ಕಳನ್ನೂ ಎಂಎಲ್‌ಎ ಮಾಡುವ ಮಹದಾಸೆ ಅವರದ್ದು. ಅದಕ್ಕೆಂದೇ ಮಗ ಜಿ.ಡಿ. ಹರೀಶ್ ಗೌಡನನ್ನು ಹುಣಸೂರು ಕ್ಷೇತ್ರದಿಂದ ಕಣಕ್ಕಿಳಿಸಲು ಸಕಲ ಸಿದ್ಧತೆ ಮಾಡಿಕೊಂಡಿದ್ದರು. ಆದರೆ ಯಾವಾಗ ಸಿದ್ದು ಮೇಲೆ ಮುನಿಸಿಕೊಂಡ ಎಚ್.ವಿಶ್ವನಾಥ್ ಜೆಡಿಎಸ್‌ಗೆ ಬರುತ್ತಾರೆ, ಹಾಗೆ ಬಂದ ವಿಶ್ವನಾಥ್‌ರಿಗೆ ಹುಣಸೂರಿನ ಟಿಕೆಟ್ ಕೊಡಲು ಪಕ್ಷ ಸಿದ್ಧವಾಗಿದೆ ಅನ್ನೋ ವಿಚಾರ ಗೊತ್ತಾಯಿತೊ ಅವತ್ತಿಂದ ಬಂಡಾಯದ ಬಾವುಟ ಬಿಸಾಡುತ್ತಿದ್ದಾರೆ. ಕಾಂಗ್ರೆಸ್‌ನಲ್ಲಿ ತನಗೆ ಗೌರವ ಇಲ್ಲ ಎಂಬುದಾಗಿ ಗೋಣಗಾಡಿ ದೇವೇಗೌಡ್ರು-ಕುಮ್ಮಿಯ ನೊಗ ಹೊರಲು ಸಜ್ಜಾಗಿದ್ದ ಎಚ್.ವಿಶ್ವನಾಥ್‌ರಿಗೆ ಇದರಿಂದಾಗಿ ಆರಂಭದಲ್ಲೇ ಅಪಶಕುನ ಎದುರಾದಂತಾಗಿದೆ.

ಇನ್ನು ಹದಿನೈದು ದಿನಗಳ ಒಳಗೆ ವಿಶ್ವನಾಥ್‌ರು ಜೆಡಿಎಸ್ ಸೇರ್‍ತಾರೆ, ಅದರ ನಂತರ ಅವರನ್ನು ಅನುಸರಿಸಿ ಇನ್ನೂ ಆರೇಳು ಶಾಸಕರು ಜೆಡಿಎಸ್‌ಗೆ ಬರ್‍ತಾರೆ ಎಂಬುದಾಗಿ ಎಚ್.ಡಿ.ಕೋಟೆ ಶಾಸಕ ಚಿಕ್ಕಮಾದು ಪತ್ರಿಕಾಗೋಷ್ಠಿ ನಡೆಸಿ ಮನೆ ಸೇರುತ್ತಿದ್ದಂತೆಯೇ ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ಅಧ್ಯಕ್ಷ ಎಂದೇಳಿಕೊಳ್ಳುವ ಕೆಂಡಗಣ್ಣ ಎಂಬ ಆಸಾಮಿ ಇನ್ನೊಂದು ಪತ್ರಿಕಾಗೋಷ್ಠಿ ನಡೆಸಿ ಜಿ.ಟಿ.ಡಿಯವರ ಮಗ ಜಿ.ಡಿ.ಹರೀಶ್‌ಗೌಡನನ್ನೇ ಹುಣಸೂರು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿ ಘೋಷಿಸಬೇಕು ಅಂತ ಆಗ್ರಹಿಸುತ್ತಾನೆ. ಇತ್ತ ಮೈಸೂರು ಜೆಡಿಎಸ್ ಭಿನ್ನಮತ ಶಮನಗೊಳಿಸುವುದಕ್ಕೆಂದು ಸ್ವತಃ ದೇವೇಗೌಡರೇ ಮೈಸೂರು ನಾಯಕರ ಸಭೆ ಕರೆದರೆ ಅದಕ್ಕೆ ಜಿ.ಟಿ.ದೇವೇಗೌಡ ಮತ್ತವರ ಬೆಂಬಲಿಗರು ಚಕ್ಕರ್ ಹೊಡೆಯುತ್ತಾರೆ. ಅತ್ತ ಬೂತ್ ಮಟ್ಟದ ಸಮಾವೇಶಕ್ಕೆಂದು ಮೈಸೂರಿಗೆ ಬಂದಿಳಿಯುವ ಕುಮಾರಸ್ವಾಮಿಯನ್ನು ಕಾರ್ಯಕರ್ತರೇ ಮುತ್ತಿಗೆ ಹಾಕಿ ಹುಣಸೂರು ಟಿಕೆಟನ್ನು ಹರೀಶ್‌ಗೌಡನಿಗೆ ನೀಡುವಂತೆ ಒತ್ತಾಯಿಸುತ್ತಾರೆ. ಸಿಟ್ಟಿಗೆದ್ದ ಸ್ವಾಮಿ ತಮ್ಮದೇ ಕಾರ್ಯಕರ್ತ ಕಂ ಹುಣಸೂರು ತಾಲ್ಲೂಕು ಪಂಚಾಯ್ತಿ ಉಪಾಧ್ಯಕ್ಷ ಪ್ರೇಮ್ ಕುಮಾರನ ಕೆನ್ನೆಯ ಮೇಲೆ ಕಾಂಗ್ರೆಸ್‌ನ 'ಹಸ್ತ'ದ ಗುರುತು ಮೂಡುವಂತೆ ಬಾರಿಸುತ್ತಾರೆ. ಇವಿಷ್ಟೂ ಮೈಸೂರು ಜೆಡಿಎಸ್‌ನಲ್ಲಿರುವ ತಲ್ಲಣದ ಸ್ಯಾಂಪಲ್‌ಗಳು, ಜೊತೆಗೆ ವಿಶ್ವನಾಥ್‌ರಿಗೆ ಜೆಡಿಎಸ್‌ನೊಳಗೆ ಕಾದಿರುವ 'ಸ್ವಾಗತ' ಕಮಾನುಗಳು!

ಜೆಡಿಎಸ್ ನೆರಳಲ್ಲಿ ಫ್ಯಾಮಿಲಿ ಪೊಲಿಟಿಕ್ಸ್

ಜೆಡಿಎಸ್ ಅಂದ್ರೇನೆ ಕುಟುಂಬ ರಾಜಕಾರಣದ ಕವಲು ಅಂತ ಜನ ಮಾತಾಡಿಕೊಳ್ಳುತ್ತಾರೆ. ಹಾಸನದ ಕುಟುಂಬ ರಾಜಕಾರಣಕ್ಕೆ ಬೇಸತ್ತೇ ಸಿದ್ದರಾಮಯ್ಯ, ಎಂ.ಪಿ. ಪ್ರಕಾಶ್‌ರಂತಹ ಹಲವು ಘಟಾನುಘಟಿಗಳು ಪಕ್ಷದಿಂದ ಕಾಲ್ಕಿತ್ತದ್ದು. ವರಿಷ್ಠರ ಆ ಸುಳಿಯನ್ನು ಚಾಚೂತಪ್ಪದೆ ಪಾಲಿಸಿಕೊಂಡು ಬರುತ್ತಿರೋದು ಚಾಮುಂಡೇಶ್ವರಿ ಕ್ಷೇತ್ರದ ಎಂಎಲ್‌ಎ ಜಿ.ಟಿ.ದೇವೇಗೌಡರು.


ದೇವೇಗೌಡ


ಕುಮಾರಸ್ವಾಮಿ


ತಾವು ಶಾಸಕನಾಗಿ ಠಳಾಯಿಸುತ್ತಿರೋದು ಸಾಕಾಗದೆ ತನ್ನ ಮನೆಮಂದಿಯನ್ನೆಲ್ಲ ಅಧಿಕಾರದ ಗದ್ದುಗೆಯಲ್ಲಿ ಕೂರಿಸಬೇಕೆನ್ನುವ ತುಡಿತ ಅವರದ್ದು. ಈಗಾಗಲೇ ತಮ್ಮ ಮಡದಿಯನ್ನು ಜಿಲ್ಲಾ ಪಂಚಾಯತ್ ಮೆಂಬರ್ ಮಾಡಿರುವ ಅವರು ಮಗ ಜಿ.ಡಿ. ಹರೀಶನನ್ನು ಮೈಸೂರು ಡಿಸಿಸಿ ಬ್ಯಾಂಕ್ ನಿರ್ದೇಶಕನಾಗಿಸಿದ್ದಾರೆ. ಇದೀಗ ಜಿಟಿಡಿಗೆ ಅದೇ ಹರೀಶನನ್ನು ವಿಧಾನಸೌಧದಲ್ಲಿ ತಮ್ಮ ಪಕ್ಕ ಕೂರಿಸಿಕೊಳ್ಳುವ ತುರಿಕೆ ಶುರುವಾಗಿದೆ. ಹಾಗಂತ ತಮ್ಮ ಕ್ಷೇತ್ರವನ್ನೇ ಮಗನಿಗೆ ತ್ಯಾಗ ಮಾಡುವ ಧಾರಾಳತನಕ್ಕೆ ಅವರು ಸಿದ್ಧರಿಲ್ಲ, ಮಗನಿಗೋಸ್ಕರ ಒಂದು ಕ್ಷೇತ್ರಕ್ಕಾಗಿ ಹುಡುಕಾಟ ನಡೆಸಿದಾಗ ಅವರ ಕಣ್ಣಿಗೆ ಬಿದ್ದದ್ದೇ ಹುಣಸೂರು ಕ್ಷೇತ್ರ.

ಎಚ್.ಡಿ.ಕೋಟೆ ಕ್ಷೇತ್ರಕ್ಕೆ ಕಣ್ಣು ಹಾಕಲು ಅಲ್ಲಿ ಹಾಲಿ ಶಾಸಕ ಚಿಕ್ಕಮಾದು ಗಟ್ಟಿಯಾಗಿ ಬೇರೂರಿ ಕೂತಿದ್ದಾರೆ. ತಿ.ನರಸೀಪುರ, ನಂಜನಗೂಡುಗಳು ಮೀಸಲು ಕ್ಷೇತ್ರಗಳು. ಇನ್ನು ಕೆ.ಆರ್.ನಗರ ಕ್ಷೇತ್ರವಂತೂ ಸಾ.ರಾ.ಮಹೇಶ್ ಬಿಗಿ ಹಿಡಿತದಲ್ಲಿದೆ. ಪಿರಿಯಾಪಟ್ಟಣದಲ್ಲಿ ಕಾಂಗ್ರೆಸ್ ಶಾಸಕ ವೆಂಕಟೇಶ್‌ರ ಹವಾ ಇದೆ. ಅದಕ್ಕಿಂತಲೂ ಹೆಚ್ಚಾಗಿ ಕಳೆದ ಎಲೆಕ್ಷನ್‌ನಲ್ಲಿ ಕೇವಲ ಎರಡು ಸಾವಿರ ಮತಗಳ ಅಂತರದಿಂದ ಗೆಲುವು ಬಿಟ್ಟುಕೊಟ್ಟ ಜೆಡಿಎಸ್ ಹುರಿಯಾಳು ಕೆ.ಮಹದೇವ್ ಅಡ್ಡಿಯಾಗಲಿದ್ದಾರೆ. ಮಹದೇವ್ ಗೆಲ್ಲುವ ಕುದುರೆ ಅಲ್ಲದಿದ್ದರೂ ಟಿಕೆಟ್ ತಪ್ಪಿದ ಜಿದ್ದಿಗೆ ಜಿಟಿಡಿ ಮಗನನ್ನು ಮಕಾಡೆ ಮಲಗಿಸುವಷ್ಟು ಓಟ್ ಬ್ಯಾಂಕನ್ನು ತಮ್ಮ ಕಬ್ಜಾದಲ್ಲಿಟ್ಟುಕೊಂಡಿದ್ದಾರೆ. ಹಾಗಾಗಿ ಉಳಿದದ್ದು ಹುಣಸೂರು ಮಾತ್ರ. ಅಲ್ಲಿ ಜೆಡಿಎಸ್‌ನ ಗಟ್ಟಿಯಾದ ಯಾವ ಮುಖವೂ ಇಲ್ಲ, ಸಾಲದ್ದಕ್ಕೆ ಜಿಟಿಡಿಯವರ ಸ್ವಂತ ಕ್ಷೇತ್ರ.

ಹುಣಸೂರಿನಲ್ಲಿ ಹಾಲಿ ಕಾಂಗ್ರೆಸ್‌ನ ಎಚ್.ಪಿ. ಮಂಜುನಾಥ್ ಶಾಸಕರಾಗಿದ್ದಾರೆ. ಅವರನ್ನು ಮಣಿಸುವುದು ಅಷ್ಟು ಸುಲಭವಲ್ಲದಿದ್ದರೂ ಅಸಾಧ್ಯವೇನಲ್ಲ, ಒಂದೊಮ್ಮೆ 2018ರ ಎಲೆಕ್ಷನ್‌ನಲ್ಲಿ ಹರೀಶ್‌ಗೌಡ ಸೋತರೂ, ಅವನಿಗೋಸ್ಕರ ಒಂದು ಕ್ಷೇತ್ರವನ್ನು ಪರಮನೆಂಟ್ ಮಾಡಿದಂತಾಗುತ್ತೆ, ಮುಂದೆ ಆತನನ್ನು ಗೆಲ್ಲಿಸಿಕೊಳ್ಳೋದು ಕಷ್ಟವಲ್ಲ. ಇಂತದೇ ಲೆಕ್ಕಾಚಾರದಲ್ಲಿ ಕಳೆದ ಮೂರು ವರ್ಷದಿಂದ ಜಿಟಿ ದೇವೇಗೌಡರು ತಮ್ಮ ಮಗನ ಪ್ರಭಾವವನ್ನು ಅಲ್ಲಿ ನಾಟಿ ಮಾಡುತ್ತಲೇ ಬಂದಿದ್ದರು. ಹುಣಸೂರಿನ ಯಾವುದೇ ಕಾರ್ಯಕ್ರಮಕ್ಕೆ ಹೋದರೂ ಮಗ ಹರೀಶ್‌ಗೌಡನನ್ನು ಜೊತೆಗೆ ಕರೆದುಕೊಂಡು ಹೋಗುತ್ತಿದ್ದರು. ವೇದಿಕೆ ಮೇಲೆ ಮಗ ರಾರಾಜಿಸುವಂತೆ ನೋಡಿಕೊಳ್ಳುತ್ತಿದ್ದರು. ತಮ್ಮನ್ನು ಕಾಣಲು ಬರುತ್ತಿದ್ದ ಜನರನ್ನು ಮಗನತ್ತ ತಿರುಗಿಸಿ ಮುಗುಮ್ಮಾಗಿ ಕುಳಿತು ಕೊಳ್ಳುತ್ತಿದ್ದರು. ಹರೀಶ್ ಗೌಡನ ಹುಟ್ಟುಹಬ್ಬ ಬಂದರೆ ಸ್ಥಳೀಯ ಪತ್ರಿಕೆಗಳ ಪುಟದ ತುಂಬ ಮಗ ರಾರಾಜಿಸುವಂತೆ ನೋಡಿಕೊಳ್ಳುತ್ತಿದ್ದರು. ಆತ ಭಾಗವಹಿಸುತ್ತಿದ್ದ ಸಣ್ಣಪುಟ್ಟ ಕಾರ್ಯಕ್ರಮವೂ ದೊಡ್ಡ ಸುದ್ದಿಯಾಗುವಂತೆ ಮಾಡುತ್ತಿದ್ದರು. ಮುಂದಿನ ಎತ್ತರಕ್ಕೆ ಏಣಿಯಾಗುವಂತೆ ಆತನನ್ನು ಡಿಸಿಸಿ ಬ್ಯಾಂಕ್ ನಿರ್ದೇಶಕನನ್ನಾಗೂ ಪ್ರತಿಷ್ಠಾಪಿಸಿದ್ದರು. ಒಟ್ನಾರೆ ಮುಂದಿನ ಎಲೆಕ್ಷನ್‌ಗೆ ಹುಣಸೂರಿನಿಂದ ಕಣಕ್ಕಿಳಿಸಲು ಸಕಲ ಸನ್ನದ್ಧರಾಗಿದ್ದರು. ಅಂತವರಿಗೆ ವಿಶ್ವನಾಥ್‌ರ ಆಗಮನ ಇನ್ನಿಲ್ಲದಂತ ಶಾಕ್ ಕೊಟ್ಟಿದೆ.

ಪ್ರಜ್ವಲಿಸಲಿಲ್ಲ ರೇವಣ್ಣ


ಜಿಟಿ ದೇವೇಗೌಡರು ಮಗ ಹರೀಶನನ್ನು ಹುಣಸೂರಿನಲ್ಲಿ ಪ್ರತಿಷ್ಠಾಪಿಸಬೇಕೆಂದು ಹೆಣಗಾಡಿದಷ್ಟೂ


ಹೆಚ್. ವಿಶ್ವನಾಥ್

ವಿಘ್ನಗಳು ಎದುರಾಗುತ್ತಲೇ ಬಂದಿವೆ. ಇದೀ ಮೈಸೂ
ಇದೆ ಸಲೀಸು ಕ್ಷೇತ್ರ ಅಂತ ಜಿಟಿಡಿಯವರು ತಾಲಿ
ಶುರು ಮಾಡಿದ ನಂತರ ಅದೇ ಕ್ಷೇತ್ರ ಹಲವರ
ಕುಕ್ಕುತ್ತಿದೆ. ಈಗ ಭುಗಿಲೆದ್ದಿರುವ ವಿಶ್ವನಾಥ್ ವಿವಾದ
ಮುನ್ನ ಎಚ್.ಡಿ.ರೇವಣ್ಣನವರ ಪುತ್ರ ಪ್ರ
ಹುಣಸೂರಿನಿಂದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸ
ಎನ್ನುವ ಸುದ್ದಿ ಒಂದಷ್ಟು ದಿನ ಜಿಟಿಡಿಯವರ ನಿ
ಹಾಳು ಮಾಡಿತ್ತು, ಅದಕ್ಕೆ ತಕ್ಕಂತೆ ಅಪಾರ ರಾಜಕೀ
ಮಹತ್ವಾಕಾಂಕ್ಷೆ ಹೊಂದಿರುವ ದೊಡ್ಡಗೌಡರ
ಭವಾನಮ್ಮನ ಮಗ ಪ್ರಜ್ವಲ್ ಕೂಡಾ ಹುಣಸೂ
ಕಾರ್ಯಕ್ರಮಗಳಲ್ಲಿ ಮುಖ ತೋರಿಸುತ್ತಾ ಗಾಳಿಸ
ಸದ್ದಾಗಿದ್ದರು. ಆದರೆ ಆ ಸುದ್ದಿ ಜಿಟಿಡಿಯವರಿಗಿಂತ
ಗಾಬರಿ ಹುಟ್ಟಿಸಿದ್ದು ಖುದ್ದು ಕುಮಾರಸ್ವಾಮಿಗೆ. 'ಈಗಾ
ಜನ ಜೆಡಿಎಸ್ ಎಂದರೆ ಕುಟುಂಬದ ಪಕ್ಷ,
ಅಧಿಕಾರವನ್ನು ಒಂದೇ ಕುಟುಂಬ ಅನುಭವಿಸುತ್ತೆ
ಆಡಿಕೊಳ್ಳುತ್ತಿದ್ದಾರೆ. ಈಗ ಪ್ರಜ್ವಲ್‌ಗೆ ಟಿಕೆಟ್ ನೀ
ಜನ ಅಂದುಕೊಂಡದ್ದು ನಿಜವಾಗುತ್ತದೆ. ಅದಕ್ಕೊ
ಮುಂದಿನ ಎಲೆಕ್ಷನ್‌ನಲ್ಲಿ ನಾನು ಮತ್ತು ರೇವಣ್ಣ
ನಮ್ಮ ಕುಟುಂಬದ ಯಾರಿಗೂ ಟಿಕೆಟ್ ಇಲ್ಲ'
ಘೋಷಿಸಿದರು.

ಜಿಟಿಡಿಗೆ ಇದ್ದ ಆತಂಕವನ್ನು ಕುಮಾರಸ್ವಾಮಿ
ಜಾಲಾಗಿ ಬಗೆಹರಿಸಿದರೋ ಅಥವಾ ಜಿ.ಟಿ.ದೇವೇಗ
ಕುಮಾರಸ್ವಾಮಿ ಆ ರೀತಿ ಹೇಳುವಂತ ವಾತಾ
ಸೃಷ್ಟಿಸಿದರೋ ಒಟ್ಟಿನಲ್ಲಿ ರೋಗಿ ಬಯಸಿದ್ದೂ
ಅನ್ನ ವೈದ್ಯ ಹೇಳಿದ್ದು ಹಾಲು ಅನ್ನ ಎಂಬಂತಾ
ಒಂದು ಕಂಟಕ ಬಗೆ ಹರಿಯಿತು ಎಂದು ನಿಟ್ಟು
ಬಿಟ್ಟಿದ್ದ ಜಿ.ಟಿ.ದೇವೇಗೌಡರಿಗೆ ಈಗ ವಿಶ್ವನಾಥ್ ರೂ
ಆತಂಕ ಮತ್ತೆ ವಕ್ಕರಿಸಿಕೊಂಡಂತಾಗಿದೆ. ಇದೇ ಕ
ಜಿಟಿ ದೇವೇಗೌಡರು ಮೈಸೂರು ಭಾಗದ ಎಲ್ಲ ಜೆಡಿ
ಶಾಸಕರು ಹಾಗೂ ಮಂಡ್ಯ ಸಂಸದ ಸಿ.ಎಸ್.ಪುಟ್ಟ
ಮೇಲೆ ಮುನಿಸಿಕೊಂಡಿದ್ದಾರೆ. ಇವರೆಲ್ಲ ವಿಶ್ವನಾಥ್
ಎಡತಾಕಿ ದುಂಬಾಲು ಬೀಳದಿದ್ದರೆ ಆ ಕಾಂಗ್ರೆಸ್ ಕ
ಇಷ್ಟು ಬೇಗ ಜೆಡಿಎಸ್ ಸೇರುತ್ತಿರಲಿಲ್ಲ, ಸೇರಿ
ಹುಣಸೂರು ಟಿಕೆಟ್ ಕೊಟ್ಟರೆ ಮಾತ್ರ ಎಂಬ
ಹಾಕುವಷ್ಟು 'ಪವರ್'ಫುಲ್ ಆಗುತ್ತಿರಲಿಲ್ಲ ಅನ್
ಜಿಟಿಡಿಯವರ ವಾದ. ಈಗಾಗಲೇ ಯಡ್ಡಿ-ಈಶು ಕದನ
ಬಿಜೆಪಿ, ಕೆಪಿಸಿಸಿ ಅಧ್ಯಕ್ಷ ಕುರ್ಚಿಯ ಬೇಗುದಿ
ಕಾಂಗ್ರೆಸ್ಸು ಭೀಕರ ಭಿನ್ನಮತಕ್ಕೆ ತುತ್ತಾಗಿವೆ. ಈಗ ಹುಣ
ಕದನ ಜೆಡಿಎಸ್ಸನ್ನು ಎಲ್ಲಿಗೆ ತಂದು ನಿಲ್ಲಿಸುತ್ತೋ
ನೋಡಬೇಕು.


ಪ್ರಜ್ವಲ್ ರೇವಣ್ಣ


ಜಿ.ಡಿ. ಹರೀಶ್

ದಿಕ್ಕೆಟ್ಟ ದಿನಕರ

04 ◀◀

ಜೋಡಿಯ ಆತಂಕವಾಗಿತ್ತು. ಒಟ್ಟಿನಲ್ಲಿ ದೀವರು ಹೆಚ್ಚಿರುವ ಕುಮಟೆಯಲ್ಲಿ ಮಧು ಪ್ರಭಾವ ಬೆಳೆಯದಂತೆ ತಂತ್ರ ದಿನಕರ ಮಾಡುತ್ತಲೇ ಇದ್ದ. ಇದನ್ನು ಬಳಸಿಕೊಂಡು ಲೇವಾದೇವಿ ಧೀರನಾದ ಗುಜು ನಾಯ್ಕ ಮತ್ತು ಭಾಸ್ಕರ ಪಟಗಾರ ಆಟ ಆಡಿದರು. ದಿನಕರನನ್ನು ಮಧು ನಂಬದಂತೆ ಮಾಡಿದರು. ಸಾಕ್ಷಾತ್ ಕುಮಾರಸ್ವಾಮಿಯೇ ರಾಜಿಗೆ ಪ್ರಯತ್ನಿಸಿದ್ದರು. ಅದಾಗಲೇ ದಿನಕರನ ಒಂದು ಕಾಲು ಬಿಜೆಪಿಯಲ್ಲಿತ್ತು.

ಈಗ ಬಿಜೆಪಿ ಮತ್ತು ಜೆಡಿಎಸ್ ಎರಡರಲ್ಲೂ ಹೊಸ ಪಾತ್ರಗಳ ನವೀನ ಪ್ರಸಂಗ ಶುರುವಾಗಿದೆ. ಬಿಜೆಪಿಯ ಎಮ್ಮೆಲ್ಲೆ ಪಾತ್ರಧಾರಿಯಾಗುವ ನಟ ಭಯಂಕರರಿಗೆ ಟಿಕೆಟ್ ಸಿಗುವುದೇ ಖಾತ್ರಿಯಿಲ್ಲದೆ ತೊಳಲಾಡುತ್ತಿದ್ದಾರೆ. ಇತ್ತ ಜೆಡಿಎಸ್‌ನಲ್ಲಿ ಪಡ್ಡೆ ಪ್ರತಿಸ್ಪರ್ಧಿಯೇ ಇಲ್ಲದ ಏಕಮೇವಾದ್ವಿತೀಯ ಕ್ಯಾಂಡಿಡೇಟಾಗಿ ಅವತರಿಸಿದ್ದಾನೆ. ಆತ ತಾಪಂ ಅಧ್ಯಕ್ಷ ಪಟಗಾರ ತಾಪಂ ಸದಸ್ಯ ಈಶ್ವರ ನಾಯ್ಕ, ಮಂಜುನಾಥ ಪಟಗಾರ, ಹೊನ್ನಾವರ ಏರಿಯಾದ ಹೊಸ ಹುಡುಗರನ್ನು ಕಟ್ಟಿಕೊಂಡು 'ಕೋಳಿ ಪಾರ್ಟಿ' ಮೂಲಕವೇ ಜನರ ಒಲವು ಗಳಿಸುವ ಯೋಚನೆ-ಯೋಜನೆ ಹಾಕಿಕೊಂಡಿದ್ದಾನೆ. ಕುಮಾರಸ್ವಾಮಿ ಕುಮಟಾ-ಹೊನ್ನಾವರಕ್ಕೆ ಬಂದಾಗ ಗ್ರಾಮ ಒಕ್ಕಲಿಗರ (ಪಟಗಾರ) ಸಮುದಾಯದಲ್ಲಿ ಸಂಚಲನ ಆಗಿದ್ದು ಜೆಡಿಎಸ್ ಚಿಗುರುವ ಸಂಕೇತ ಬಿತ್ತರಿಸಿದೆ. ಈ ಪಟಗಾರರು ದೇವೇಗೌಡ-ಕುಮಾರಸ್ವಾಮಿಯ ಕಟ್ಟಾ ಬೆಂಬಲಿಗರು, ಬುಡಕಟ್ಟು ಗ್ರಾಮ ಒಕ್ಕಲಿಗರು ಶುದ್ಧ ಒಕ್ಕಲಿಗ ದೇವೇಗೌಡ-ಕುಮಾರಸ್ವಾಮಿಯನ್ನು ತಮ್ಮ ರಕ್ತ ಬಂಧು ನಾಯಕಾಗ್ರೇಸರೆಂದೇ ಸ್ವೀಕರಿಸಿದ್ದಾರೆ. ಇದು ದಿನಕರನ ಗೆಲುವಿನ ಹಿಂದಿನ ಗುಟ್ಟು. ಈಗ ಪಟಗಾರರ ಬೆಂಬಲ ಇಲ್ಲದೆ ದಿನಕರ ಬಿಜೆಪಿಯಿಂದಲೂ ಗೆಲ್ಲುವುದು ಕಷ್ಟ ಎಂಬ ವಿಶ್ಲೇಷಣೆಗಳು ನಡೆಯುತ್ತಿವೆ.

ಆದರೆ ಕೇಸರಿ ಪಕ್ಷಕ್ಕೆ ದಿನಕರನಷ್ಟು ಸಮರ್ಥ ಸ್ಪರ್ಧಾಳು ಮತ್ತೊಬ್ಬ ಸಿಗಲಾರ. ಆ ತಾಕತ್ತು ಸಾಕ್ಷಾತ್ ಗೂಂಡಾ ಎಂಪಿ ಅನಂತ್ಕಾಮಣಿಗೂ ಇಲ್ಲ, ದಿನಕರನ ಬಿಟ್ಟರೆ ಗಾಯತ್ರಿ ಗೌಡರೇ ಶಕ್ತಿಶಾಲಿ. ಉಳಿದ ನಾಗರಾಜ್ ನಾಯಕ್, ಸೂರಜ್ ಸೋನಿ, ಜಿ.ಜಿ. ಹೆಗಡೆ, ಪುಟ್ಟ ಹೆಗಡೆ.... ವಗೈರೆಗಳೆಲ್ಲ ಲಾಟ್-ಪುಟ್‌ಗಳೇ. ಆದರೆ ದಿನಕರನಿಗೆ ಬಿಜೆಪಿ ಚಾನ್ಸ್ ಕೊಡುತ್ತದಾ? ಟಿಕೆಟ್ ಸಿಕ್ಕರೂ ಗೆಲ್ಲುವುದು ಸಾಧ್ಯವಾ? ಬಿಜೆಪಿಯೊಳಗಿನ ಟಿಕೆಟ್ ಸಿಗದವರು ಆತನ ಕಾಲು ಎಳೆಯುದೇ ಬಿಟ್ಟಾರಾ? ಎಲೆಕ್ಷನ್ ಗೆಲ್ಲುವ ಕುಕಲಾಪಂಡಿತನಾದ ಪ್ರದೀಪ್ ನಾಯಕ್ ನಯ-ವಿನಯ-ಕಾಸು ಹಂಚುವ ಚಾಕಚಕ್ಯತೆ ಎದುರು ಜಿಪುಣ ದಿನಕರ ಹೋರಾಡಲು ಸಾಧ್ಯವಾ? ಎಂಬಿತ್ಯಾದಿ ಪ್ರಶ್ನೆಗಳು ಬಿಜೆಪಿ ಬಿಡಾರದಲ್ಲೀಗ ಚರ್ಚೆಯಾಗುತ್ತಿದೆ.

ಒಂದಂತೂ ಖರೆ. ಕುಮಾರಸ್ವಾಮಿ ಬಂದು-ಹೋದ ಮೇಲೆ ಕುಮಟಾ ಕ್ಷೇತ್ರದಲ್ಲಿ ಜೆಡಿಎಸ್‌ಗೆ ಕಳೆ ಬಂದಿದೆ. ಇನ್ನೆರಡು ಬಾರಿ ಹೀಗೇ ಆತ ಬಂದುಹೋದರೆ ಜೆಡಿಎಸ್ ಪ್ರಬಲ ಪೈಪೋಟಿ ಕೊಡುವುದು ಖಂಡಿತ. ಕುಮಾರಸ್ವಾಮಿಯ ಕುಮಟೆ ಭೇಟಿಯ ದೃಷ್ಟಿ ಬೊಟ್ಟೆಂದರೆ ಆತ ಗೋಕರ್ಣದಲ್ಲಿ ಕ್ಯಾಂಪು ಹೂಡಿದ್ದ ಕಳಂಕಿತ ಸ್ವಾಮಿ ರಾಘು ಮಾಣಿಯ ಕಾಲಿಗೆ ಕೈ ಹೊಡೆದು ಬಂದಿದ್ದು! ರಾಘುನ ಪುಂಡ ಪಡೆಯ ದಂಡನಾಯಕ ಪದ್ದುನ ಮಾತು

ಕೇಳಿ ಕುಮಾರಸ್ವಾಮಿ ಕಚ್ಚೆ ಹರುಕನ ಕಾಣಲು ಹೋದ
ಅಥವಾ ಹಳೆ ಒಡನಾಟ ಹತ್ತಿರವೇ ಇದ್ದ ಸ್ವಾಮಿ
ಸೆಳೆಯಿತೋ? ಒಟ್ಟಿನಲ್ಲಿ ಡ್ಯಾಮೇಜಂತೂ ಜೆಡಿ
ಆಗಿದೆ. ರಾಘುನ ಹವ್ಯಕ ಸಂಕುಲ ಜೆಡಿಎಸ್‌ಗೆ
ಹಾಕಲು ಸಾಧ್ಯವೇ ಇಲ್ಲ, ರಾಘುನ ಮಂತ್ರಾಕ್ಷತ
ತಾಕತ್ತೂ ಇಲ್ಲ. ಜೆಡಿಎಸ್ ಬೆಂಬಲಿಸುವ ಹಿಂ
ವರ್ಗದವರಿಗೆ ಸ್ತ್ರೀ ಸಖ್ಯ ಸುಖಸಂತೃಪ್ತ ರಾಘು
ಬಗ್ಗೆ ಅಸಹ್ಯ ಮೂಡಿದೆ.

ಕುಮಟಾ-ಹೊನ್ನಾವರ ಕ್ಷೇತ್ರದ ಬಿಜೆಪಿ
ಜೆಡಿಎಸ್‌ನ ಚುನಾವಣಾ ರಾಜಕಾರಣದ ಕುತೂ
ಫ್ಯಾಕ್ಟರ್ ಈ ಕಪಟ ಸನ್ಯಾಸಿ ರಾಘು. ಆತ
ಧರ್ಮಕಾರಣದ ಬಿಜೆಪಿಗೆ ಬೆಂಬಲಿಸುತ್ತಾನಾ?
ಗೋಕರ್ಣದಲ್ಲಿ ಅಡಿಗಡಿಗೆ ಕಾಪಾಡುವ ಜೆಡಿಎಸ್
ಪದ್ದುಗೆ ಮತ ಹಾಕಿಸುತ್ತಾನಾ? ಷಡ್ಯಂತ್ರ
ರಾಘುಗಿದು ಬಿಡಿಸಲಾಗದ ಒಗಟಾಗಿದೆ! ರಾಘು-
ಗುರು-ಶಿಷ್ಯತ್ವದ ಅಸಲಿಯತ್ತು ಚುನಾವಣೆ ಹೊತ್ತಿಗೆ
ಬೀಳೋದು ಗ್ಯಾರಂಟಿ!!

■ ವರದಿ

ತುಮಕೂರು: ಸ್ಮಾರ್ಟ್ ಸಿಟಿಯ ಟಿಕೆಟ್‌ಗೆ ಲಾಬಿ ಜೋರು



ತುಮಕೂರು ನಗರ ವಿಧಾನಸಭಾ ಕ್ಷೇತ್ರದ ...ಕಾರಣ ಮೊದಲಿನಿಂದಲೂ ವಿಶೇಷ ಗಮನ ...ಯುತ್ತಲೇ ಬಂದಿದೆ. ಯಾಕೆಂದರೆ ಇಲ್ಲಿ ಪಕ್ಷನಿಷ್ಠೆ ... ಸಂಘಟನೆ, ಹಿರಿಯ ಕಾರ್ಯಕರ್ತ ಎಂಬ ಯಾವ ...ನದಂಡಗಳೂ ಇಲ್ಲದೆ ಹಣವಂತ ವಹಿವಾಟುದಾರರಿಗೆ ...ಕೆ ಹಾಕುವುದು ಮೂರೂ ಪಕ್ಷಗಳ ಖಯಾಲಿಯಾಗಿದೆ. ...ಗೆ ಗೆದ್ದು ಬಂದವರು ತಮ್ಮ ಅಧಿಕಾರವನ್ನು ಒಂದು ...ಕ್ಷಮವಾಗಿ ಬಳಸಿಕೊಂಡು ತಮ್ಮ ವ್ಯಾಪಾರ, ವಹಿವಾಟು, ...ಾ ಸಂಸ್ಥೆಗಳನ್ನು ಉದ್ಧಾರ ಮಾಡಿಕೊಳ್ಳುತ್ತಾರೆಯೇ ವಿನಃ ...ಅಭಿವೃದ್ಧಿಯತ್ತ ತಿರುಗಿಯೂ ನೋಡುವುದಿಲ್ಲ. ಸಿಲಿಕಾನ್ ...ಗೆ ತುಂಬಾ ಸನಿಹದಲ್ಲಿರೋದರಿಂದ ರಿಯಲ್ ...ಸ್ಟೇಟ್‌ನಿಂದ ಮೊದಲ್ಗೊಂಡು ಸಕಲಷ್ಟು ಭ್ರಷ್ಟ ದಂಧೆಗಳು ...ಲ್ಲಿ ದಟ್ಟವಾಗಿಯೇ ಕದಲಾಡುತ್ತವೆ. ಅದರಲ್ಲೂ ಈಗ ...ತುಮಕೂರು ಸ್ಮಾರ್ಟ್ ಸಿಟಿಯಾಗಿ ಆಯ್ಕೆಯಾಗಿರೋದರಿಂದ ...ಲ್ಲಿನ ಟಿಕೆಟ್‌ಗೆ ಎಲ್ಲಿಲ್ಲದ ಬೇಡಿಕೆ ಬಂದುಬಿಟ್ಟಿದೆ. ...ಕಷ್ಟು ಹಣದ ಸೂಟ್‌ಕೇಸ್ ಹಿಡಿದು ಪಕ್ಷಗಳ ಬಾಗಿಲು ...ಮುಂದೆ ಕ್ಯೂ ನಿಂತಿದ್ದಾರೆ. ಇನ್ನು ಬೇರೆಬೇರೆ ಕ್ಷೇತ್ರದಲ್ಲಿ ...ರುವಂತಹವರು ಈ ಕ್ಷೇತ್ರದಲ್ಲಿ ತಮ್ಮ ಮಕ್ಕಳಿಗೆ, ...ಕುಟುಂಬಸ್ಥರಿಗೆ ಟಿಕೆಟ್ ಕೊಡಿಸಲು ಹಿರಿಯ ಮುಖಂಡರ ...ತ್ತ ಗಿರಕಿ ಹೊಡೆಯುತ್ತಿದ್ದಾರೆ.

ಆಡಳಿತಾರೂಢ ಕಾಂಗ್ರೆಸ್, ಇದೇ ಮೊದಲನೆ ಬಾರಿ ...ಶಾಸಕರಾಗಿ ಆಯ್ಕೆಯಾಗಿರುವ ರಫೀಕ್ ಅಹಮದ್‌ರನ್ನೇ ...ತ್ತೊಮ್ಮೆ ಕಣಕ್ಕಿಳಿಸಲು ಸಜ್ಜಾಗಿದೆ. ಆದರೆ ಆಡಳಿತ-...ವಿರೋಧಿ ಅಲೆಯ ಕಾರಣಕ್ಕೆ ಅಹಮದ್‌ರನ್ನು ಬೇರೆ ...ಕ್ಷೇತ್ರಕ್ಕೆ ಸ್ಥಳಾಂತರಿಸಿ ಹೊಸಬರಿಗೆ ಟಿಕೆಟ್ ನೀಡಬೇಕು ...ಎಂಬ ವಾದವೂ ಕೇಳಿಬರುತ್ತಿದೆ. ಅಲ್ಲದೆ ಕೆಲ ಹಿರಿಯ ...ಕಾಂಗ್ರೆಸ್ ಮುಖಂಡರು ತಮ್ಮ ಮಕ್ಕಳನ್ನು ಈ ಕ್ಷೇತ್ರದಿಂದ ...ಕಣಕ್ಕಿಳಿಸುವ ಯತ್ನ ನಡೆಸುತ್ತಿದ್ದು, ಆಕಾಂಕ್ಷಿಗಳ ಪಟ್ಟಿ ಉದ್ದವಾಗುವ ಸಂಭವವೂ ಉಂಟು. ಇಂಥಾ ಯತ್ನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಟಿ.ಬಿ.ಜಯಚಂದ್ರರು ಮುಂದಿದ್ದಾರೆ ಎನ್ನಲಾಗುತ್ತಿದೆ. ಅವರು ಮಗ ಸಂತೋಷ್‌ನನ್ನು ತುಮಕೂರು ನಗರದ ಅಭ್ಯರ್ಥಿಯಾಗಿಸಲು ಉತ್ಸಾಹದಲ್ಲಿದ್ದಾರಂತೆ.

ಇನ್ನು ಬಿಜೆಪಿಯ ಯಡ್ಡಿ-ಈಶು ಬ್ರಿಗೇಡ್ ಕಾಳಗಕ್ಕೆ ತುಮಕೂರು ನಗರವೇ ಕೇಂದ್ರಸ್ಥಾನವಾಗಿದೆ. ಯಾಕೆಂದರೆ ಈಶ್ವರಪ್ಪನ ಮುಖ್ಯ ಬ್ರಿಗೇಡ್ ಸಭೆಗಳೆಲ್ಲ ನಡೆಯುವುದು ಸೊಗಡು ಶಿವಣ್ಣನ ಮನೆಯಲ್ಲೆ. ಹಾಗಾಗಿ ಇಲ್ಲಿಯೂ ಯಡ್ಡಿ ಬಣ, ಈಶು ಬಣ ಮತ್ತು ತಟಸ್ಥ ಚೆಡ್ಡಿ ಬಣ ಎಂಬ ತುಕಡಿಗಳು ತಲೆ ಎತ್ತಿದ್ದು, ಅವರ ನಡುವೆ ಟಿಕೆಟ್ ಸಮರ ದಿನದಿಂದ ದಿನಕ್ಕೆ ರಂಗೇರುತ್ತಿದೆ. ಈಗಾಗಲೇ ಯಡ್ಡಿ ಬಣದ ಬಸವರಾಜು ತನ್ನ ಮಗ ಜ್ಯೋತಿ ಗಣೇಶ್‌ಗೆ ಟಿಕೆಟ್ ನೀಡಬೇಕು, ಇಲ್ಲಾ ನನಗೆ ಇಲ್ಲಿ ಕೊಟ್ಟು ಮಗನಿಗೆ ಗುಬ್ಬಿಯಲ್ಲಿ ಕೊಡಬೇಕು ಎಂಬ ಬೇಡಿಕೆ ಮುಂದಿಟ್ಟಿದ್ದಾರಂತೆ.

ಆದರೆ ಬಸವರಾಜು ಕುಟುಂಬದ ಬದ್ಧ ರಾಜಕೀಯ ವೈರಿ ಸೊಗಡು ಶಿವಣ್ಣ ಟಿಕೆಟ್‌ನ ಪ್ರಬಲ ಆಕಾಂಕ್ಷಿಯಾಗಿದ್ದು ಬ್ರಿಗೇಡ್ ಬಲದಲ್ಲಿ ಟಿಕೆಟ್ ಗಿಟ್ಟಿಸುವ ಹುಮ್ಮಸ್ಸಿನಲ್ಲಿದ್ದಾರೆ. ಒಂದೊಮ್ಮೆ ಸೊಗಡು ಶಿವಣ್ಣನಿಗೆ ಟಿಕೆಟ್ ನೀಡದಿದ್ದರೆ ಆತ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿಯುವುದು ಶತಃಸಿದ್ಧ. ಈ ನಡುವೆ ಇವರಿಬ್ಬರೂ ಲಿಂಗಾಯತ ಜನಾಂಗಕ್ಕೆ ಸೇರಿರುವುದರಿಂದ ಹಿಂದುಳಿದ ವರ್ಗಕ್ಕೆ ಪ್ರಾಶಸ್ತ್ಯ ನೀಡುವ ಸಲುವಾಗಿ ತನಗೆ ಟಿಕೆಟ್ ನೀಡುವಂತೆ ಹುಲಿನಾಯ್ಕ ಬೇಡಿಕೆ ಮುಂದಿಟ್ಟಿದ್ದಾರೆ ಎಂಬ ಮಾತೂ ಕೇಳಿಬರುತ್ತಿದೆ.

ಇತ್ತ ಜೆಡಿಎಸ್ ಇಡೀ ತುಮಕೂರು ಜಿಲ್ಲೆಯಲ್ಲಿ ತನ್ನ ಅಸ್ತಿತ್ವ ಹಿಗ್ಗಿಸಿಕೊಳ್ಳುವ ಯತ್ನದಲ್ಲಿದೆ. ಅದಾಗಲೇ ಜಿಲ್ಲಾ ಪಂಚಾಯ್ತಿಯನ್ನು ತನ್ನ ಕೈವಶ ಮಾಡಿಕೊಂಡಿರುವ ಜೆಡಿಎಸ್ ಈ ಸಲ ಶತಯಗತಾಯ ಸಾಕಷ್ಟು ಹೆಚ್ಚು ಸೀಟುಗಳನ್ನು ಗೆಲ್ಲುವ ಯೋಜನೆ ಹಾಕಿಕೊಂಡಿದೆ. ಕಳೆದ ಬಾರಿ ಕಾಂಗ್ರೆಸ್ ತೊರೆದು ಬಂದಿದ್ದ ಗೋವಿಂದರಾಜುಗೆ ತುಮಕೂರು ನಗರ ಕ್ಷೇತ್ರದ ಟಿಕೆಟ್ ನೀಡಲಾಗಿತ್ತು, ಈ ಸಲವೂ ಅವರಿಗೇ ಟಿಕೆಟ್ ಗಟ್ಟಿ ಎನ್ನಲಾಗುತ್ತಿದೆ. ಜೊತೆಗೆ ಜೆಡಿಎಸ್ ನಗರಾಧ್ಯಕ್ಷ ನರಸೇಗೌಡರ ಹೆಸರೂ ಕೇಳಿಬರುತ್ತಿದೆ. ಈ ನಡುವೆ ಕಾಂಗ್ರೆಸ್‌ನ ಪ್ರಭಾವಿ ಶಾಸಕ ಕೆ.ಎನ್. ರಾಜಣ್ಣನನ್ನು ಜೆಡಿಎಸ್‌ಗೆ ಕರೆತರುವ ಪ್ರಯತ್ನಗಳೂ ನಡೆಯುತ್ತಿವೆ. ಪೂರಕವೆಂಬಂತೆ ಸಿ.ಎಸ್.ಪುರದಲ್ಲಿ ನಡೆದ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಕುಮಾರಸ್ವಾಮಿ ಮಾತನಾಡುತ್ತಾ 'ಮುಖ್ಯಮಂತ್ರಿಯ ವರ್ತನೆಯಿಂದ ಬೇಸತ್ತು ಜಿಲ್ಲೆಯ ಕಾಂಗ್ರೆಸ್ ಶಾಸಕರೊಬ್ಬರು ಪಕ್ಷಬಿಡುವ ತೀರ್ಮಾನಕ್ಕೆ ಬಂದಿದ್ದಾರೆ' ಎಂದು ಉಲ್ಲೇಖಿಸಿದ್ದರು. ಆ ಮಾತು ಬಂದದ್ದು ಕೆಎನ್ನಾರ್ ಕುರಿತೇ ಎಂಬ ವದಂತಿಗಳು ಹರಿದಾಡುತ್ತಿದೆ. ಹಾಗೆ ಅವರೇನಾದರು ಜೆಡಿಎಸ್‌ಗೆ ಬಂದರೆ ಅವರನ್ನೇ ಜೆಡಿಎಸ್ ಜಿಲ್ಲಾಧ್ಯಕ್ಷರನ್ನಾಗಿ ಮಾಡಿ ತುಮಕೂರಿಗೆ ಲಗ್ಗೆ ಹಾಕುವುದು ಕುಮಾರಸ್ವಾಮಿಯ ಉದ್ದೇಶ ಎನ್ನಲಾಗುತ್ತಿದೆ. ಅಲ್ಲದೆ ರಾಜಣ್ಣನನ್ನು ತುಮಕೂರು ನಗರ ಕ್ಷೇತ್ರದ ಅಭ್ಯರ್ಥಿಯಾಗಿಸುವ ಆಲೋಚನೆಯೂ ಜೆಡಿಎಸ್ ವರಿಷ್ಠರ ತಲೆಯಲ್ಲಿ ಇದೆಯಂತೆ. ಸದ್ಯ ನಡೆಯುತ್ತಿರುವ ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಗಾದಿ ಚುನಾವಣೆಯಲ್ಲಿ ರಾಜಣ್ಣನ ಮಗನೂ ಸ್ಪರ್ಧಿಸಿದ್ದು, ಆತನ ಸೋಲುಗೆಲುವಿನ ಆಧಾರದಲ್ಲಿ ರಾಜಣ್ಣನ ರಾಜಕೀಯ ನಿರ್ಧಾರ ಹೊರಬೀಳಲಿದೆ. ಒಂದೊಮ್ಮೆ ಆತ ಗೆದ್ದರೆ ಕೆಎನ್ನಾರ್ ಕಾಂಗ್ರೆಸ್‌ನಲ್ಲೇ ಮುಂದುವರೆಯುವುದು ಗ್ಯಾರಂಟಿ. ಹಾಗಾಗಿ ಜೆಡಿಎಸ್‌ನ ಟಿಕೆಟ್ ಬಗ್ಗೆಯೂ ಯಾವ ಸ್ಪಷ್ಟತೆಗಳಿಲ್ಲ.

■ ಅನಿಲ್‌ಕುಮಾರ್ ಚಿಕ್ಕದಾಳವಟ್ಟ

ನೋಟು ರದ್ದತಿ ಮತ್ತು ಪೇಡ್ ಭಕ್ತರ ಕಿತಾಪತಿ

ಒಂದು ಪತ್ರ

ಗೌರಿ ಅವರು ತಮ್ಮ ಸಂಪಾದಕೀಯದಲ್ಲಿ ಹೇಳಿರು...ತೆ ಮೋದಿಯ ಮಹಾಮೂರ್ಖ ನೋಟು ರದ್ದತಿ ಯಿಂದಾಗಿ ...ಕೃಷಿ, ...ಕೋದ್ಯಮ ಸಹಿತ ಎಲ್ಲಾ ಕ್ಷೇತ್ರಗಳಲ್ಲೂ ಬಹಳ ...ನಿಯಾಗಿದೆ. ಅಸಂಘಟಿತ ವಲಯದ 40 ಲಕ್ಷ ಅನಕ್ಷರ ...ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ ಹಾಗೂ ಸುಮಾರು ...ತ್ತು ಲಕ್ಷ ಸಣ್ಣ ಉದ್ದಿಮೆಗಳು ಬಾಗಿಲು ಮುಚ್ಚಿವೆ. ಆದರೆ ...ನ್ನು ಸಾಕ್ಷಿಸಹಿತ ಬಹಿರಂಗ ಪಡಿಸಬೇಕಿದ್ದ ಹೆಚ್ಚಿನ ಪತ್ರಿಕೆಗಳು ...ಕಾರಿ ಜಾಹೀರಾತಿನ ಆಸೆಗೆ ಬಿದ್ದು ನಿಜ ಮರೆಮಾಚುತ್ತಿವೆ. ...ತಹ ಆಸೆಬುರುಕ ಗುಲಾಮೀ ಮನಸ್ಥಿತಿಯ ...ಮಾಧ್ಯಮಗಳಿಂದಾಗಿ ಪ್ರಜಾಪ್ರಭುತ್ವದ ನಾಲ್ಕನೆಯ ಸ್ತಂಭ ...ಎನಿಸಿರುವ ಮಾಧ್ಯಮ ಕ್ಷೇತ್ರ ಗೆದ್ದಲು ಹಿಡಿದ ಕಂಬ ...ವಾಗಿದೆ. ಹೀಗೆ ಕಾಲು ನೆಕ್ಕುವ ಪತ್ರಿಕೆಗಳನ್ನು ಸಾಕಿ ...ಸಲಹಲೆಂದೇ ಮೋದಿ ಸರ್ಕಾರ ಅನೇಕ ಕ್ಷುಲ್ಲಕ ಸರ್ಕಾರಿ ...ಯೋಜನೆಗಳನ್ನು ಹುಟ್ಟುಹಾಕಿ ಅವುಗಳ ಪ್ರಚಾರಕ್ಕೆ ನೂರಾರು ...ಕೋಟಿ ಖರ್ಚು ಮಾಡುತ್ತಿದೆ. ಬಿಜೆಪಿಯ ಐಟಿ ಸೆಲ್ ಇರುವಂತೆ ...ಮೀಡಿಯಾ ಸೆಲ್ ಸಹ ಇದೆ.

...ಕರ್ನಾಟಕದ ಮೀಡಿಯಾಗಳ ಮೇಲೆ ಕಣ್ಣಿಡಲು ...ಬಿಜೆಪಿಯ ಮಲ್ಲೇಶ್ವರಂ ಕಚೇರಿಯಲ್ಲಿ ಮೋದಿ ಭಕ್ತರನ್ನು ...ಕೈಯ ಸಂಬಳ ಕೊಟ್ಟು ಕೂಡಿಸಲಾಗಿದೆ. ಪ್ರತಿಯೊಂದು ...ಪತ್ರಿಕೆಯ ಮೇಲೆ ಕಣ್ಣಿಡಲು ಇಬ್ಬಿಬ್ಬರನ್ನು ನೇಮಿಸಲಾಗಿದೆ. ...ವರ ಕೆಲಸ ಇಷ್ಟೇ- ಪತ್ರಿಕೆಗಳಲ್ಲಿ ಬರುವ ರಾಜಕೀಯ ...ಮತ್ತು ಆರ್ಥಿಕತೆಗೆ ಸಂಬಂಧಿಸಿದ ಸುದ್ದಿಗಳ ವಿಶ್ಲೇಷಣ ...ಮಾಡಿ ತಮ್ಮ ತಮ್ಮ ಸ್ಥಳೀಯ ಮೀಡಿಯಾ ಸೆಲ್ ...ಮುಖ್ಯಸ್ಥರಿಗೆ ತಿಳಿಸುವುದು. ಜತೆಗೆ ಪತ್ರಿಕೆಗಳಲ್ಲಿ ಬರುವ ...ಸುದ್ದಿಗಳಿಗೆ ಬಿಜೆಪಿ ಪರ ಹಾಗೂ ಇತರ ಪಕ್ಷಗಳ ವಿರುದ್ಧ ...ಆನ್‌ಲೈನ್ ಆವೃತ್ತಿಗಳಲ್ಲಿ ಕಾಮೆಂಟ್ ವಿಭಾಗದಲ್ಲಿ ಪೋಸ್ಟ್ ...ಹಾಕುವುದು ಅಥವಾ ಸಂಪಾದಕರಿಗೆ ಪತ್ರ ಬರೆದು ...ಸಮರ್ಥಿಸುವುದು ಅಥವಾ ಖಂಡಿಸುವುದು. ಬಿಜೆಪಿ ಅಥವಾ ...ಸಂಘ ಪರಿವಾರದ ವಿರುದ್ಧ ವರದಿ ಮಾಡುವ ಪತ್ರಕರ್ತರನ್ನು ...ಹಾಗೂ ಕಾಮೆಂಟ್ ವಿಭಾಗದಲ್ಲಿ ಬಿಜೆಪಿ ವಿರುದ್ಧ ಪೋಸ್ಟ್ ...ಹಾಕುವ ಓದುಗರನ್ನು ಅತ್ಯಂತ ಕೀಳು ಭಾಷೆಯಲ್ಲಿ ...ಅವಮಾನಿಸಿ ಹೀಯಾಳಿಸುವುದು ಹಾಗೂ ಮೋದಿಯ ...ಕಾರ್ಯಗಳಿಂದ ದೇಶಕ್ಕಾಗುವ ಕಾಲ್ಪನಿಕ ಲಾಭಗಳನ್ನು ...ಹೊಗಳಿ ಬರೆಯುವುದು ಈ "ಕಾಮೆಂಟಿಗರ" ಮುಖ್ಯ ...ಕೆಲಸ. ಮುಸ್ಲಿಂ ಹಾಗೂ ಕ್ರೈಸ್ತರ ವಿರುದ್ಧ ದ್ವೇಷ ...ಹರಡುವುದೂ ಇವರ ಮುಖ್ಯ ಕೆಲಸಗಳಲ್ಲಿ ಒಂದು.

ಇಂತಹ ಪೇಡ್ ಭಕ್ತರು ತಮ್ಮ ಮನೆಯಿಂದ ಸಹ ...ಕೆಲಸ ಮಾಡಬಹುದು. ಹಾಗಾಗಿ ಬೆಳಗ್ಗೆ ಆರು ಗಂಟೆಯಿಂದ ...ರಾತ್ರಿ ಹತ್ತು ಗಂಟೆಯವರೆಗೆ ಇವರು ಪತ್ರಿಕೆಗಳ ಸುದ್ದಿ ...ವೆಬ್‌ಸೈಟ್‌ಗಳಲ್ಲಿ ಕಾಮೆಂಟ್ ಹಾಕುತ್ತಲೇ ಇರುತ್ತಾರೆ. ...ಕೆಲಸಕ್ಕೆ ಈ ಭಕ್ತರಿಗೆ ಒಳ್ಳೆಯ ಸಂಬಳ ಕೊಡಲಾಗುತ್ತದೆ. ...ಪ್ರತಿ ರಾಜ್ಯದ ರಾಜಧಾನಿಯಲ್ಲೂ ಆಯಾ ಭಾಷೆಗಳಲ್ಲಿ ...ಇಂತಹ ಹಲವಾರು ಪೇಡ್ ಭಕ್ತರನ್ನು ಪತ್ರಿಕೆಗಳ ಮೇಲೆ ...ಕಣ್ಣಿಡಲು ಬಿಜೆಪಿಯ ಮೀಡಿಯಾ ಸೆಲ್‌ನವರು ಸಂಬಳದ ...ಮೇಲೆ ನೇಮಿಸಿದ್ದಾರೆ. ಆಯಾ ಪತ್ರಿಕೆಗಳ ಆಡಳಿತ ಮಂಡಳಿಯ ಪಾಲಿಸಿಗಳು ಹಾಗೂ ಸಂಪಾದಕರು ಒಲವು ಯಾವ ಪಕ್ಷದ ಕಡೆ ಎಂಬುದನ್ನೂ ಗ್ರಹಿಸಿ ತಮ್ಮ ಸ್ಥಳೀಯ ಬಿಜೆಪಿ ಮೀಡಿಯಾ ಸೆಲ್ ಮುಖ್ಯಸ್ಥರಿಗೆ ಆಗಾಗ ರಿಪೋರ್ಟ್ ಕೊಡುವುದು ಈ ಭಕ್ತ ಕಾಮೆಂಟಿಗರ ಮುಖ್ಯ ಕೆಲಸ. ಈ ಆಧಾರದಲ್ಲಿ ಯಾವ ಯಾವ ಪತ್ರಿಕೆಗೆ ಎಷ್ಟೆಷ್ಟು ಮೊತ್ತದ ಸರಕಾರಿ ಜಾಹೀರಾತು ಕೊಡಬೇಕೆಂದು ಪಕ್ಷದ ಮುಖ್ಯಸ್ಥರು ನಿರ್ಧರಿಸುತ್ತಾರೆ. ಬಿಜೆಪಿ ಪಕ್ಷದ ಚಮಚಾಗಿರಿ ಮಾಡುವ ಪತ್ರಿಕೆಗಳಿಗೆ ಅತಿಹೆಚ್ಚು ಸರಕಾರಿ ಜಾಹೀರಾತು ಸಿಗುತ್ತದೆ. ಇಂತಹ ಕಾಲು ನೆಕ್ಕುವ ಪತ್ರಿಕೆಗಳಿಗೆ ನೋಟು ರದ್ದತಿಯಿಂದ ಲಾಭವೇ ಆಗಿರುವುದು ನಿಜ.


ಇನ್ನು ಸಂಜೆ ಪತ್ರಿಕೆಗಳ ಮೇಲೂ ಕಣ್ಣಿಡಲು ಹಾಗೂ ಅವುಗಳಲ್ಲಿ ಬರುವ ರಾಜಕೀಯ ಲೇಖನಗಳ ಜತೆಗೆ ಮೋದಿ ಮತ್ತು ಸಂಘ ಪರಿವಾರದ ವಿರುದ್ಧ ಓದುಗರು ಬರೆದ ಪತ್ರಗಳನ್ನೂ ವಿಮರ್ಶಿಸಿ ಅವುಗಳಿಗೆ ಅದೇ ದಿನ ಕಟು ಉತ್ತರ ಬರೆಯಲು ಸಹ ಭಕ್ತರನ್ನು ಸಂಬಳ ಕೊಟ್ಟು ನೇಮಿಸಲಾಗಿದೆ. ಮಂಗಳೂರಲ್ಲಿ ಈ ಕೆಲಸಕ್ಕಾಗಿ 'ನಮೋ ಯುವ ಬ್ರಿಗೇಡ್'ನ ನರಿ ಶೆಣೈ (ವಿನಾಯಕ ಬಾಳಿಗಾ ಕೊಲೆ ಆರೋಪಿ) ಮತ್ತು ಚಕ್ರ ಸೂಲಿಬೆಲೆಯಿಂದ ತರಬೇತಿ ಪಡೆದ ಕೊಂಕಣಿ ಹಾಗೂ ಬ್ರಾಹ್ಮಣ ಯುವಕರನ್ನು ಮಾತ್ರ ನೇಮಿಸಲಾಗಿದೆ. ಇವರಿಗೆ ಓದುಗರ ಪತ್ರದಲ್ಲಿರುವ ವಿಷಯವನ್ನು ತೆಗಳಿ ಬರೆಯುವುದು ಮಾತ್ರವಲ್ಲ ಆಯಾ ಲೇಖಕನನ್ನೂ ವೈಯಕ್ತಿಕವಾಗಿ ಅವಮಾನಿಸಿ ಹೀಯಾಳಿಸಿ ಬರೆಯುವಂತೆ ತರಬೇತಿ ಆಗಿದೆ. ಇವರೆಲ್ಲರೂ ಅಪ್ಪಟ ಬ್ರಾಹ್ಮಣರಾದರೂ ಇವರು ಕೆಳಜಾತಿಯವರ ಉಪನಾಮ ಬಳಸಿ ಸಂಜೆ ಪತ್ರಿಕೆಗೆ ಪತ್ರ ಬರೆದು ಕೆಳಜಾತಿಯವರೂ ಮೋದಿಯ ಭಕ್ತರಾಗಿದ್ದಾರೆ ಹಾಗೂ ಕಾಂಗ್ರೆಸ್ ಅಥವಾ ಕೇಜ್ರಿವಾಲರನ್ನು ಕೆಳಜಾತಿಯವರೂ ಹೀಯಾಳಿಸಿ ಲೇವಡಿ ಮಾಡುತ್ತಾರೆ ಎಂಬಂತೆ ಬಿಂಬಿಸಲು ಪ್ರಯತ್ನಿಸುತ್ತಾರೆ. ಆದರೆ ಇವರ ವೈಯಕ್ತಿಕ ಹೀಯಾಳಿಕೆಯ ಪತ್ರಗಳನ್ನು ಓದುವಾಗಲೇ ಗೊತ್ತಾಗುತ್ತದೆ ಇದು ಮೋದಿ ಮತ್ತು ಸಂಘ ಪರಿವಾರದ ಬ್ರಾಹ್ಮನ್ ಭಕ್ತರೇ ಬರೆದಿರುವುದು ಎಂದು.

ನೋಟು ರದ್ದತಿಯಾಗಿ ಹೊಸ ನೋಟು ಮರುಪೂರಣ ಶುರುವಾಗಿ ಆರು ತಿಂಗಳು ಕಳೆದರೂ ಕರ್ನಾಟಕದ ಅರ್ಧಕರ್ಧ ಎಟಿಎಮ್‌ಗಳು ಈಗಲೂ ಕ್ಯಾಶ್ ಇಲ್ಲ ಎಂಬ ಬೋರ್ಡ್ ನೇತು ಹಾಕಿ ಹಾಯಾಗಿ ಕುಳಿತಿವೆ. ಮೊನ್ನೆ ಶನಿವಾರದಿಂದ ವಾನಕ್ರೈ-ರಾನ್ಸಮ್ ವೇರ್ ಕುತಂತ್ರಾಂಶದ ದಾಳಿಯ ನೆಪದಲ್ಲಿ ಮುಕ್ಕಾಲು ಪಾಲು ಎಟಿಎಮ್‌ಗಳನ್ನು ಬಂದ್ ಇಡಲಾಗಿದೆ. ಇನ್ನು ಉಳಿದ ಎಟಿಎಮ್‌ಗಳಲ್ಲಿ ಈಗಲೂ ಕೇವಲ ಎರಡು ಸಾವಿರದ ನೋಟುಗಳೇ ಸಿಗುತ್ತಿವೆ. ಮೈಸೂರಿನಲ್ಲಿಯೇ ಹೊಸ ಐನೂರು ಮತ್ತು ನೂರರ ನೋಟು ಮುದ್ರಣ ಆಗುತ್ತಿದ್ದರೂ ಅದು ಕರ್ನಾಟಕದಲ್ಲಿ ಚಲಾವಣೆಗೆ ಬಾರದೇ ನೇರವಾಗಿ ಈಗ ಹೋಗುತ್ತಿರುವುದು ಬಿಜೆಪಿ ಆಡಳಿತದ ರಾಜ್ಯಗಳಾದ ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ತಾನ, ಜಾರ್ಖಂಡ್ ಮತ್ತು ಗುಜರಾತ್ ರಾಜ್ಯಗಳಿಗೆ. ಕಾರಣ ಕೆಲವೇ ತಿಂಗಳಲ್ಲಿ ನಡೆಯಲಿರುವ ಗುಜರಾತ್, ರಾಜಸ್ತಾನ್, ಮಧ್ಯ ಪ್ರದೇಶ ರಾಜ್ಯಗಳ ವಿಧಾನ ಸಭಾ ಚುನಾವಣೆಯ ವೇಳೆ ನೋಟು ರದ್ಧತಿಯ ಕರಾಳ ದಿನಗಳು ಮತದಾರರಿಗೆ ನೆನಪು ಬಂದು ಅವರು ಬೇರೆ ಪಕ್ಷಗಳಿಗೆ ವೋಟು ಕೊಡಬಾರದು ಎಂದು ಮೋದಿ-ಅಮಿತ್ ಷಾ ಮೈಸೂರಿನಲ್ಲಿ ಪ್ರಿಂಟಾಗುವ ಎಲ್ಲ ಐನೂರರ ನೋಟುಗಳನ್ನು ಉತ್ತರ ಭಾರತಕ್ಕೆ ರವಾನಿಸುವಂತೆ ಆದೇಶ ಕೊಟ್ಟಿದ್ದಾರಂತೆ. ಅಂದರೆ ಸಣ್ಣ ಮುಖಬೆಲೆಯ ನೋಟುಗಳಿಗಾಗಿ ಕರ್ನಾಟಕದ ಜನರು ಪಡುತ್ತಿರುವ ಬವಣೆ ಮೋದಿ ಗ್ಯಾಂಗಿಗೆ ಲೆಕ್ಕವೇ ಇಲ್ಲ.

ನೋಟು ರದ್ದತಿಯಿಂದ ಮುಂದಿನ ದಿನಗಳಲ್ಲಿ ಒಳ್ಳೆಯದಾಗಲಿದೆ ಎಂದು ಬಿಜೆಪಿಯವರು ಆರು ತಿಂಗಳ ನಂತರವೂ ಕತ್ತೆಯ ಮುಂದೆ ಕ್ಯಾರಟ್ ನೇತಾಡಿಸುತ್ತಿದ್ದಾರೆ ಅಷ್ಟೇ. ಈ ಜಗತ್ತಿನಲ್ಲಿ ಬುದ್ಧ-ಮಹಾವೀರ ಸಹಿತ ಮುಂದಿನ ಜನ್ಮ ನೋಡಿದವರು ಯಾರೂ ಇಲ್ಲ, ಮರುಜನ್ಮ ಎಂಬುದು ಕೇವಲ ಕಲ್ಪನೆ ಮಾತ್ರ. ಆದರೂ ದುಬಾರಿ ಪೂಜೆ ಪುನಸ್ಕಾರ ಮಾಡಿದರೆ ಮುಂದಿನ ಜನ್ಮದಲ್ಲಿ ಒಳ್ಳೆಯದಾಗುತ್ತದೆ ಎಂದು ಸುಳ್ಳು ಹೇಳಿ ದೇವಸ್ಥಾನದ ಪುರೋಹಿತರು ಅಥವಾ ಜ್ಯೋತಿಷಿಗಳು ಮುಗ್ಧ ಭಕ್ತರ ಮೂಗಿಗೆ ತುಪ್ಪ ಸವರುವುದನ್ನು ಹೇಗೆ ಎಂದಿಗೂ ನಿಲ್ಲಿಸುವುದಿಲ್ಲವೋ, ಅದೇ ರೀತಿ ಬಿಜೆಪಿ ರಾಜಕಾರಣಿಗಳು ಮತ್ತು ಅವರ ಭಕ್ತ ಕುರಿಗಳು ನೋಟು ರದ್ದತಿಯಿಂದ ದೇಶದ ಜನರಿಗೆ ಮುಂದೆ ಒಳ್ಳೆಯ ದಿನಗಳು ಕಾದಿವೆ ಎಂದು ಮುಂಗೈಗೆ ಬೆಲ್ಲ ಸವರುವುದನ್ನು ನಿಲ್ಲಿಸುವುದಿಲ್ಲ. ಜೊತೆಗೆ ಮಧ್ಯಮ ವರ್ಗದ ವಿದ್ಯಾವಂತರನ್ನು ಪೊಳ್ಳು ದೇಶಭಕ್ತಿಯ ಘೋಷಣೆಗಳಿಂದ ಮರಳು ಮಾಡುವುದು ತುಂಬಾ ಸುಲಭ. ನೋಟು ರದ್ಧತಿಯಿಂದ ಕೆಲಸ ಕಳೆದುಕೊಂಡಿರುವ ನಲ್ವತ್ತು ಲಕ್ಷ ಅಸಂಘಟಿತ ವಲಯದ ನಿರಕ್ಷರಿ ಕಾರ್ಮಿಕರು ಹಾಗೂ ಬಂದ್ ಆಗಿರುವ ಹತ್ತು ಲಕ್ಷ ಸಣ್ಣ ಉದ್ದಿಮೆಗಳ ಪರಿಸ್ಥಿತಿ ಈಗ ಹೇಗಿದೆ ಎಂದು ನಕಲಿ ದೇಶಭಕ್ತ ಮೋದಿ ಸರ್ಕಾರಕ್ಕೇ ಗೊತ್ತಿಲ್ಲವಂತೆ!

ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿರುವ ರೋಗಿಯ ಸ್ಥಿತಿ ದಿನೇದಿನೇ ಬಿಗಡಾಯಿಸುತ್ತಿದ್ದರೂ ಡ್ಯೂಟಿ ಡಾಕ್ಟರ್ ದಿನಾಲೂ ಪರೀಕ್ಷೆಗೆ ಬಂದಾಗ "ನಿನ್ನೆಗಿಂತ ಇಂದು ಸ್ಥಿತಿ ಸುಧಾರಿಸಿದೆ" ಎಂದು ರೋಗಿಗೆ ಧೈರ್ಯ ಹೇಳುತ್ತಾರೆ. ಇದಕ್ಕೆ ಒಂದು ಮನೋವೈಜ್ಞಾನಿಕ ಕಾರಣ ಇದೆ. ಅಂದರೆ ರೋಗಿಗೆ ತನ್ನ ಆರೋಗ್ಯ ಸುಧಾರಿಸುತ್ತಿದೆ ಎಂದು ಧೈರ್ಯ ಮೂಡಿದಾಗ ಅವನ ಮೆದುಳಲ್ಲಿ ಮತ್ತು ದೇಹದಲ್ಲಿ ಕೆಲವು ರಾಸಾಯನಿಕ ಪ್ರತಿಕ್ರಿಯೆಗಳಾಗಿ ಅವನ ದೇಹದ ಇಮ್ಯೂನಿಟಿ ಸಿಸ್ಟಂ (ರೋಗ ಪ್ರತಿರೋಧಕ ಶಕ್ತಿ) ಬಲಗೊಳ್ಳುತ್ತದಂತೆ. ಇದರಿಂದ ರೋಗಿಯ ಆರೋಗ್ಯ ನಿಜವಾಗಿ ಸ್ಥಿರವಾಗಬಹುದು. ಇದಕ್ಕೆ ಡಾಕ್ಟರ್‌ಗಳ ಹಾಗೂ ಮನೋವಿಜ್ಞಾನಿಗಳ ಭಾಷೆಯಲ್ಲಿ "ಪ್ಲಸೆಬೋ ಎಫೆಕ್ಟ್" **(placebo effect)** ಎಂದು ಹೇಳುತ್ತಾರೆ. ಇಂತಹದ್ದೇ ಪ್ಲಸೆಬೋ ತಂತ್ರ ಉಪಯೋಗಿಸಿ ಮೋದಿಯ ಪ್ರಚಾರಕರು ನೋಟು ಕೊರತೆಯ ಸಂಕಷ್ಟ ಈಗಾಗಲೇ ನಿವಾರಣೆಯಾಗಿದೆ ಹಾಗೂ ದೇಶದ ಜಿಡಿಪಿ (ಒಟ್ಟು ಆಂತರಿಕ ಉತ್ಪತ್ತಿ) ಏರುತ್ತಿದೆ ಎಂದು ಸುಳ್ಳು ಅಂಕಿ ಅಂಶಗಳೊಂದಿಗೆ ಪತ್ರಿಕೆಗಳಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಬೊಗಳೇ ಪ್ರಚಾರ ಮಾಡುತ್ತಿದ್ದಾರೆ. ನಿಜವಾದ ರೋಗಿಗೆ ಡಾಕ್ಟರುಗಳ ಪ್ಲಸೆಬೋ ತಂತ್ರದಿಂದ ಉಪಯೋಗ ಆಗಬಹುದು. ಆದರೆ ಸರ್ವಾಧಿಕಾರಿ ಮೋದಿಯ ಎಡವಟ್ಟಿನಿಂದ ಉಂಟಾಗಿರುವ ಭೀಕರ ಆರ್ಥಿಕ ಸಂಕಷ್ಟ ನಿವಾರಣೆ ಮಾಡಲು ಇಂತಹ ಪ್ಲಸೆಬೋ ತಂತ್ರದಿಂದ ಸಾಧ್ಯ ಇಲ್ಲ. ಮುಂಬರುವ ನವೆಂಬರಿನ ಮೂರು ರಾಜ್ಯಗಳ ಚುನಾವಣೆಯಲ್ಲಿ ಜನರು ಬಿಜೆಪಿ ಪಕ್ಷದ ಮೇಲೆಯೇ ತಿರುಮಂತ್ರ ಹಾಕಿ ಬುದ್ಧಿ ಕಲಿಸುವ ಸಾಧ್ಯತೆ ದಟ್ಟವಾಗಿದೆ. ಆಗ ತಮ್ಮ ನೋಟು ರದ್ದತಿಯಿಂದ 'ಒಳ್ಳೆಯ ದಿನಗಳು ಬರುತ್ತಿವೆ' ಎಂಬ ಪ್ಲಸೆಬೋ ತಂತ್ರ ಬಿಜೆಪಿಯ ಸ್ವಂತಕ್ಕೇ ಬೇಕಾದೀತು! ಮುಂದಿನ ಎಲ್ಲಾ ಚುನಾವಣೆಗಳಲ್ಲಿ ಮತಯಂತ್ರದ ಜತೆಗೆ ವಿವಿಪಿಎಟಿ (ಮತಚೀಟಿ) ಯಂತ್ರ ಸಹ ಜೋಡಿಸಲಿರುವುದರಿಂದ ಉತ್ತರ ಪ್ರದೇಶದಲ್ಲಿ ಮತಯಂತ್ರ ತಿರುಚಿ ಗೆದ್ದಂತೆ ಇನ್ನು ಮುಂದೆ ಗುಜರಾತ್ ರಾಜಸ್ಥಾನ ಮತ್ತು ಮಧ್ಯಪ್ರದೇಶದಲ್ಲಿ ಬಿಜೆಪಿ ಅಧಿಕಾರ ಉಳಿಸಿಕೊಳ್ಳುವುದು ಸಾಧ್ಯವಿಲ್ಲ.

● ಗಿರೀಶ್ ಟಿ ಶೆಟ್ಟಿ, ಮುಲ್ಕಿ



4 ವರ್ಷ

80/100



2013ರ ಮೇ 13ರಂದು ರಾಜ್ಯದ 22ನೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಮರುಗಳಿಗೆಯಲ್ಲೇ ಸಿದ್ದರಾಮಯ್ಯ ಮಾಡಿದ ಎರಡು ಪ್ರಮುಖ ಘೋಷಣೆಗಳ ಪೈಕಿ ಮೊದಲನೆಯದ್ದು ಪರಿಶಿಷ್ಟ ಜಾತಿ ಪರಿಶಿಷ್ಟ ಬುಡಕಟ್ಟು ನಿಗಮ ಸೇರಿದಂತೆ ಹಿಂದುಳಿದ ವರ್ಗಗಳು ಮತ್ತು ಅಲ್ಪ ಸಂಖ್ಯಾತರ ಸಾಲಮನ್ನಾ ಮತ್ತು ಒಂದು ರೂಪಾಯಿಗೆ ಕೆಜಿ ಅಕ್ಕಿಯ ಅನ್ನಭಾಗ್ಯ.

ಅದು ಒಂದಲ್ಲ ಎರಡಲ್ಲ ಬರೋಬ್ಬರಿ ನಾಲ್ಕು ಸಾವಿರಕ್ಕೂ ಅಧಿಕ ಕೋಟಿ ರೂಪಾಯಿಗಳಷ್ಟು ದಲಿತ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಸಾಲವನ್ನು ಮುಖ್ಯಮಂತ್ರಿಯೊಬ್ಬ ಮನ್ನಾ ಮಾಡುತ್ತಾರೆಂದರೆ ಸಣ್ಣ ಮಾತೆ? ಅದಕ್ಕೊಂದು ಸಾಮಾಜಿಕ ಪ್ರಶಂಸೆ, ಅಭಿನಂದನೆ ಮೆಚ್ಚುಗೆಯ ಮಾತು ಒತ್ತಟ್ಟಿಗಿರಲಿ. ಕನಿಷ್ಠ ಅದರ ಫಲಾನುಭವಿಗಳಿದ್ದರಲ್ಲ, ಅಂಥ ಫಲಾನುಭವಿಗಳ ಪ್ರಾತಿನಿಧಿಕ ಸಂಸ್ಥೆಗಳಿದ್ದವಲ್ಲ- ಅಂಥ ರಾಜಕಿಯ ಅಥವಾ ಸಾಂಸ್ಕೃತಿಕ ಸಂಸ್ಥೆಗಳಿಂದಾದರೂ ಸಣ್ಣದೊಂದು ಕೃತಜ್ಞತೆಯನ್ನು ಆ ಮುಖ್ಯಮಂತ್ರಿ ನಿರೀಕ್ಷಿಸುತ್ತಾರಲ್ಲವೆ?

ಸಾಲಮನ್ನಾ ಮಾಡಿದ ವಾರಕ್ಕೆ ಒಂದೆರಡು ದಿನಪತ್ರಿಕೆಗಳಲ್ಲಿ ಸಣ್ಣದೊಂದು ಹೇಳಿಕೆ ಪ್ರಕಟವಾಗಿತ್ತು, ಅದು ಸವಿತಾ ಸಮಾಜದ ಪದಾಧಿಕಾರಿಗಳು ಸಾಲ ಮನ್ನಾಕ್ಕೆ ಪ್ರತಿಯಾಗಿ ಮುಖ್ಯಮಂತ್ರಿಗೆ ಸಲ್ಲಿಸಿದ್ದ ಕೃತಜ್ಞತಾ ಹೇಳಿಕೆ. ಅದು ಬಿಟ್ಟರೆ ದಲಿತ ಸಂಘರ್ಷ ಸಮಿತಿಯ ಅಸಂಖ್ಯಾತ ಬಣಗಳ ಪೈಕಿ ಯಾವೊಂದು ಸಂಘಟನೆಯೂ ದಲಿತರ ಸಾಲಮನ್ನಾಕ್ಕೆ ಪ್ರತಿಯಾಗಿ ಸಣ್ಣದೊಂದು ಧನ್ಯವಾದವನ್ನು ಕೂಡ ಮುಖ್ಯಮಂತ್ರಿಗೆ ಸಲ್ಲಿಸಲಿಲ್ಲ. ಯಾವುದೇ ಮುಸ್ಲಿಂ ಸಂಘಟನೆಯಾಗಲಿ, ಇನ್ನಾವುದೇ ಹಿಂದುಳಿದ ವೇದಿಕೆಯಾಗಲಿ, ಕ್ರೈಸ್ತರು, ಕುರುಬರು, ಈಡಿಗರು, ಬೆಸ್ತರು, ವಾಲ್ಮೀಕಿ, ಬಲಿಜ ಇತ್ಯಾದಿಗಳಾಗಿ ಯಾರೇ ಫಲಾನುಭವಿಗಳಾಗಲಿ, ಅವರ ಪ್ರಾತಿನಿಧಿಕ ಕೂಟಗಳಾಗಲಿ ತಮಗೆ ಮುಖ್ಯಮಂತ್ರಿ ಮಾಡಿದ ಉಪಕಾರಕ್ಕೆ ಪ್ರತಿಯಾಗಿ ಕಾಟಾಚಾರಕ್ಕೊಂದು ಧನ್ಯವಾದವನ್ನೂ ಪ್ರಕಟಿಸಲಿಲ್ಲ.

ನಿಂದಕರ ನಡುವೆ....

ದಲಿತ ಮುಖ್ಯಮಂತ್ರಿಯ ಕೂಗಡಗಿಸಲೆಂದೇ ಸಿದ್ದರಾಮಯ್ಯ ದಲಿತರ ಸಾಲಮನ್ನಾ ಮಾಡಿದರೆಂದೇ ಇಟ್ಟುಕೊಂಡರೂ ಅದರಿಂದ ಸಂಬಂಧಪಟ್ಟವರಿಗೆ ಲಾಭವಂತೂ ಆಗಿರಲೇಬೇಕಲ್ಲವೆ? ರಾಜಕಿಯಕ್ಕೋ, ಓಟಿನ ಲಾಭಕ್ಕೋ, ಸ್ವಪ್ರತಿಷ್ಠೆಗೋ ಮುಖ್ಯಮಂತ್ರಿಯೊಬ್ಬ ನಾಲ್ಕು ಸಾವಿರ ಕೋಟಿಯಷ್ಟು ಸಾಲ ಮನ್ನಾ ಮಾಡುತ್ತಾರೆಂದರೆ ಅದೊಂದು Thankless ಕೃತಜ್ಞಹೀನ 'ವ್ಯವಹಾರ' ಮಾತ್ರವೆ?

ಕನಿಷ್ಠ ಕಾಂಗ್ರೆಸ್ ಪಕ್ಷದ ಎಸ್‌ಸಿ/ಎಸ್‌ಟಿ ಸೆಲ್ ಎಂಬುದಾದರೂ ಮುಖ್ಯಮಂತ್ರಿಗೊಂದು ಧನ್ಯವಾದ ಹೇಳಬಹುದಿತ್ತಲ್ಲವೆ?

ಬಹುಶಃ ತಾನು ಮಾಡಿದ ಸಾಲಮನ್ನಾಕ್ಕೆ ಪ್ರತಿಯಾಗಿ ಯಾರೊಬ್ಬರೂ ಕೃತಜ್ಞತೆ ಸಲ್ಲಿಸದೇ ಹೋದದ್ದಕ್ಕೆ ಖುದ್ದು ಸಿದ್ದುವೇ ತಲೆ ಕೆಡಿಸಿಕೊಂಡಿರಲಿಲ್ಲ. ಯಾವ ಪತ್ರಿಕೆಗಳಲ್ಲೂ ಈ ಬಗ್ಗೆ ಮೆಚ್ಚುಗೆ ವ್ಯಕ್ತವಾಗಲಿಲ್ಲ. ಕೆಪಿಸಿಸಿಯ ರಾಜ್ಯಾಧ್ಯಕ್ಷ ಪರಮೇಶ್ವರ್ ತಾನೊಬ್ಬ ದಲಿತ ಎಂಬುದಕ್ಕಾದರೂ ಸಾಲಮನ್ನಾಕ್ಕೆ ಮೆಚ್ಚುಗೆ ಸೂಚಿಸುತ್ತಾರೆಂಬ ನಿರೀಕ್ಷೆಯೂ ಮಣ್ಣಾಯಿತು. ಇದು ಸಿದ್ದು ಸರ್ಕಾರದ ಮೊಟ್ಟಮೊದಲ ಜನಪರ ಕಾರ್ಯವೊಂದರ ಸಾರ್ಥಕತೆ ಮತ್ತದಕ್ಕೆ ಸಿಕ್ಕ ಪ್ರತಿಫಲ.

ಸುಮ್ಮನೆ ಹೋಲಿಕೆಗಾದರೂ ಸಿದ್ದು ಮಾಡಿದ ಈ ಮೌನ ಕೊಡುಗೆಯನ್ನು ಹಿಂದಿದ್ದ ಕೃಷ್ಣ ಧರ್ಮಸಿಂಗ್, ಕುಮಾರಸ್ವಾಮಿ ಮತ್ತು ಯಡಿಯೂರಪ್ಪ ಸರ್ಕಾರಗಳಿಗೆ ಹೋಲಿಸಿ ನೋಡಿದರೂ ಈತನಕ ಇದೇ ಅದ್ವಿತೀಯವಾಗಿ ನಿಲ್ಲುತ್ತದೆ. ಅಹಿಂದ ವರ್ಗದ ಲಕ್ಷೋಪಲಕ್ಷ ಸಾಲಗಾರರ ಪಾಲಿಗಿದು ನಿಜಕ್ಕೂ ಹಿಂದ್ಯಾವುದೇ ಸರ್ಕಾರ ಮಾಡದ ಉಪಕಾರವಾಗಿತ್ತು, ಆದರೆ ಇದರ ಮಹತ್ವವನ್ನೇ ಲೋಕ ಮರೆಮಾಚಿತ್ತು. ಮುಖ್ಯಮಂತ್ರಿಯೊಬ್ಬ ಮೀಡಿಯಾ ಎಂಬ ಮಾಧ್ಯಮವನ್ನು ಪಳಗಿಸಿಕೊಳ್ಳದೇ ಹೋದರೆ ಅದನ್ನು ತನ್ನ ಮೂಗಿನ ನೇರಕ್ಕೆ ಬಳಸಿಕೊಳ್ಳುವಲ್ಲಿ ವಿಫಲನಾದರೆ ಎಂತೆಂಥಾ ದೊಡ್ಡ ಸಾಧನೆಗಳನ್ನೂ ವ್ಯವಸ್ಥಿತವಾಗಿ ಮರೆಮಾಚಲಾಗುತ್ತದೆ ಮತ್ತು ಬೇರಾರೂ ಮಾಡದ್ದನ್ನು ಮಾಡಿಯೂ ಅದರ ರಾಜಕಿಯ ಪರಿಣಾಮದಲ್ಲಿ ನಷ್ಟವಾಗುತ್ತದೆ.

ಮೌನ ಕ್ರಾಂತಿ

ಹಿಂದಿದ್ದ ಬಜೆಪಿ ಸರ್ಕಾರ, ಅದಕ್ಕೂ ಹಿಂದಿದ್ದ ಕುಮಾರಸ್ವಾಮಿ ಪ್ರಭುತ್ವ, ಅದಕ್ಕೂ ಮೊದಲಿದ್ದ ಕೃಷ್ಣ/ಧರ್ಮಸಿಂಗ್‌ಗಳಿಗೆ ಹೋಲಿಸಿದರೆ ಸಿದ್ದು ಹಿಡಿದ ದಾರಿ[illegible] ಬೇರೆ. ಯಡಿಯೂರಪ್ಪ ಸರ್ಕಾರ ಲಿಂಗಾಯ[illegible] ಪ್ರಭುತ್ವವೆನಿಸಿಕೊಂಡರೆ ಕುಮಾರಣ್ಣನ ಪ್ರಭುತ್ವಕ್ಕೆ ಒಕ್ಕಲಿ[illegible] ಆಧಿಪತ್ಯವಿತ್ತು, ಅದಕ್ಕೂ ಹಿಂದಿದ್ದ ಕೃಷ್ಣರದ್ದೂ ಒಕ್ಕಲಿ[illegible] ಪಾರುಪತ್ಯೆಯೆಂದೇ ಇತಿಹಾಸದಲ್ಲಿ ದಾಖಲಾಯಿ[illegible] ಮುಖ್ಯಮಂತ್ರಿಯಾದ ಸಿದ್ದು ಮತ್ತೊಬ್ಬ ಅರ[illegible] ಎನಿಸಬೇಕಿತ್ತು, ಹಾಗೆ ನೋಡಿದರೆ ಅರಸು ಬೆಳೆಸಿದ[illegible] ಹಿಂದುಳಿದ ದಲಿತ ಅಲ್ಪಸಂಖ್ಯಾತ ನಾಯಕರನ್ನು [illegible] ಹುಟ್ಟು ಹಾಕಲಿಲ್ಲ ಎಂಬುದನ್ನು ಬಿಟ್ಟರೆ ಸಾಮಾ[illegible] ಸವಲತ್ತು, ಕೊಡುಗೆ, ಸಾಧನೆಗಳಲ್ಲಿ ಅರಸುಗಿಂತ ಸಿದ್ದುವೇ[illegible] ಕಮ್ಮಿಯಿರಲಿಲ್ಲ.

ಇದಕ್ಕೆ ಒಂದಲ್ಲ ಎರಡಲ್ಲ ಹತ್ತಾರು ಉದಾಹ[illegible]ಗಳಿದ್ದವು. ಇವುಗಳ ಪೈಕಿ ಅತ್ಯಂತ ಕ್ರಾಂತಿಕಾರಕ ಮ[illegible] ಅಪೂರ್ವ ಕ್ರಮವೆಂದರೆ ಭೂಸುಧಾರಣಾ ಕಾಯ್ದೆಗೆ ತ[illegible] ತಿದ್ದುಪಡಿ ಮತ್ತು SEP-TSP ಕಾಯ್ದೆಗಳ ಜಾರಿ. ಸ[illegible] ಭೂಮಿಯಲ್ಲಿ ಬಡಬಗ್ಗರು ಕಟ್ಟಿಕೊಂಡಿದ್ದ ತಾಂಡಾಗ[illegible] ಹಾಡಿಗಳು ಮತ್ತು ಸ್ಲಮ್ಮುಗಳಲ್ಲಿದ್ದವರೆಲ್ಲ ದೀನದಲಿತ[illegible] ವಿಶೇಷವಾಗಿ ಅಹಿಂದ ವರ್ಗದ ಜನ. ಕಳೆದ ಹತ್ತ[illegible] ವರ್ಷಗಳಿಂದ ಅದೆಷ್ಟೋ ಸರ್ಕಾರಗಳು ಬಂದುಹೋ[illegible]ವಾದರೂ ಸರ್ಕಾರಿ ಭೂಮಿಯಲ್ಲಿ ಬಡಬಗ್ಗರು ನಿರ್ಮಿ[illegible] ಜನವಸತಿಗಳನ್ನು ಸಕ್ರಮಗೊಳಿಸುವು ದೇನೂ ಕಷ್ಟವಿರಲಿ[illegible] ಆದರೆ ಮೇಲ್ವರ್ಗದ ಮನಸ್ಥಿತಿ ಬಿಡಬೇಕಲ್ಲ.


ಕಳೆದ ಬಜೆಟ್ ಅಧಿವೇಶನದಲ್ಲಿ ಸಿದ್ದು ತ[illegible] ಭೂಸುಧಾರಣಾ ಕಾಯ್ದೆಯ ತಿದ್ದುಪಡಿಯಿಂದಾಗಿ ರಾ[illegible] ಹತ್ತು ಲಕ್ಷಕ್ಕೂ ಅಧಿಕ ಮಂದಿ ನಿರ್ಗತಿಕರ ಆತ[illegible] ಅಸ್ತಿತ್ವದ ಅಂತ್ಯವಾಗಿತ್ತು. ವಿರೋಧ ಪಕ್ಷಗಳೇ ಬೆಸ್ತು ಬಿದ್ದ[illegible] ಅರೆಮನಸ್ಸಿನಿಂದಲೇ ಶ್ಲಾಘಿಸಿದವು. ಆದ[illegible] ಮೀಡಿಯಾದಲ್ಲಾಗಲಿ ಸಾಮಾಜಿಕವಾಗಿಯಾಗಲಿ ಇ[illegible] ಯಾವ ಮಟ್ಟದ ಪ್ರಾಮುಖ್ಯತೆ ಪಡೆಯಬೇಕಿತ್ತೋ[illegible] ಪಡೆಯಲೇ ಇಲ್ಲ. ಇದಕ್ಕೂ ಮುನ್ನ ಸಿದ್ದು ದೇ[illegible] ಯಾವೊಬ್ಬ ಮುಖ್ಯಮಂತ್ರಿಯೂ ಕೈಹಾಕ[illegible] ದುಸ್ಸಾಹಸವೊಂದಕ್ಕೆ ಕೈಯಿಟ್ಟಿದ್ದು ಪರಿಶಿಷ್ಟ ಜಾ[illegible] ಪಂಗಡಗಳ ಅನುದಾನದ ವಿಷಯದಲ್ಲಿ.

ಸಂವಿಧಾನದ ಆಶಯಕ್ಕೇ ಕನ್ನವಿಟ್ಟಂತೆ ದಲಿತರ ಪಾ[illegible] ಅನುದಾನವನ್ನು ವ್ಯವಸ್ಥಿತವಾಗಿ ವಂಚಿಸಿ ಅದನ್ನು ಬೇರೆ[illegible] ಯೋಜನೆಗಳಿಗೆ ಬಳಸಲಾಗುತ್ತಿತ್ತು, ಹೆಸರಷ್ಟೇ ದಲಿತರ[illegible] ಇನ್ನೂ ಕೆಲವೆಡೆ ಮಂಜೂರಾದ ಅನುದಾನವನ್ನೇ ಹೆಪ್ಪುಗ[illegible] ಬಳಸದೇ ವಾಪಸ್ಸು ಮಾಡಲಾಗುತ್ತಿತ್ತು, ಇದನ್ನು ದೇ[illegible] ಯಾವೊಬ್ಬ ಮುಖ್ಯಮಂತ್ರಿಗಿಂತಲೂ ಮೊದಲು ತಡೆಗ[illegible] ಕೀರ್ತಿ ಸಲ್ಲಬೇಕಾಗಿದ್ದು ಸಿದ್ದುವಿಗೇ. ಅದು 201[illegible] ಬೆಳಗಾವಿ ಅಧಿವೇಶನದಲ್ಲಿ ಕೈಗೊಂಡ ಪರಿಶಿಷ್ಟ ಜ[illegible] ಪರಿಶಿಷ್ಟ ಪಂಗಡಗಳ ವಿಶೇಷ ಘಟಕ ಯೋಜನಾ ಕಾ[illegible]

ದೇಶಕ್ಕೆ ಮಾದರಿ

ಈ ಪ್ರಕಾರ ಶೋಷಿತ ಸಮೂಹಗಳಿಗೆ ಸಂವಿಧ[illegible] ಕಲ್ಪಿಸಿದ ಹಕ್ಕಾದ ಶೇ. 27ರಷ್ಟು ಮೀಸಲಾತಿ ಪಾ[illegible] ಅನುದಾನವನ್ನು ಕಡ್ಡಾಯವಾಗಿ ಅದೇ ಉದ್ದೇ[illegible] ಬಳಸುವುದು. ಅಂದರೆ ನಿಗದಿತ ಅವಧಿಯೊಳಗೆ ಯ[illegible] ಅಧಿಕಾರಿ ದಲಿತರು, ಬುಡಕಟ್ಟು ಸಮೂಹ[illegible] ಅನುದಾನವನ್ನು ಬಳಕೆ ಮಾಡುವುದಿಲ್ಲವೋ ಅದಕ್[illegible] ತಿಂಗಳ ಜೈಲು ಶಿಕ್ಷೆ!

ಇದು ಜಾರಿಗೆ ಬಂದಿದ್ದೇ ತಡ, ಮೇಲ್ವರ್ಗದ [illegible] ಅಧಿಕಾರಿಗಳೆಲ್ಲ ರಾತ್ರೋರಾತ್ರಿ ಬದಲಾದರು. ಪರಿಶಿಷ್ಟಜಾ[illegible] ಪಂಗಡಗಳ ಪಾಲಿನ ಅನುದಾನವನ್ನು ಅದೇ ಉದ್ದೇ[illegible] ಖರ್ಚು ಮಾಡಲೇಬೇಕಾದ ಅನಿವಾರ್ಯಕ್ಕೆ ಬಿದ್ದರು. [illegible] ಫಲವಾಗಿ ಪರಿಶಿಷ್ಟರ ಪಾಲಿನ ಸರ್ಕಾರಿ ಅನುದ[illegible] ಫಲಾನುಭವಿಗಳಿಗೆ ಮುಟ್ಟಲಾರಂಭಿಸಿತು. ಭ[illegible] ಅಧಿಕಾರಿಗಳಿಗೆ ಫಲಾನುಭವಿಗಳು ನೀಡಬೇಕಿದ್ದ ಲಂಚ[illegible]



ನೀರಾವರಿಗೊಂಡ ಬರಡು ನೆಲ

6.2 ಲಕ್ಷ ಎಕರೆ ಬರಡು ಭೂಮಿಗೆ ಗಂಗೆ ಹರಿದಾಗ...

ಸಿದ್ದು ಮುಖ್ಯಮಂತ್ರಿಯಾದಂದಿನಿಂದ ಈತನಕ ನೀರಾವರಿಗೆಂದು ಖರ್ಚು ಮಾಡಿದ್ದು ಬರೋಬ್ಬರಿ 50 ಸಾವಿರ ಕೋಟಿ. ಇದು ಯಾವುದೇ ಮುಖ್ಯಮಂತ್ರಿಯೊಬ್ಬ ಈತನಕ ನೀರಾವರಿಗೆಂದು ಮಾಡಿರದ ಖರ್ಚಿನ ದುಪ್ಪಟ್ಟಿನಷ್ಟು. ಇದರಿಂದಾಗಿ ವಿಶೇಷವಾಗಿ ಉತ್ತರ ಕರ್ನಾಟಕದ 6.2 ಲಕ್ಷ ಎಕರೆಗಳಷ್ಟು ಬರಡು ಭೂಮಿಗೆ ನೀರಾವರಿ ಕಲ್ಪಿಸಿದಂತಾಯ್ತು. ಮೇಲುನೋಟಕ್ಕಿದು ಸಡಗರವೊಂದು ಲೆಕ್ಕ ಕೊಡಲೆಂದೇ ಕಂಟ್ರಾಕ್ಟರ್‌ಗಳು, ಇಂಜಿನಿಯರ್‌ಗಳ ಕಮೀಷನ್ನಿಗೆಂದೋ ಹಾಕಿದ ಬಂಡವಾಳದಂತೆ ಕಾಣಬಹುದು ಅಥವಾ ಯಾರೇ ಟೀಕಿಸಲೂಬಹುದು. ಇದರ ಸಾಮಾಜಿಕ ಪರಿಣಾಮವೇ ಬೇರೆ ಸ್ವರೂಪದ್ದು. ನೀರಾವರಿಯಿಂದಾಗಿ ಬೇಸಿಗೆಯಲ್ಲಿ ನಗರಗಳಿಗೆ ಕೂಲಿಗಳಾಗಿ ಗುಳೇ ಹೋಗುತ್ತಿದ್ದ ಲಕ್ಷಾಂತರ ಹೈದರಾಬಾದ್ ಕರ್ನಾಟಕದ ಜನಕ್ಕೆ ಇದು ಜಂಜಾಟದಿಂದ ಮುಕ್ತಿ ನೀಡಲಿದೆ. ಗೋವಾ ಮತ್ತು ಮುಂಬೈನ ವೇಶ್ಯಾವಾಟಿಕೆಗಳಲ್ಲಿ ನಿರ್ನಾಮಗೊಳ್ಳುತ್ತಿದ್ದ ಸಹಸ್ರಾರು ಮಂದಿ ಉ.ಕ. ಭಾಗದ ಹೆಣ್ಣುಮಕ್ಕಳ ದುರಂತಕ್ಕೂ ಮದ್ದಾಗಲಿದೆ.

ಆದರೆ ಕಾಯಬೇಕಷ್ಟೇ. ಇದರ ಹೊರತಾಗಿಯೂ ಒಣಭೂಮಿ ಬೇಸಾಯಕ್ಕೆಂದು ಸಿದ್ದು ಸರ್ಕಾರ ಕೈಗೊಂಡ 1.2 ಲಕ್ಷ ಕೃಷಿ ಹೊಂಡಗಳ ನಿರ್ಮಾಣ ಬರಗಾಲಕ್ಕೆ ಹಾಕಿದ ಬರೆಯೇ. ಇಂಥ ಕೃಷಿ ಹೊಂಡಗಳ ಸಾರ್ಥಕತೆಯೂ ತಕ್ಷಣಕ್ಕೆ ಗೋಚರಿಸುವಂಥದ್ದಲ್ಲ. ನಗರವಾಸಿ ಸುಖಪುರುಷರಿಗೆ, ಬೆಡಗಿನ ಮೀಡಿಯಾಗಳಿಗಿದು ಸಾಧನೆಯಾಗಲಿ, ಭವಿಷ್ಯದ ಭರವಸೆಯಾಗಿಯಾಗಲಿ ಕಾಣಲು ಹೇಗೆ ತಾನೇ ಸಾಧ್ಯ?



ಣ ಬಿತ್ತು ಬಹುಶಃ ಯಾರೂ ನಂಬಲಿಕ್ಕಿಲ್ಲ. 2016- ಸಾಲೊಂದರಲ್ಲೇ ಕರ್ನಾಟಕದ ದಲಿತರು, ಬುಡಕಟ್ಟು ತರುಗಳ ಪಾಲಿಗೆ ಬರೋಬ್ಬರಿ 17 ಸಾವಿರ ಕೋಟಿ ಯಿಗಳಷ್ಟು ಅನುದಾನ ಸದ್ಬಳಕೆಯಾಗಿತ್ತು. ಇದು ಲ್ಲೇ ವಿನೂತನ ದಲಿತ ಪರ ಫಲಾನುಭವದ ವಿಶಿಷ್ಟ ನೆನಿಸಿಕೊಂಡಿತು. ದೇಶದ ಯಾವೊಬ್ಬ ್ಯಮಂತ್ರಿಯೂ ಕೈಹಾಕದ ದುಸ್ಸಾಹಸಕ್ಕೆ ಸಿದ್ದು ಟ್ಟದ್ದು ದೇಶಾದ್ಯಂತ ಸಂಚಲನವನ್ನೇ ಮೂಡಿಸಿತ್ತು. ೇರೆ ರಾಜ್ಯಗಳ ಅನೇಕ ಸರ್ಕಾರಗಳು ಸಿದ್ದು ರಿಯನ್ನೇ ಅನುಸರಿಸಲಾರಂಭಿಸಿದವು.

ಕಟವೆಂದರೆ ದಲಿತ ಸಮೂಹವಾಗಲಿ, ಸಾಮಾಜಿಕ ದ ಇನ್ನಾರೇ ಹರಿಕಾರರಾಗಲಿ ಸಿದ್ದು ಮಾಡಿದ ಈ ಯನ್ನು ಕೊಂಡಾಡುವುದಿರಲಿ, ಕಾಟಾಚಾರಕ್ಕೂ ಲಿಸಲಿಲ್ಲ. ಮಾಧ್ಯಮಗಳಂತೂ ಉದ್ದೇಶಪೂರ್ವಕವಾಗಿ ಗ್ಗೆ ಚಕಾರವೆತ್ತಲಿಲ್ಲ. ದಲಿತ ಸಂಘಟನೆಗಳಾಗಲಿ, ಕರಾಗಲಿ, ನೆಪಕ್ಕಾದರೂ ಮೆಚ್ಚುಗೆಯ ಮಾತಾಡಲಿಲ್ಲ. ಗ್ಯೂ ಯಾರೋ ಅನಾಮಧೇಯ ದಲಿತ ಭವಿಗೆ, ಹಳ್ಳಿಗಾಡಿನ ಬುಡಕಟ್ಟು ನಿರ್ಗತಿಕನೊಬ್ಬನಿಗೆ ರ ರುಷುವತ್ತು ರೆಕಮಂಡೂ ಇಲ್ಲದೆ ಬರುವ ತ್ತೊಂದೇ ಆತನ ಎದೆಯಲ್ಲಿ ಕೃತಜ್ಞತೆಯ ಳನ್ನೆಬ್ಬಿಸುತ್ತಿತ್ತು.

ರಸು ಕಾಲಕ್ಕೂ ಸಿದ್ದು ಕಾಲಕ್ಕೂ ಇದ್ದ ಮೀಡಿಯಾಗಳ ತಿ ಮತ್ತು ಪೂರ್ವಾಗ್ರಹಗಳ ಪರಿಣಾಮವಿದು. ಟಕದ ಪ್ರತಿ ಜಿಲ್ಲೆಯಲ್ಲೂ ತಲಾ 1 ಕೋಟಿಯ ಲ್ಲಿ ಸಿದ್ದು ಶುರುವಿಟ್ಟ ಮೊರಾರ್ಜಿ ದೇಸಾಯಿ ವಸತಿ ಳಾಗಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ್ಯವರ್ಧನೆಗೆಂದು ಸಿದ್ದು ಜಾರಿಗೆ ತಂದ ಕೌಶಲ್ಯ ೃದ್ಧಿ ಯೋಜನೆ, ರಾಜ್ಯಾದ್ಯಂತ ಪರಿಶಿಷ್ಟ ್ಯೋಗಿಗಳಿಗೆಂದು ಮಂಜೂರು ಮಾಡಿದ 6 ಸಾವಿರ ಗಳು, ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ, ಪಂಚಾಯ್ತಿಗಳ ನೌಕರರ ಗೌರವಧನ ಹೆಚ್ಚಿಸಿದ್ದು, ರ್ಜಿ ವಸತಿ ಶಾಲೆಗಳ ಹಾಗೆ ಕರ್ನಾಟಕಾದ್ಯಂತ ಅಂಬೇಡ್ಕರ್ ವಸತಿ ಶಾಲೆಗಳನ್ನು ತೆರೆಯ ಹೊರಟಿದ್ದು, ರೀತಿ ಹೆಣ್ಣು ಮಕ್ಕಳಿಗೆಂದು 125 ಕಿತ್ತೂರು ್ಮ ವಸತಿ ಶಾಲೆಗಳನ್ನು ಘೋಷಿಸಿದ್ದು ತಕ್ಷಣಕ್ಕಲ್ಲದೇ ದರೂ ದೂರಗಾಮಿಯಾಗಿ ಬೇರೆಯದೇ ರ್ತನೆಗಳನ್ನು ತರುವಂಥದ್ದು.

ಂದಿದ್ದ ಸರ್ಕಾರಗಳಿಗೆ ಹೋಲಿಸಿದರೆ ಇವೆಲ್ಲವೂ ಶೋಷಿತ, ಹಿಂದುಳಿದ ಸಮೂಹಗಳಿಗೆ ನವಚೈತನ್ಯ ಲ್ಲ ಕಾರ್ಯಕ್ರಮಗಳೇ. ಅನ್ನಭಾಗ್ಯ, ಕ್ಷೀರಭಾಗ್ಯ, ಕೃಷಿ ಕ್ಷೀರಧಾರೆ, ಆರೋಗ್ಯ ಭಾಗ್ಯ, ವಿದ್ಯಾಸಿರಿ ಮುಂತಾದ ಜನೆಗಳನ್ನು ಮಾಧ್ಯಮದ ವೈದಿಕ ಸಮೂಹ ಇವತ್ತಿಗೂ ಮಾಡುತ್ತಲೇ ಇದೆ. ಅನ್ನಭಾಗ್ಯದ ಮೂಲಕ ಉಚಿತ ಪಡೆಯುತ್ತಿರುವ ರಾಜ್ಯದ ಮೂರೂವರೆ ಕೋಟಿ ವರೆಲ್ಲ ಈ ಕಾರಣಕ್ಕಾಗಿಯೇ ದಾರಿಗಳಾಗುವುದಾದರೆ ಇಷ್ಟೊಂದು ಮಂದಿ ರೈತರೇಕೆ ತ್ಯೆ ಮಾಡಿಕೊಳ್ಳಬೇಕಿತ್ತು? ಉಚಿತ ಅಕ್ಕಿ ಕೊಟ್ಟ ವೂ ರೈತನ ಸಂಕಷ್ಟ ತೀರುತ್ತಿಲ್ಲವೆಂದರೆ ಸಮಸ್ಯೆಯ ಬೇರೆಯದೇ ಇದೆ. ರೈತಾಪಿ ಬಡವರೆಲ್ಲ ಕೇವಲ ಂಡು ಅಳಿದು ಹೋಗುವ ಹುಳುಗಳಂತೆ ಕಾಣುವ ಾಸಿ, ಮೇಲ್ಜಾತಿ ಭಾಗ್ಯವಂತರ ಮನಸ್ಥಿತಿಗಿದು ಹರಣೆಯಷ್ಟೇ.

ೀರಧಾರೆಯ ಮೂಲಕ ಲೀಟರ್ ಹಾಲಿಗೆ 2 ರಿಂದ ರೂಪಾಯಿ ಹೆಚ್ಚಿಸಿದ ಸಿದ್ದು ದೂರದೃಷ್ಟಿಯ ಮುಂದೆ ದ್ದ ಸರ್ಕಾರಗಳು ಭಿಕ್ಷೆಯಂತೆ ಹಾಕುತ್ತಿದ್ದ ಒಂದೋ ೋ ರೂಪಾಯಿ ತೃಣವಾಗಿ ಕಾಣುತ್ತದೆ. ಒಂದು ಗೂ ಅಧಿಕ ಅಂಗನವಾಡಿ ಮತ್ತು ಶಾಲಾಮಕ್ಕಳಿಗೆ ್ಯ ಉಚಿತ ಬಿಸಿಹಾಲು ನೀಡುವ ಕ್ಷೀರಭಾಗ್ಯವೊಂದೇ ಜಿಕ ಭದ್ರತೆಯಲ್ಲಿ ಕರ್ನಾಟಕವನ್ನು ನಂಬರ್ ಒನ್ ೇರಿಸಿತು. ಇದೆಲ್ಲಕ್ಕೂ ಮಿಗಿಲಾಗಿ ಸಿದ್ದು ಜಾರಿಗೆ ವಿದ್ಯಾಸಿರಿಯಿಂದಾಗಿ ನಗರವಾಸಿ ಮತ್ತು ಗ್ರಾಮೀಣ ಟಕದ ಬಡಮಕ್ಕಳ ಭವಿಷ್ಯದ ರೂಪುರೇಷೆಯೇ ಾಯಿತು. ರಾಜ್ಯದ 2.7 ಲಕ್ಷ ಕಾಲೇಜು ರ್ಥಿಗಳಿಗೆ ಊಟ ಮತ್ತು ವಸತಿಗೆ ಆರ್ಥಿಕ ನೆರವು ವ ಕ್ರಾಂತಿಕಾರಿ ಯೋಜನೆಯಿದು. ವಿದ್ಯಾರ್ಥಿಯೊಬ್ಬನ ವ್ಯಾಸಂಗಕ್ಕೂ 50 ಲಕ್ಷದ ತನಕ ಸರ್ಕಾರ ಗುತ್ತದೆಯೆಂದರೆ ಸಣ್ಣ ಮಾತೆ?

ಸೇವೂ ಮಾಡದೆ ಮೀಡಿಯಾಗಳನ್ನು ಸಂಭಾಳಿಸುತ್ತಿದ್ದ ಕುಮಾರಸ್ವಾಮಿ, ಯಡ್ಡಿಗೆ ಹೋಲಿಸಿದರೆ ಎಲ್ಲಾ ಮೂ ಯಾವುದೇ ಪ್ರಚಾರ ಪಡೆಯದ ಸಿದ್ದು ಾಗಿ ಕಾಣಿಸುತ್ತಾರೆ ಮತ್ತವರ ಕೆಲಸ ಮಾತ್ರವೇ ಡುತ್ತಿದೆ.

■ ರಾ. ಸೋಮನಾಥ್

ಬಳ್ಳಾರಿ: ದಲಿತನ ಭೂಮಿಗೆ ರಾಮುಲು ಭಂಟರ ಕನ್ನ!


ಬಿ.ಶ್ರೀರಾಮುಲು

ಅದು ಬರೋಬ್ಬರಿ ಎರಡು ಎಕರೆ ಜಾಗ. ಸಂಡೂರಿನ ಕುರೆಕುಪ್ಪ ಗ್ರಾಮದ ಸರ್ವೇ ನಂಬರ್‌ಗೆ ಸೇರಿದರು ತೋರಣಗಲ್ಲು ರೈಲ್ವೆ ಸ್ಟೇಷನ್‌ಗೆ ಅಂಟಿಕೊಂಡಿರುವ ಆ ಕಮರ್ಷಿಯಲ್ ಭೂಮಿ ಕೋಟ್ಯಂತರ ರೂಪಾಯಿ ಬೆಲೆಬಾಳುವಂತದ್ದು. ಅದರ ಒಡೆತನ ಸೇರುವುದು ಕಲ್ಲಪ್ಪ ಎಂಬ ದಲಿತನಿಗೆ. ಆತನೊಬ್ಬ ಅಸಹಾಯಕ ದಲಿತನಾಗಿರುವ ಕಾರಣಕ್ಕೆ ಆ ಭೂಮಿಯನ್ನು ಲಪಟಾಯಿಸಲು ಬಲಾಢ್ಯರು ಹೊಂಚುಹಾಕಿ ಕುಳಿತಿದ್ದಾರೆ. ಅದರಲ್ಲಿ ಬಹುಪಾಲು ಮಂದಿ ಸಂಸದ ಬಿ.ಶ್ರೀರಾಮುಲುನ ಚೇಲಾಗಳು! ಹಾಲಿ ಪಟ್ಟಣ ಪಂಚಾಯ್ತಿ ಅಧ್ಯಕ್ಷೆಯ ಮಾವ ಗುಮ್ಮನೂರು ಚೆನ್ನಬಸಪ್ಪ (ಜೆಸಿಬಿ), ಮಾಜಿ ತಾಲ್ಲೂಕು ಪಂಚಾಯ್ತಿ ಮೆಂಬರ್ ನೆಟ್ಟಪ್ಪನಂತವರೇ ಆ ದುಷ್ಟಕೂಟದ ಲೀಡರುಗಳು!!

ಸರ್ಕಾರದಿಂದ ಕಲ್ಲಪ್ಪನಿಗೆ ಈ ಭೂಮಿ ಹಲವು ವರ್ಷಗಳ ಹಿಂದೆಯೇ ಮಂಜೂರಾಗಿತ್ತು. ಅದಕ್ಕೆ ಸಂಬಂಧಿಸಿದ ಪಹಣಿ ಪತ್ರಗಳೆಲ್ಲ ಆತನ ಹೆಸರಿನಲ್ಲೇ ಇವೆ. ಆ ಜಮೀನು ರೈಲ್ವೆ ಸ್ಟೇಷನ್‌ಗೆ ಹತ್ತಿರದಲ್ಲೇ ಇದ್ದುದರಿಂದ ಕೃಷಿಗಿಂತ ಹೆಚ್ಚಾಗಿ ಕಮರ್ಷಿಯಲ್ ಚಟುವಟಿಕೆಗೇ ಅದು ಸೂಕ್ತವಾಗಿತ್ತು. ಆದರೆ ಬಡ ಕಲ್ಲಪ್ಪ ಆ ಜಮೀನನ್ನು ಡೆವಲಪ್ ಮಾಡಿ ಕಮರ್ಷಿಯಲ್ಲಾಗಿ ಲಾಭ ಮಾಡಿಕೊಳ್ಳುವಷ್ಟು ಅನುಕೂಲಸ್ಥನೂ ಅಲ್ಲ, ವ್ಯವಹಾರ ಕುಶಲಿಯೂ ಅಲ್ಲ. ಅದನ್ನೇ ಬಂಡವಾಳ ಮಾಡಿಕೊಂಡ ಒಂದಷ್ಟು ಮಂದಿ ಇಲ್ಲಿಗೆ ಹದಿನೈದು ವರ್ಷಗಳ ಹಿಂದೆ ತಿಂಗಳಿಗೆ ಇಂತಿಷ್ಟು ಅಂತ ಭೂಬಾಡಿಗೆ ಕೊಟ್ಟು ಆ ಜಮೀನಿನಲ್ಲಿ ಹೊಟೇಲು, ಹಾರ್ಡ್‌ವೇರ್ ಶಾಪು, ಫೋಟೊ ಸ್ಟುಡಿಯೊ, ಜೆರಾಕ್ಸ್ ಅಂಗಡಿಗಳನ್ನು ತೆರೆದು ಕುಳಿತಿದ್ದರು. ಒಂದೆರಡು ಗುಡಿಸಲುಗಳೂ ತಲೆ ಎತ್ತಿದ್ದವು.

ಮೊದಮೊದಲು ಸಣ್ಣ ಗುಡಿಸಲಿನ ರೂಪದಲ್ಲಿ ಒಕ್ಕರಿಸಿದ ಅವರು ಇಂದು ಅಲ್ಲಿ ದೊಡ್ಡದೊಡ್ಡ ಕಾಂಪ್ಲೆಕ್ಸ್‌ಗಳನ್ನೇ ಎಬ್ಬಿಸಿ ನಿಲ್ಲಿಸಿದ್ದಾರೆ. ಕಲ್ಲಪ್ಪನಿಗೆ ಏಳು ಮಂದಿ ಮಕ್ಕಳಿದ್ದಾರಾದರು, ತಿಂಗಳಿಗೆ ಬಾಡಿಗೆ ರೂಪದಲ್ಲಿ ಬರುವ ಕಾಸಿಗೆ ಯಾಕೆ ಅಡ್ಡಿ ಮಾಡಿಕೊಳ್ಳಬೇಕು ಅಂತ ಅವರೂ ಕ್ಯಾತೆ ತೆಗೆದಿರಲಿಲ್ಲ. ಆದರೆ ನೆಟ್ಟಪ್ಪ, ಜೆಸಿಬಿಯಂತವರು ನಿಧಾನಕ್ಕೆ ರಾಜಕೀಯವಾಗಿ ಬಲಿತುಕೊಳ್ಳು ತ್ತಿದ್ದಂತೆಯೇ ಈಗ ಆ ಜಾಗ ತಮಗೇ ಸೇರಬೇಕು ಎಂಬ ವರಾತ ತೆಗೆದು ಇಡೀ ಜಮೀನನ್ನು ಆಕ್ರಮಿಸಿಕೊಳ್ಳುವ ಹುನ್ನಾರ ನಡೆಸುತ್ತಿದ್ದಾರೆ. ಇವರೊಟ್ಟಿಗೆ ಅಲ್ಲಿ ತಮ್ಮ ಅಂಗಡಿಗಳನ್ನು ಹೊಂದಿರುವ ಆಗನೂರು, ಜೆಸಿಬಿಯ ತಮ್ಮನ ಮಗ ರಾಮಾಂಜನೇಯಲು, ಕೃಷ್ಣಸ್ವಾಮಿ, ಮೆಕ್ಯಾನಿಕ್ ಶೇಖರ್ ಮೊದಲಾದವರೂ ಕೈಜೋಡಿಸಿ ಅಮಾಯಕ ದಲಿತನನ್ನು ಬೀದಿಪಾಲು ಮಾಡಲು ಸಜ್ಜಾಗಿದ್ದಾರೆ.


ರಾಮಾಂಜನೇಯಲು

ಜೆಸಿಬಿಯ ಸೊಸೆಯೇ ಈಗ ಹಾಲಿ ಪಟ್ಟಣ ಪಂಚಾಯ್ತಿ ಅಧ್ಯಕ್ಷೆ. ಜೊತೆಗೆ ಶ್ರೀರಾಮುಲುನ ಬಿಜೆಪಿ ಚೇಲಾಗಳೆಂಬ ಅಹಮ್ಮು. ಇದೇ ಮದದಲ್ಲಿ ಅಧಿಕಾರ ದುರುಪಯೋಗ ಪಡಿಸಿಕೊಂಡು ಜೆಸಿಬಿಯ ತಮ್ಮನ ಮಗ ರಾಮಾಂಜನೇಯಲು ಇದೀಗ ಆ ಜಮೀನಿನಲ್ಲಿ ದೊಡ್ಡ ಹೀರೊಹೋಂಡಾ ಶೋ ರೂಂ ಕಟ್ಟುವುದಕ್ಕೂ ಮುಂದಾಗಿದ್ದಾನೆ. ಶ್ರೀರಾಮುಲುನ ಬೆಂಬಲವಿರುವುದರಿಂದಲೇ ತಹಸೀಲ್ದಾರ್ ಸೇರಿದಂತೆ ಯಾರೊಬ್ಬರೂ ಕಲ್ಲಪ್ಪನ ನೆರವಿಗೆ ಬರುತ್ತಿಲ್ಲ. ನೆರವು ಒತ್ತಟ್ಟಿಗಿರಲಿ ಜಮೀನಿಗೆ ಸಂಬಂಧಿಸಿದ ದಾಖಲೆ ಪತ್ರಗಳನ್ನು ನೀಡುವುದಕ್ಕೂ ತಾಲ್ಲೂಕು ಕಚೇರಿ ನೆಪ ಹೇಳುತ್ತಾ ಕೂತಿದೆ.

ಇದರ ಹಿಂದೆ ಜಿಂದಾಲ್ ಕಂಪನಿಯ ಕರಿನೆರಳೂ ಇದೆ. ಸಂಡೂರಿಗೆ ಜಿಂದಾಲ್ ವಕ್ಕರಿಸಿಕೊಂಡ ನಂತರ ಅಮಾಯಕ ಜನರ ಜಾಗ ಲಪಟಾಯಿಸುವ ಬ್ರಹ್ಮವಿದ್ಯೆಯ ಪರಂಪರೆಯನ್ನೇ ಅದು ಹುಟ್ಟುಹಾಕಿದೆ. ಸಾಲದ್ದಕ್ಕೆ ತಾಲ್ಲೂಕಿನ ಯಾವೊಂದು ಜಮೀನಿನ ದಾಖಲೆಪತ್ರವನ್ನೂ ಜನರಿಗೆ ಕೊಡದಂತೆ ಅದು ಕಂದಾಯ ಕಚೇರಿಯನ್ನು ಭ್ರಷ್ಟಗೊಳಿಸಿಟ್ಟಿದೆ. ಇದೇ ಧೈರ್ಯದಲ್ಲಿ ಇಂತಹ ಖೂಳರು ಬಡವರ ಜಮೀನಿಗೆ ಬೇಲಿ ಸುತ್ತುವ ಕಾಯಕದಲ್ಲಿ ತೊಡಗಿಸಿಕೊಂಡಿದ್ದಾರೆ.



ಪಟ್ಟಣ ಪಂಚಾಯಿತಿ ಅಧ್ಯಕ್ಷೆ ರಾಜೇಶ್ವರಿ

ಅಂದಹಾಗೆ, ರೈಲ್ವೆ ಹಳಿ ವಿಸ್ತರಣೆಗಾಗಿ ಈ ಜಮೀನು ಬೇಕೆಂದು ಬಹಳ ಹಿಂದೆ ರೈಲ್ವೆ ಇಲಾಖೆ ಕಲ್ಲಪ್ಪನಿಗೆ ನೋಟಿಸ್ ಕಳಿಸಿತ್ತು. ಆಗ ಸಂಡೂರು, ಕೂಡ್ಲಿಗಿ ಮತ್ತು ಧಾರವಾಡಗಳ ಕೋರ್ಟ್ ಮೆಟ್ಟಲೇರಿದ್ದ ಕಲ್ಲಪ್ಪನ ಪರವಾಗಿಯೇ ತೀರ್ಪು ಹೊರಬಿದ್ದಿತ್ತು. ಅಂದರೆ ಸರ್ವೇ ನಂಬರ್ 408ಸಿ ರ ಜಮೀನು ಕಲ್ಲಪ್ಪನಿಗೇ ಸೇರಬೇಕೆನ್ನುವುದನ್ನು ನ್ಯಾಯಾಲಯವೇ ಒಪ್ಪಿಕೊಂಡಾಗಿದೆ. ಮುಂದಿನ ದಿನಗಳಲ್ಲಿ ಈ ಜಮೀನಿನ ಮೇಲೆ ಯಾರ್‍ಯಾರ ಕಣ್ಣು ಬೀಳುತ್ತೋ ಅಂತ ಬೆದರಿದ ಕಲ್ಲಪ್ಪನ ಮಕ್ಕಳು ಅದನ್ನು ಮಾರಾಟ ಮಾಡಲು ಮುಂದಾಗಿದ್ದರು. ಆಗ ಕಂಪ್ಲಿಯ ಬಿಜೆಪಿ ಶಾಸಕ ಸುರೇಶ್ ಬಾಬುವಿನ ಮಾವ ರವಿ ಎಂಬಾತ ಖರೀದಿಸಲು ಒಪ್ಪಿ ಐದು ಲಕ್ಷ ಮುಂಗಡ ಕೊಟ್ಟು ಸೇಲ್ ಅಗ್ರಿಮೆಂಟ್ ಕೂಡಾ ಮಾಡಿಕೊಂಡಿದ್ದ. ಆದರೆ ಜೆಸಿಬಿಯ ದುಷ್ಟಕೂಟ ಆ ಜಾಗವನ್ನು ಖಾಲಿ ಮಾಡಲ್ಲ ಎಂಬ ತಗಾದೆ ತೆಗೆದು ಅದನ್ನು ಆಕ್ರಮಿಸಿಕೊಳ್ಳಲು ಮುಂದಾಗುತ್ತಿರುವುದನ್ನು ಕಂಡು ಆ ರವಿಯೂ ನನಗೆ ಆ ಜಮೀನು ಬೇಡ, ಐದು ಲಕ್ಷ ವಾಪಾಸ್ ಕೊಡಿ ಅಂತ ವರಾತ ಶುರು ಮಾಡಿಕೊಂಡಿದ್ದಾನೆ. ಅತ್ತ ಬಲಾಢ್ಯರ ಜೊತೆ ಕಾದಾಡಲೂ ಆಗದೆ, ಅಧಿಕಾರಿಗಳ ಮೇಲೆ ಭರವಸೆಯನ್ನೂ ಇಡಲಾಗದೆ ಕಲ್ಲಪ್ಪನ ಮಕ್ಕಳು ಈಗ ಅಕ್ಷರಶಃ ಕಂಗಾಲಾಗಿದ್ದಾರೆ.

ಯಾರ್‍ಯಾರು ಈ ಭೂಮಿ ನುಂಗಿ ನೀರು ಕುಡಿಯುತ್ತಿದ್ದಾರೋ ಅವರಿಗೆಲ್ಲಾ ಸಂಸದ ಬಿ.ಶ್ರೀರಾಮುಲುವಿನ ಅಭಯಹಸ್ತವಿದೆ. ಕಾರಣ ಅವರೆಲ್ಲ ವಾಲ್ಮೀಕಿ ಜಾತಿಗೆ ಸೇರಿದವರು. ದಲಿತ ಕಲ್ಲಪ್ಪನಿಗೆ ಯಾರ ಬೆಂಬಲವೂ ಇಲ್ಲ. ನ್ಯಾಯ ಬೇಕೆಂದು ಜಿಲ್ಲಾಧಿಕಾರಿ, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗೆ ಮನವಿ ನೀಡಿದರೂ ಪ್ರಯೋಜನವಾಗಿಲ್ಲ. ಕಾನೂನು ಕ್ರಮ ಕೈಗೊಳ್ಳಬೇಕಾದ ವರೆಲ್ಲಾ ರಾಮುಲು, ಜಿಂದಾಲ್‌ನ ಹಣದ ಅಮಲಿಗೆ ಬಿದ್ದು ಕೈ ಕಟ್ಟಿ ಕುಳಿತಿದ್ದಾರೆ.

ಹಾಗಂತ ಕಲ್ಲಪ್ಪ ಮತ್ತವರ ಮಕ್ಕಳು ಕೈಚೆಲ್ಲಿ ಕೂತಿಲ್ಲ. ಶತಾಯಗತಾಯ ಜಮೀನು ಪಡೆದೇ ತೀರಬೇಕೆನ್ನುವ ನಿರ್ಧಾರಕ್ಕೆ ಬಂದಿದ್ದಾರೆ. ಜಿಲ್ಲೆಯಲ್ಲಿ ಹಲವು ಭೂ ಹೋರಾಟಗಳನ್ನು ಕೈಗೊಂಡಿದ್ದ ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿಯ ಮೂಲಕ ನ್ಯಾಯಕ್ಕಾಗಿ ಹೋರಾಡಲು ಸಿದ್ಧವಾಗಿದ್ದಾರೆ.

■ ಮುತ್ತುರಾಜು


ಕಲ್ಲಪ್ಪನ ಹೆಸರಲ್ಲಿರುವ ಜಾಗದ ಪಹಣಿ

ನೀಗಿಕೊಂಡ ನಮ್ಮ ಗಿರೀಶ್



ಕಟ್ಟೆ ಪುರಾಣ'ದ ಮೇಟಿ ಪಾತ್ರವಾದ ಕಾಳಮಾವನಾಗಿ ನಟಿಸುತ್ತಿದ್ದ ಗಿರೀಶ್ ಮೊನ್ನೆ ಫೋನು ಮಾಡಿ "ಗೌಡ್ರೆ ನನಗೆ ರಾಜಸೂಯ ಯಾಗದಲ್ಲಿ ಭೀಮ ಸೌಗಂಧಿಕಾ ಪುಷ್ಪ ಹುಡುಕುತ್ತ ಹೋಗುವ ಪ್ರಸಂಗದ ಮಾಹಿತಿ ಇದ್ದರೆ ಕೊಡಿ" ಎಂದ. ನನ್ನಲ್ಲಿದ್ದ ಪ್ಲಾಟಿನ ಒಳಗಡೆ ಆ ಭಾಗವಿದ್ದುದರಿಂದ ಮರುದಿನ ಅದನ್ನು ತೆಗೆದುಕೊಂಡು ಜೊತೆಗೆ ನನ್ನ ಬಳಿಯಿದ್ದ ಅವನ ಒಂದೆರಡು ಫೋಟೋಗಳನ್ನು ಕೊಡಲು ತಯಾರಿ ನಡೆಸುತ್ತಿರುವಾಗ ವಾಟಿಸ್ಸೆ ಪಾತ್ರಧಾರಿ ಸಾಸ್ವೆಹಳ್ಳಿ ಸತೀಶ್ ಫೋನ್ ಮಾಡಿ "ಗೌಡ್ರೆ, ಗಿರೀಶ್ ಹೋಗಿಬಿಟ್ಟ" ಎಂದರು. ಕೂಡಲೇ ನನಗೆ ಶಾಕ್ ಆಗಲಿಲ್ಲ. ಏಕೆಂದರೆ ಕಳೆದವಾರ ವೈದ್ಯ ನಿರ್ದೇಶನ ಮಾಡಿದ್ದ 'ಅಂಧಯುಗ' ನಾಟಕ ನೋಡಲು ಹೋಗಿದ್ದಾಗ ಗಿರಿಯ ಆಕಾರ ಮತ್ತು ನಡಿಗೆ ನೋಡಿ "ಇನ್ನೊಂದು ತಿಂಗಳಿರಬಹುದು" ಎಂದು ಸುತ್ತಮುತ್ತಲವರಿಗೆ ಹೇಳಿದ್ದೆ.

ಅಸಾಮಾನ್ಯ ಪ್ರತಿಭಾವಂತ ಕೆಲವರಲ್ಲಿ ತಮ್ಮನ್ನೇ ತಾವು ನೀಗಿಕೊಳ್ಳುವ ಅಂಶವೊಂದು ಆದಾವುದೊ ಮೂಲೆಯಲ್ಲಿರುತ್ತದೆ. ಅದು ಹಠಾತ್ತನೆ ವಿಜೃಂಭಿಸತೊಡಗಿದ್ದಾಗ ಇಂತಹ ಹತ್ಯೆಗಳು ಸಂಭವಿಸುತ್ತವೆ. ಈ ಹಿಂದೆ ನಾನು ಧ್ರುವರಾಜ ದೇಶಪಾಂಡೆ ಮತ್ತು ಎಣಗಿ ನಟರಾಜನನ್ನ ನೋಡಿದ್ದರಿಂದ ಆ ದಾರಿಯಲ್ಲಿ ಸಾಗುತ್ತಿದ್ದ ಗಿರೀಶನ ಬಗ್ಗೆ ಯಾವ ಭರವಸೆಯೂ ಉಳಿದಿರಲಿಲ್ಲ. ಆದರೆ ಇಂತಹ ಸಾವುಗಳಿಂದ ರಂಗಭೂಮಿಗೆ ನಷ್ಟವಾಗುತ್ತದೆ.

ಗಿರಿ ಒಬ್ಬ ಅಸಾಮಾನ್ಯ ಕಲಾ ನಿರ್ದೇಶಕನಾಗಿದ್ದ. ಈತನ ಪ್ರತಿಭೆ ಗ್ರಹಿಸಿದ್ದ ಜಿ.ವಿ. ಅಯ್ಯರ್ ತಮ್ಮ 'ವಿಶ್ವಾಮಿತ್ರ' ಚಿತ್ರಕ್ಕೆ ಬಳಸಿಕೊಳ್ಳಲು ತಯಾರಿ ನಡೆಸಿದ್ದರು. ಆದರೆ ಅಷ್ಟರಲ್ಲಿ ಅವರೇ ಹೋಗಿಬಿಟ್ಟರು. ಕೆ.ಎಸ್.ಎಲ್ ಸ್ವಾಮಿ (ರವಿ) ಕೂಡ ಗಿರೀಶ್ ಪ್ರತಿಭೆಗೆ ಮಾರು ಹೋಗಿದ್ದರು. 'ಗಂಡುಗಲಿ ಕುಮಾರರಾಮ' ಚಿತ್ರಕ್ಕೆ ಕಲಾ ನಿರ್ದೇಶನ ಮಾಡಿದ್ದ ಗಿರೀಶ್ ಕವಿತಾ ಲಂಕೇಶ್ ನಿರ್ದೇಶನದಲ್ಲಿ 'ಅವ್ವ' ಸಿನಿಮಾದಲ್ಲಿ ಬೂಸಿಬಸ್ಯನ ಪಾತ್ರ ಮಾಡಿದ್ದ.

ನಾನು ಮೊಟ್ಟಮೊದಲು ನೋಡಿದಾಗ ಅವನ ಹುಲಿ ಕಣ್ಣಿಗೆ ಬೆರಗಾಗಿದ್ದೆ. 'ಕಟ್ಟೆ ಪುರಾಣ'ದ ಕಾಳಮಾವನ ಪಾತ್ರ ನಿರ್ವಹಿಸಿದ್ದಲ್ಲದೆ ಅದರ ನಿರ್ದೇಶನವನ್ನು ಮಾಡಿ ರಂಗವಿನ್ಯಾಸವನ್ನು ಅವನೇ ಮಾಡಿದ್ದ. ರಂಗಭೂಮಿ ವಿಷಯದಲ್ಲಿ ಅವನೆಷ್ಟು ನಿಷ್ಠೂರಿ ಎಂದರೆ ಸಣ್ಣಪುಟ್ಟ ಅಸಂಬದ್ಧವನ್ನು ಸಹಿಸುತ್ತಿರಲಿಲ್ಲ, ಸೆಟ್ ಹಾಕಿದ ಮೇಲೆ ಉಳಿದ ಕೆಲಸ, ಹಾಗೆಯೇ ನಾಟಕ ಮುಗಿದಕೂಡಲೇ ಸೆಟ್ ಬಿಚ್ಚಿ ಪ್ಯಾಕ್ ಮಾಡಿದ ಮೇಲೆ ಊಟ. ಆದರೆ ಈಚೆಗೆ ಈ ಕೆಲಸಗಳೆಲ್ಲಾ ಎಣ್ಣೆ ಮೇಲೆಯೇ ನಡೆಯುತ್ತಿದ್ದವು.

ಒಂದು ಹಂತದಲ್ಲವನು ಎಲ್ಲರಿಗೂ ವಿದಾಯ ಹೇಳಿ ಹೊರಟಂತೆ ಕಂಡ. ಆಗ ಆತನ ಅಕ್ಕ ಕುಡಿಯದಂತೆ ಯಾವುದೋ ಮದ್ದು ಕೊಡಿಸಿ ಉಳಿಸಿಕೊಂಡರು. ಮರಳಿ ಬಂದ ಆತ ಕೃಶವಾದ ದೇಹಕ್ಕೆ ಭರ್ಜರಿ ಮೀಸೆ ಅಂಟಿಸಿಕೊಂಡು ಬಂದು ಕಾಳಮಾವನ ಪಾತ್ರ ಮಾಡಿದ. ಅಂತೂಇಂತೂ ಐವತ್ತು ಶೋ ಮುಗಿಸಿ ಸುಮ್ಮನಾದೆವು. ನಮ್ಮ ನಾಟಕದ ಇಡೀ ಪ್ಲಾಟು ಆತನ ಬಾಯಲ್ಲಿ ಇದ್ದುದರಿಂದ ಯಾವುದೇ ಹೊಸ ಪಾತ್ರ ಬಂದರೂ ಅದರ ಸಂಭಾಷಣೆಯನ್ನ ತಾನೇ ಹೇಳಿ ಅದಕ್ಕೆ ಉತ್ತರ ಕೊಟ್ಟುಕೊಂಡು ಮುಂದೆ ಹೋಗುತ್ತಿದ್ದ.

ಒಮ್ಮೆ ಹಾನಗಲ್‌ನಲ್ಲಿ ನಡೆದ 'ಕಟ್ಟೆ ಪುರಾಣ' ನಾಟಕಕ್ಕೆ ಮಾಮೂಲಿ ಜುಮ್ಮಿ ಪಾತ್ರ ಬರಲಾಗಲಿಲ್ಲ. ಆಗ ಗಿರಿ ಸಾಗರದ ಪ್ರತಿಭಾಳನ್ನು ಕೂರಿಸಿಕೊಂಡು ಡೈಲಾಗ್ ಹೇಳಿಕೊಟ್ಟ. ಜೊತೆಗೆ ಮೂಮೆಂಟನ್ನು ಅವಳಿಗೆ ಮನದಟ್ಟು ಮಾಡಿ ಎಲ್ಲರೊಡನೆ ಪ್ರಾಕ್ಟಿಸ್ ಇಲ್ಲದೆ ನೇರ ಸ್ಟೇಜಿಗೆ ಬಂದು ನಾಟಕ ಮಾಡುವಂತೆ ತಯಾರು ಮಾಡಿಕೊಂಡು ಬಂದಿದ್ದ.

ನಾನು ಗಮನಿಸಿದಂತೆ ಆತ ನಾಟಕಕ್ಕೆ ಮುನ್ನಿನ ಸಭೆ ಮಾತಿಗೆ ಕಿವಿಗೊಟ್ಟವನಲ್ಲ. ಹಾಗೆಯೇ ಮುಗಿದನಂತರ ಮೆಚ್ಚುಗೆ ಮಾತು, ಹಾರ, ಫಲಕ ಇತ್ಯಾದಿ ಕಡೆ ತಿರುಗಿ ನೋಡಿದವನಲ್ಲ. ನಾಟಕ ಪ್ರದರ್ಶನವಷ್ಟೆ ಅವನ ಭಾಗಕ್ಕೆ ಮುಖ್ಯ. ಹಾಗೆಯೇ ಮಾಡಿದ ಕೆಲಸಕ್ಕೆ ಪ್ರತಿಯಾಗಿ ಹೊಟ್ಟೆ ತುಂಬ ಎಣ್ಣೆ ತುಂಬಿಸಿಕೊಂಡರಾಯ್ತು. ಆ ಅಮಲಿನ ಮುಂದೆ ಇನ್ನಾವ ಮೆಚ್ಚುಗೆ ಫಲಕ ತೃಣಮಾತ್ರದವಾಗಿದ್ದವು.

ಗಿರೀಶ್ ತೀರಿಕೊಳ್ಳುವ ಮುನ್ನವೂ ತಮಾಷೆ ಮಾಡಿ ಹೋಗಿದ್ದಾನೆ. ಆತ ತೀರ ಅಸ್ವಸ್ಥನಾದ ಕೂಡಲೇ ಇಲ್ಲಿನ ನಂಜಪ್ಪ ಆಸ್ಪತ್ರೆಗೆ ತೆಗೆದುಕೊಂಡು ಹೋದಾಗ ಪ್ರಜ್ಞೆ ಮರಳಿದ ಗಿರೀಶ್ "ಎಲ್ಲಿಗೆ ಕರೆದುಕೊಂಡು ಬಂದಿದ್ದೀರಿ?" ಎಂದಿದ್ದಾನೆ. "ನಂಜಪ್ಪ ಆಸ್ಪತ್ರೆಗೆ" ಎಂದಿದ್ದಾರೆ. "ಇಲ್ಲಿಗೆ ಬಂದೋರ್‍ದ್ಯಾರು ವಾಪಸ್ಸೋಗಲ್ಲ ಅಂತ ಗೊತ್ತಿಲ್ಲವ್ವೆ?" ಎಂದಿದ್ದಾನೆ. ಇದನ್ನು ಕೇಳಿಸಿಕೊಂಡ ವೈದ್ಯರು ಗರ ಹೊಡೆದಂತೆ ನಿಂತಿದ್ದಾರೆ. ಏಕೆಂದರೆ ಗಿರಿ ಸತ್ಯವನ್ನೇ ಹೇಳಿದ್ದ. ಈಚೆಗೆ ಮನೆಯಲ್ಲೇ ಸುಖವಾಗಿ ಪ್ರಾಣ ಬಿಡುವವರನ್ನೆಲ್ಲಾ ಆಸ್ಪತ್ರೆಗೆ ತೆಗೆದುಕೊಂಡು ಓಡುವುದು, ಅಲ್ಲಿ ತೀರಿಕೊಂಡ ನಂತರ ಸಾವಿರಾರು ರೂಪಾಯಿ ಬಿಲ್ಲು ಕಟ್ಟಿ ಮನೆಗೆ ಹೆಣ ತರುವುದು ಮಾಮೂಲಿನ ಸಂಗತಿಯಾಗಿದ್ದು ಗಿರೀಶ್‌ಗೂ ಗೊತ್ತಿತ್ತು.

ಸೂಕ್ಷ್ಮವಾಗಿ ನೋಡಿದರೆ ನಮ್ಮ ಗಿರಿ ಬಿ.ಬಿ. ಸ್ಟ್ರೀಟಿನಲ್ಲಿ ಬದುಕಿದ್ದ 'ಸಂಸ್ಕಾರ'ದ ನಾರಣಪ್ಪನಾಗಿದ್ದ. ಆದರೆ ಈತನ ವಿಷಯದಲ್ಲಿ ಚಂದ್ರಿ, ಗಿಂದ್ರಿ ಸಂಗತಿಗಳಿರಲಿಲ್ಲ. ಆದರೂ ಬೆಂಗಳೂರಲ್ಲಿ ಒಳ್ಳೆ ರುಚಿಕಟ್ಟಾದ ಪೋರ್ಕು ಹೋಟೆಲು ಎಲ್ಲಿವೆ ಎಂಬುದು ಗಿರಿಗೆ ಚೆನ್ನಾಗಿ ಗೊತ್ತಿತ್ತು. ನನ್ನ ಮನೆಯಲ್ಲಿ ಮಾಡಿದಾಗಲೂ ತಿಳಿಸುತ್ತಿದ್ದೆ. ಇಂತಿದ್ದ ಗಿರಿ ತನ್ನ ಮುಸ್ಲಿಂ ಗೆಳೆಯರಿಗೆ 'ಮಂದಿರವಲ್ಲೇ ಕಟ್ಟುವೆವು' ಎಂಬ ಮೆಸೇಜ್ ಕಳಿಸುತ್ತಿದ್ದ. ಇದು ಕಿಡಿಗೇಡಿತನವೇ ಹೊರತು ಇನ್ನೇನೂ ಆಗಿರಲಿಲ್ಲ. ಅಷ್ಟು ನಾಟಕ ಆಡಿದಾಗ ಯಾವುದೊ ಹೆಸರಿನಲ್ಲಿ ವಿಮರ್ಶೆ ಬರೆಯುತ್ತಿದ್ದ. ಅಲ್ಲೂ ಕಿಡಿಗೇಡಿ ಸಾಲಿರುತ್ತಿದ್ದವು.

ನಾನು ಬ್ರಾಹ್ಮಣರ ಶವಸಂಸ್ಕಾರಕ್ಕೆ ಹೋಗಿದ್ದು ... ಮೊದಲು. ಅಲ್ಲಿ ನನಗಾದ ಆಘಾತ ಯಾವುದ... ಐದಾರು ಜನ ಬ್ರಾಹ್ಮಣರನ್ನು ಬಿಟ್ಟರೆ ಇನ್ನುಳಿದವ... ನಾವೆ. "ಇದ್ಯಾಕೆ ಹಿಂಗೆ?" ಎಂದು ಕೇಳಿದಾಗ "ಬ್ರಾಹ್ಮ... ಇದೇ ತರ. ಯಾರೂ ಬರಲ್ಲ" ಎಂದರು. ಹೊ... ಗಿರಿಯನ್ನು ಬಳಸಿಕೊಂಡ ಬ್ರಾಹ್ಮಣ ಪತ್ರಕರ್ತರು, ... ನಿರ್ದೇಶಕರು, ಅವರಾದರೂ ಬರುವುದು ಬೇಡವೆ. ಬ್ರಾ... ಸಮಾಜದಲ್ಲಿ ಸತ್ತವನನ್ನು ಇಷ್ಟೊಂದು ತಿರಸ್ಕಾ... ನೋಡುತ್ತಾರ ಎಂದು ಅಚ್ಚರಿಯಾಯ್ತು.

ಜೊತೆಗೆ ಚಿಕ್ಕಮಗಳೂರಲ್ಲಿ ನಾನೇ ನೋಡಿದ ... ನೆನಪಿಗೆ ಬಂತು. ಅಲ್ಲಿ ಹಿಂದೆ ಹವ್ಯಕರೊ... ತೀರಿಕೊಂಡರು. ಅಲ್ಲಿದ್ದ ಬ್ರಾಹ್ಮಣರಾರೂ ಬರಲಿಲ್ಲ. ... ನೋಡಲಾಗದ ಮುಸ್ಲಿಂ ಒಬ್ಬ ನಾಲ್ಕು ಜನರನ್ನು ... ಮಾಡಿಕೊಂಡು ಹೇಗೊ ಸಂಸ್ಕಾರ ಮಾಡಿದರು.

ಅನಂತಮೂರ್ತಿಯವರ 'ಸಂಸ್ಕಾರ'ದಲ್ಲೂ ಮು... ನೊಬ್ಬ ನಾರಣಪ್ಪನ ಸಂಸ್ಕಾರ ಮಾಡಿದ ಘಟನೆ... ಇದನ್ನೆಲ್ಲಾ ನೋಡುವಾಗ "ಅಯ್ಯೋ ತಬ್ಬಲಿ ಬ್ರಾಹ್... ಎಂಬ ಉದ್ಗಾರ ಹೊರಟಿತು. ಆದೇ ನ... ಬಂಧುಬಾಂಧವರನ್ನು ಚಿತೆಯ ಹತ್ತಿರದಿಂದ ದೂಡು... ಸಾಹಸವಾಗುತ್ತದೆ. ಎದೆಯ ದುಃಖವನ್ನೆಲ್ಲಾ ಅಲ್ಲೇ ... ನಿತ್ರಾಣವಾಗಿ ನಡೆದು ಬರುತ್ತಾರೆ. ಆದರಿಲ್ಲಿ ಗಿರಿ ...

ಆತನ ಏಳೆಂಟು ವರ್ಷದ ಮಗ ಎಂದಿನ ಉ... ದಲ್ಲೇ ಇದ್ದ. ಅಪ್ಪನನ್ನು ಸುತ್ತುವಾಗಲು ಅವನಿಗದು ... ತಮಾಷೆ. ಚಿತೆಗೆ ಕೊಳ್ಳಿ ಇಡುವಾಗಲೂ ಆತ ... ದೊಂದಿ ಹಿಡಿದಂತೆ ಅಲ್ಲಾಡಿಸಿ ನಗುತ್ತಾ ಅಪ್ಪನ ವ... ಸೌದೆಗೆ ಇಡುತ್ತಿದ್ದ. ಮಕ್ಕಳು ಶವಸಂಸ್ಕಾರದ ಆಟವಾಡಿ... ತೇಜಸ್ವಿಯವರು ಕುವೆಂಪು ಚಿತೆಗೆ ಬೆಂಕಿ ಇಡು... ತುಟಿ ಬಿರಿದು ನಕ್ಕಿದ್ದು ನೋಡಿದ್ದೆ. ಈಗ ಗಿರಿ ಮ... ನೋಡುವಾಗ ನಿಜಕ್ಕೂ ಬುದ್ಧ ಪ್ರಜ್ಞೆ ಎಂದರೆ ... ಇರಬೇಕು ಅನ್ನಿಸಿತು.

■ ಬಿ.ಚಂದ್ರೇಗ...

ಧಾತ್ತೇರಿ

■ ಬಿ.ಚಂದ್ರೇಗೌಡ

ಪತ್ರಕರ್ತರಿಗೆ ಭಾಳ ಖರ್ಚು ಬರ್ತಾ ಅದೆ ಸಾರ್

ಆಡಾಡುತ್ತ ಆಯಸ್ಸೇ ಮುಗಿದಂತೆ ಸಿದ್ದರಾಮಯ್ಯನ ಸರಕಾರದ ನಾಲ್ಕು ವರ್ಷ ನೆಗೆದುಬಿದ್ದು ಹೋಯ್ತಲ್ಲಾ, ಅವರ ಭಾಗಕ್ಕೆ ಇದೊಂದು ಸಂಭ್ರಮದ ಸಂದರ್ಭವಾಗಿರುವಾಗ ಮಾತನಾಡಿಸಿದರೆ ಹೇಗೆ ಅನ್ನಿಸಿ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್‌ಟೋನ್: "ಕರಿಯ ಕಂಬಳಿ ಗದ್ದುಗೆ ಮಾಡಿ ವೀರದೊಳ್ಳ ತಂದಿರಿಸಿದರೊ...."

"ಹಲೋ?"

"ನಮಸ್ಕಾರ ಸಾರ್, ನಾನು ಯಾಹು."

"ಏನ್ರಿ ಯಾಹೂ?"

"ನಾಲ್ಕು ವರ್ಷ ಪೂರೈಸಿದ್ದೆ ಅಭಿನಂದನೆ ಸಾರ್."

"ಆಯ್ತು."

"ಚಿತ್ರದುರ್ಗದ ಕಾರ್ಯಕ್ರಮ ಚನ್ನಾಗಿತ್ತು ಸಾರ್?"

"ಆ?"

"ಚಿತ್ರದುರ್ಗದಲ್ಲಿ ನಿಮ್ಮ ಸಭೆಗಿಂತ ಜಾನಪದ ಕಲಾತಂಡಗಳ ಮೆರವಣಿಗೆ ತುಂಬ ಚನ್ನಾಗಿತ್ತು ಸಾರ್."

"ಆಂಜನೇಯ ಅರೇಂಜ್ ಮಾಡಿದ್ದ."

"ಇನ್ನ ಒಂದು ವರ್ಷ ಬಾಕಿ ಇದೆ ಸಾರ್. ಏನ್ಮಾಡ್ತೀರಿ?"

"ಈಗ ಮಾಡಿದ್ನಲ್ಲ ಮುಂದುವರುಸ್ತಿವಿ."

"ನಿಮ್ಮ ಕಾರ್ಯಕ್ರಮ ಹೆಚ್ಚು ಪ್ರಚಾರ ಪಡಕೊಂಡಿಲ್ಲ ಸಾರ್. ಅದ್ಕೆ ಯಲ್ಲಾ ಜಿಲ್ಲೆಲೂ ಇಂತ ಸಭೆ ಮಾಡಿ."

"ನೋಡಣ ಇರಿ."

"ಪತ್ರಿಕೆ, ದೃಶ್ಯ ಮಾಧ್ಯಮದವರ ಚೆನ್ನಾಗಿಟ್ಟಗಬೇಕು ಸಾರ್."

"ಚನ್ನಾಗಿ ಅಂದ್ರೆ?"

"ಪಾರ್ಟಿ ಕೊಡಬೇಕು. ಗಿಫ್ಟ್ ಕೊಡಬೇಕು. ಕವರ್ ಕೊಡಬೇಕು."

"ಅದ್ಯಾಕ್ ಕೊಡಬೇಕು? ಅವುರಿಗೆ ಪತ್ರಿಕೆಯವರು ಸಂಬಳ ಕೊಡಲ್ವಾ?"

"ಅದು ಸಾಲಲ್ಲ ಸಾರ್. ಸುದ್ದಿಗೋಸ್ಕರ ದಿವಸ ಪಾರ್ಟಿ ಮಾಡಬೇಕಾಯ್ತದೆ. ಬರದ ಮ್ಯಾಲೆ ಕುಡಿಬೇಕಾಯ್ತದೆ. ಇವತ್ತು ಪತ್ರಕರ್ತನಿಗೆ ಭಾಳ ಖರ್ಚು ಬತ್ತಾ ಆದೆ ಸಾರ್."

"ಆ ಕರ್ಚು ನಾವು ತುಂಬಸಕ್ಯಾಗಲ್ಲ, ಅದು ಬುಟ್ಟು ಬ್ಯಾರೆ ಕ್ಯಲಸ ಮಾಡ್ರಿ."

"ನೀವು ರಾಜಕಾರಣ ಬುಟ್ಟು ಬ್ಯಾರೆ ಕ್ಯಲಸ ಮಾಡಕ್ಯಾಯ್ತದಾ? ಅಂಗೆ ನಾವುವೆ."

"ಪತ್ರಕರ್ತರು ಮರ್‍ಯಾದ್ಯಂಗಿದ್ರೋ ಅಂಗಿದ್ರೆ ಯಾವ ಸಮಸ್ಯೆನೂ ಇರಲ್ಲ ಕಂಡ್ರಿ. ನಾನು ಜವಾಬ್ದಾರಿ ಹೆಚ್ಚಾದಂಗೆ ಸಿಗರೇಟ್ ಬುಟ್ಟೆ, ಡ್ರಿಂಕ್ಸ್ ಬುಟ್ಟೆ. ಡ್ರೆಸ್ಸಿನ ವ್ಯಾಮೋಹನೂ ಇಲ್ಲ. ಪಂಚೆ, ಜುಬ್ಬ, ಹ್ಯಗಲ ಮ್ಯಾಲೊಂದು ಟವಲ್ ಹಾಯ್ಕತ್ತಿನಿ. ಮನ್ಸ ಸರಳವಾಗಿದ್ರೆ ಯಾವ ಸಮಸ್ಯೆನೂ ಬರಲ್ಲ."

"ಪತ್ರಕರ್ತರು ಅಂಗಿರಕ್ಯಾಗಲ್ಲ ಸಾರ್."

"ಅಂಗಿರಕ್ಯಾಗಲ ಅಂದ್ರೆ ನಾವೇನು ಮಾಡದ್ರೀ..."

"ಅಧಿಕಾರದಲ್ಲಿದ್ದೋರು ನೋಡಿಕಬೇಕಾಗತ್ತೆ ಸಾರ್. ಆ ಎಡೂರಪ್ಪನೊರಿದ್ದಾಗ ನಮಗಂತೂ ಸುವರ್ಣಯುಗ ಸಾರ್."

"ಅದ್ಕೆ ಈಗಿನಿಂದ್ಲೆ ಸುರು ಮಾಡಿಕಂಡಿದ್ದಿರಿ."

"ಯಲ್ರು ಅಲ್ಲ ಸಾರ್, ಕೆಲವರು."

"ನೋಡಿ, ಜನ ಸುಳ್ಳು ಮಾತು, ಸುಳ್ಳು ಬರವಣಿಗೆನ ನಂಬಲ್ಲ, ನಿಮ್ಮ ಕೆಲಸ ನೀವು ಮಾಡಿ, ನಮ್ಮ ಕೆಲಸ ನಾವು ಮಾಡ್ತಿವಿ."

"ಜನ ಸುಳ್ಳು ಮಾತು, ಸುಳ್ಳು ಬರಹ ನಂಬತರೆ ಸಾರ್. ಆ ರವಿ ಸುಯ್‌ಸೈಡ್, ತೀರ್ಥಳ್ಳಿ ನಂದಿತಾ ಆತ್ಮಹತ್ಯೆಲಿ ನಂಬಿದ್ರು. ನೀವೆ ನೋಡಿದ್ರಲ್ಲ."

"ನಂಬಿದ್ರು ಸರಿ. ಇವತ್ತು ನಂಬತರಾ?"

"ನಿಜ, ತಡವಾಗಿ ಗೊತ್ತಾದ್ರೆ ಏನು ಪ್ರಯೋಜನ. ಪುರೋಹಿತಶಾಹಿ ಪತ್ರಕರ್ತರು ತುಂಬ ಘಾಸ್ಟಿದಾರೆ ಸಾರ್."



"ಇರ್ಲಿ ಬುಡಿ."

"ಮೀಡಿಯಾ ಬಳಸಿಗಂಡೆ ಮೋದಿ ತಂದ್ರು. ಇಲ್ಲೂ ಸಂತೋಷ್‌ಜಿ ತರಕ್ಕೆ ಹಿಕ್ಕಮತ್ತು ನ್ಯಡಿಸ್ಯ...

"ಸಂತೋಷ್‌ಜಿ ಯಾರು?"

"ಆತ ಆರೆಸೆಸ್ಸಿನ ಆತ್ಮ."

"ಎಲ್ಕವುರೇ?"

"ಉಡುಪಿ ಕೃಷ್ಣಮಠದ ಆವರಣದಲ್ಲಿದ್ರು. ಈಗ... ಕರ್ನಾಟಕನೆ ಆವರಿಸಿಗತ್ತಾ ಅವ್ರೆ."

"ಸೀ.... ಆ ತರ ಅಗೋಚರವಾಗಿದ್ದೋರು ... ಬಂದು ರಾಜಕಾರಣ ಮಾಡಕ್ಯಾಗಲ್ಲ."

"ಬಿಜೆಪಿಲದು ಸಾಧ್ಯ ಸಾರ್. ಉತ್ತರ ಪ್ರ... ಸಿ.ಎಂ. ನಾಥ ಅನ್ನೋನು ವಕ್ಕರಿಸಿದ್ದು ಅಂಗೆಯ..."

"ಉತ್ತರ ಪ್ರದೇಶ ಬ್ಯಾರೆ, ಕರ್ನಾಟಕ ಬ್ಯಾರೆ ... ಬಸವಣ್ಣ, ಸಂತರು, ಸಿದ್ದುರು, ಅರಸು, ಕುವೆಂಪು ... ಹೋಗ್ಯವುರೆ."

"ಬಸವಣ್ಣನ ಜನಗಳನ್ನು ಪುರೋಹಿತರು ಆಪ್ರ... ತಗಂಡವುರೆ ಸಾರ್."

"ಅದ್ಯಲ್ಲ ಸುಳ್ಳು. ನಂಜನಗೂಡಲ್ಲಿ, ಗುಂಡ್ಲುಪ... ಲಿಂಗಾಯತ್ರು, ಬ್ರಾಹ್ಮಣರು ನಮಿಗೆ ಓಟು ಮಾಡ್..."

"ಓವರ್ ಕಾನ್ಫಿಡೆನ್ಸ್ ವಳ್ಳೆದಲ್ಲ ಸಾರ್."

"ಓವರ್ ಕಾನ್ಫಿಡೆನ್ಸಲ್ಲ ಕಂಡ್ರೀ. ಫ್ಯಾಕ್ಟ್ ಹೇಳ್ತಾಯಿ...

"ಸಾರ್, ಇವತ್ತು ಬಿಜೆಪಿಗಳು ಎಲ್ಲೆಲ್ಲವುರೊ, ... ಗೆದ್ದವುರೊ, ಅಲ್ಲೆಲ್ಲಾ ಕಮ್ಯುನಲ್ ಕ್ಲಾಷ್ ಮಾಡಿಸಿ, ... ಹಾಕಿಸಿ, ಸಾಬರ ವಿರುದ್ಧ ಹಿಂದೂಗಳನ್ನು ಎ... ವಶಪಡಿಸಿಗಂಡಿರೋದು ಸತ್ಯ ಸಾರ್."

"ಇರಬಹುದು, ಇನ್ನ ಮುಂದೆ ಅದು ನ್ಯಡಿ...

"ನೀವಂಗಂತಿರಿ. ಆರೆಸ್ಸೆಸ್ ಕಾರ್ಯಾ... ನಿರಂತರವಾಗಿರುತ್ತೆ ಸಾರ್. ಅದ್ಕೆ ಶೂದ್ರ ಹುಡು... ಹಿಡದಾಕ್ತರೆ."

"ನಮ್ಮ ಕಾರ್ಯಕ್ರಮಗಳ ನೋಡಿದ್ರೆ ಶು... ಅಲ್ಯಾಕೊಯ್ತರೆ."

"ನಿಮ್ಮ ಕಾರ್ಯಕ್ರಮ ತುಂಬ ಚನ್ನಾಗ್ಯವೆ... ಅಧಿಕಾರಿಗಳ ಪೈಲಲ್ಲೇ ಉಳುದುಬುಟ್ಟವೆ ಸಾ...

EPW ಸಂಪಾದಕೀಯ

ಕೃಪೆ: *Economic and Political Weekly*
May 13, 2017. Vol. 52. No. 19

■ ಅನು: ಶಿವಸುಂದರ್

ಅಪರಾಧ ಮತ್ತು ಶಿಕ್ಷೆ

ಮರಣದಂಡನೆಯನ್ನು ...ಡುವಾಗ ನ್ಯಾಯಾಲಯಗಳು ಸ್ಥಿರ ...ತ್ತು ಸಮಾನ ಮಾನದಂಡಗಳನ್ನು ...ಳವಡಿಸಬೇಕಿರುವುದು ಅತ್ಯವಶ್ಯಕ.

ದೇಶದಲ್ಲಿ ನಡೆದ ವಿವಿಧ ಸಾಮೂಹಿಕ ಅತ್ಯಾಚಾರ ...ರಣಗಳಲ್ಲಿ ವಿವಿಧ ನ್ಯಾಯಾಲಯಗಳು ಈ ತಿಂಗಳಲ್ಲಿ ...ರುವ ಮೂರು ಭಿನ್ನ ಭಿನ್ನ ಆದೇಶಗಳು ಹೇಗೆ ...ರಣದಂಡನೆಯ ವಿಷಯದಲ್ಲಿ ನ್ಯಾಯಾಲಯದ ...ೀರಣೆಗಳು ಏಕ ಸಮಾನವಾದ ಮತ್ತು ಸ್ಥಿರವಾದ ...ನದಂಡಗಳನ್ನು ಅನುಸರಿಸುತ್ತಿಲ್ಲವೆಂಬುದನ್ನು ...ೀತುಪಡಿಸುತ್ತದೆ. ಮರಣದಂಡನೆಯನ್ನು ವಿಧಿಸಲು ...ಕ್ತವಾದ "ಅಪರೂಪದಲ್ಲಿ ಅಪರೂಪದ" ಪ್ರಕರಣ ...ವುದೆಂಬುದರ ಬಗ್ಗೆ ನ್ಯಾಯಾಲಯಗಳು ಹೇಗೆ ...ರ್ಣಯಕ್ಕೆ ಬರುತ್ತವೆಂಬುದು ಅಸ್ಪಷ್ಟವಾಗಿಯೇ ಇದೆ.

ಈ ಮೂರು ಪ್ರಕರಣಗಳಲ್ಲಿ ಅತ್ಯಂತ ದೀರ್ಘ ...ಾವಧಿಯನ್ನು ತೆಗೆದುಕೊಂಡಿದ್ದು ಗುಜರಾತಿನ ...ಕಾಪುರ್ ಗ್ರಾಮದ ಬಿಲ್ಕಿಸ್ ಬಾನು ಪ್ರಕರಣ. 2002ರ ...ರ್ಚ್ 3 ರಂದು ಆಗ 19 ವರ್ಷದವಳಾಗಿದ್ದ ಮತ್ತು ...ಣಿಯಾಗಿದ್ದ ಬಿಲ್ಕಿಸ್‌ಳನ್ನು ಅದೇ ಗ್ರಾಮಕ್ಕೆ ಸೇರಿದ ...ದೂಗಳ ಗುಂಪೊಂದು ಸಾಮೂಹಿಕ ಅತ್ಯಾಚಾರ ಮಾಡಿ ...ಂದು ಭಾವಿಸಿ ಬೀದಿಯಲ್ಲಿ ಬಿಸಾಡಿ ಹೋಗಿದ್ದರು. ...ಯ ಕಣ್ಣೆದುರೇ ಆಕೆಯ ಇನ್ನೊಂದು ಎಳೆಮಗುವನ್ನು ...ಂದು ಹಾಕಲಾಗಿತ್ತು. ಆಕೆಯ ಕುಟುಂಬಕ್ಕೆ ಸೇರಿದ ... ಜನರನ್ನು ಕಗ್ಗೊಲೆ ಮಾಡಲಾಗಿತ್ತು. ಈ ಭೀಭತ್ಸದ ...ರ ಪ್ರಜ್ಞೆ ಮರಳಿದಾಗ ಬಿಲ್ಕಿಸ್ ದೂರನ್ನು ದಾಖಲಿಸಲು ...ನಕ್ಕೆ ತೇಕುತ್ತಾ ಪೊಲೀಸ್ ಠಾಣೆಗೆ ಹೋಗಿ ದೂರು ...ಖಲಿಸಲು ಕೋರುತ್ತಾಳೆ. ಆದರೆ ಕರ್ತವ್ಯದಲ್ಲಿದ್ದ ...ಲೀಸರು ಆಕೆಯಿಂದ ಪ್ರಥಮ ವರ್ತಮಾನ ವರದಿಯನ್ನು ...ಫ್‌ಐಆರ್) ದಾಖಲಿಸಿಕೊಳ್ಳಲು ನಿರಾಕರಿಸುತ್ತಾರೆ. ...ತವಾಗಿ 15 ದಿನಗಳ ಕಾಲ ಠಾಣೆಗೆ ಎಡತಾಕಿದ ...ರವೇ ಆಕೆಯ ಎಫ್‌ಐಆರ್ ದಾಖಲಾಗುತ್ತದೆ. ಆಗಲೂ ... ಆಕೆಯ ಮೇಲೆ ಅತ್ಯಾಚಾರ ಮಾಡಿದವರ ಮತ್ತು ...ಯ ಕುಟುಂಬದವರನ್ನು ಕೊಂದ ವ್ಯಕ್ತಿಗಳ ಹೆಸರು ...ತರ ನಿಖರವಾದ ವಿವರಗಳನ್ನು ಪೊಲೀಸರು ದಾಖಲಿಸಿ ...ಳ್ಳದೆ ನಿರ್ಲಕ್ಷಿಸುತ್ತಾರೆ. ಸಹಜವಾಗಿಯೇ ಮ್ಯಾಜಿಸ್ಟ್ರೇಟ್ ...ಯಾಲಯದಲ್ಲಿ ಈ ಪ್ರಕರಣವು ವಜಾ ಆಗುತ್ತದೆ.

... ಯಾವುದನ್ನು ಬಿಲ್ಕಿಸ್ 'ನ್ಯಾಯ' ಎಂದು ಭಾವಿಸು ...ತ್ತಾಳೋ ಅದನ್ನು ಪಡೆದುಕೊಳ್ಳಲು ಈ ಅಪೂರ್ವ ಧೈರ್ಯಶಾಲಿ ಮಹಿಳೆಗೆ ಭರ್ತಿ 15 ವರ್ಷಗಳು ಬೇಕಾಯಿತು. ನಂತರ ಈ ಪ್ರಕರಣದ ವಿಚಾರಣೆಯು ಸುಪ್ರೀಂಕೋರ್ಟಿನ ಆದೇಶದ ಮೇರೆಗೆ ಗುಜರಾತಿನ ಹೊರಗಡೆ ನಡೆಯಿತು. 2008ರಲ್ಲಿ ವಿಶೇಷ ವಿಚಾರಣಾ ನ್ಯಾಯಾಲಯವು 11 ಆರೋಪಿಗಳಿಗೆ ಜೀವಾವಧಿ ಶಿಕ್ಷೆಯನ್ನೂ ನೀಡಿದ್ದಲ್ಲದೆ ಎಫ್‌ಐಆರ್ ದಾಖಲಿಸಲು ನಿರಾಕರಿಸಿದ್ದ ಪೊಲೀಸರಿಗೂ ಶಿಕ್ಷೆಯನ್ನು ವಿಧಿಸಿತು. ಮೇ 4 ರಂದು ಬಾಂಬೆ ಉಚ್ಚ ನ್ಯಾಯಾಲಯವು ಈ ಆದೇಶದ ಸಿಂಧುತ್ವವನ್ನು ಎತ್ತಿಹಿಡಿದಿದೆ. ಆದರೆ ಮಹತ್ವದ ಸಂಗತಿಯೆಂದರೆ ಕೆಳಗಿನ ನ್ಯಾಯಪ್ರಕ್ರಿಯೆಗೆ ಅಡ್ಡಿ ಮಾಡಿದ ಮತ್ತು ಸಾಕ್ಷಿಗಳನ್ನು ನಾಶಮಾಡಿದ ಆರೋಪದಿಂದ ಇಬ್ಬರು ವೈದ್ಯರು ಮತ್ತು ಐವರು ಪೊಲೀಸರನ್ನು ಮುಕ್ತಗೊಳಿಸಿದ್ದ ವಿಚಾರಣಾ ನ್ಯಾಯಾಲಯದ ಆದೇಶವನ್ನೂ ಸಹ ಉಚ್ಚ ನ್ಯಾಯಾಲಯ ರದ್ದುಗೊಳಿಸಿದೆ ಮತ್ತು ಅವರೆಲ್ಲರಿಗೂ ಸಹ ಶಿಕ್ಷೆ ವಿಧಿಸಿದೆ. ಸಾಮಾನ್ಯವಾಗಿ ನ್ಯಾಯಾಲಯಗಳು ನ್ಯಾಯದಾನದ ಪ್ರಕ್ರಿಯೆಗೆ ಭಂಗ ತರುವ ಪ್ರಕ್ರಿಯೆಯಲ್ಲಿ ಸರ್ಕಾರವೂ ಕೈಗೂಡಿಸುವಂಥ ವಿದ್ಯಮಾನವನ್ನು ಗಮನಕ್ಕೆ ತೆಗೆದುಕೊಳ್ಳುವುದು ಅಪರೂಪ.


ಅಷ್ಟಾಗಿಯೂ, ಅತ್ಯಾಚಾರ ಮತ್ತು ಕೊಲೆ ಆರೋಪದ ಮೇಲೆ ಶಿಕ್ಷೆಗೊಳಗಾದ ಅಪರಾಧಿಗಳಿಗೆ ಮರಣದಂಡನೆಯನ್ನು ವಿಧಿಸಲು ನಿರಾಕರಿಸಿರುವುದು ಮಾತ್ರ ಶಿಕ್ಷೆಯನ್ನು ವಿಧಿಸುವುದರಲ್ಲಿ ಇರುವ ಅಸಮಂಜಸತೆಗಳಿಗೆ ನಿದರ್ಶನವನ್ನು ಒದಗಿಸುತ್ತಿದೆ.

ಬಾಂಬೆ ಉಚ್ಚ ನ್ಯಾಯಾಲಯದ ಈ ತೀರ್ಪು ಬಂದ ಮರುದಿನದಂದೇ ಸುಪ್ರೀಂ ಕೋರ್ಟು ಒಂದು ತೀರ್ಪನ್ನು ನೀಡಿತು. ಅಂದು 2012ರ ಡಿಸೆಂಬರ್‌ನಲ್ಲಿ ಜ್ಯೋತಿ



ಸಿಂಗಳ ಮೇಲೆ ಭೀಕರ ಅತ್ಯಾಚಾರ ನಡೆಸಿ ನಂತರ ಕೊಲೆ ಮಾಡಿದ ಅಪರಾಧಿಗಳಿಗೆ ವಿಚಾರಣಾ ನ್ಯಾಯಾಲಯ ಮತ್ತು ದೆಹಲಿ ಉಚ್ಚ ನ್ಯಾಯಾಲಯಗಳು ವಿಧಿಸಿದ್ದ ಮರಣದಂಡನೆಯನ್ನು ಸುಪ್ರೀಂಕೋರ್ಟು ಸಹ ಎತ್ತಿಹಿಡಿಯಿತು. ಇಡೀ ಪ್ರಕರಣದ ವಿಚಾರಣೆಯನ್ನು ಅತ್ಯಂತ ಕಡಿಮೆ ಅವಧಿಯಲ್ಲಿ, ಕೇವಲ ನಾಲ್ಕು ವರ್ಷಗಳಲ್ಲಿ ಮುಗಿಸಲಾಗಿತ್ತು. ಇದಕ್ಕೆ ಮುಖ್ಯ ಕಾರಣ ಅತ್ಯಾಚಾರ ನಡೆದ ನಂತರ 13 ದಿನಗಳ ಕಾಲ ಆಕೆ ನಡೆಸಿದ ಜೀವನ್ಮರಣದ ಹೋರಾಟದ ಅವಧಿಯಲ್ಲಿ ನಗರ ಭಾರತವು ತೋರಿಸಿದ ಸಾರ್ವಜನಿಕ ಆಕ್ರೋಶವು ಸೃಷ್ಟಿಸಿದ ಒತ್ತಡ. ಈ ಹೋರಾಟವೇ ಅತ್ಯಾಚಾರ ಸಂಬಂಧೀ ಕಾನೂನುಗಳಲ್ಲಿ ಪ್ರಮುಖ ಬದಲಾವಣೆಗಳನ್ನು ಶಿಫಾರಸ್ಸು ಮಾಡಿದ ನ್ಯಾಯಮೂರ್ತಿ ವರ್ಮಾ ಸಮಿತಿ ವರದಿಗೂ ಕಾರಣವಾಯಿತು. ಇದು ಸಾರ್ವಜನಿಕ ಒತ್ತಡಕ್ಕಿರುವ ಶಕ್ತಿಯನ್ನೂ ಸೂಚಿಸುತ್ತದೆ. ಆದರೂ ಇಲ್ಲಿ ಒಂದು ತೊಡಕಿರುವುದನ್ನೂ ಗಮನಿಸಬೇಕು; ಮಹಿಳಾ ಸುರಕ್ಷತೆಯ ಬಗೆಗಿನ ಸಾರ್ವಜನಿಕರ ಕಾಳಜಿ ಮತ್ತು ಮಹಿಳೆಯರ ಮೇಲಿನ ಲೈಂಗಿಕ ಮತ್ತು ಹಿಂಸಾತ್ಮಕ ದಾಳಿಗಳ ಮೇಲಿನ ಜನತೆಯ ಪ್ರತಿರೋಧವೂ ಸಾರ್ವತ್ರಿಕವಾಗಿಯೂ ಇಲ್ಲ, ಏಕರೂಪಿಯಾಗಿಯೂ ಇಲ್ಲ. ಬಿಲ್ಕಿಸ್‌ಳಂಥ ಬಡ ಮಹಿಳೆಯರು ನ್ಯಾಯ ವ್ಯವಸ್ಥೆಯೇ ಕುಸಿದುಬಿದ್ದಿರುವಂಥ ಸಂದರ್ಭದಲ್ಲಿ ದಿನನಿತ್ಯವೂ ಅನ್ಯಾಯವನ್ನು ಎದುರಿಸುತ್ತಾರೆ. ಆದರೆ ಅವರ ಪ್ರಕರಣಗಳು ಸಾರ್ವಜನಿಕರ ಆಕ್ರೋಶಗಳನ್ನೂ ಕೆರಳಿಸುವುದಿಲ್ಲ ಮತ್ತು ಕಾನೂನುಗಳ ಬದಲಾವಣೆಗೆ ಒತ್ತಡವನ್ನೂ ಉಂಟುಮಾಡುವುದಿಲ್ಲ. ಹಾಗೆಯೇ ಅಂಥಾ ಒತ್ತಡಗಳಿಗೆ ಸರ್ಕಾರವು ಸ್ಪಂದಿಸಿದಾಗಲೆಲ್ಲಾ ಪರಿಣಾಮಗಳು ಸಕಾರಾತ್ಮಕವಾಗಿಯೇ ಇರುತ್ತದೆಂದೂ ಹೇಳಲಾಗುವುದಿಲ್ಲ. ನ್ಯಾಯಮೂರ್ತಿ ವರ್ಮಾ ಸಮಿತಿಯು ಅತ್ಯಾಚಾರದ ಪ್ರಕರಣಗಳಿಗೆ ಗಲ್ಲು ಶಿಕ್ಷೆಯನ್ನು ವಿಧಿಸಬಾರದೆಂದು ಬಲವಾಗಿ ವಾದಿಸಿದ್ದರೂ ಸರ್ಕಾರವು 'ಮೌಖಿಕ' ಒತ್ತಡಗಳಿಗೆ ಮಣಿದು 2013ರಲ್ಲಿ ಕಾನೂನಿಗೆ ತಿದ್ದುಪಡಿ ತಂದು ಅತ್ಯಾಚಾರದ ಅಪರಾಧಗಳಿಗೆ ವಿಧಿಸುವ ಶಿಕ್ಷೆಗಳ ಪಟ್ಟಿಯಲ್ಲಿ ಗಲ್ಲು ಶಿಕ್ಷೆಯನ್ನು ಸೇರಿಸಿತು.

ಜ್ಯೋತಿಸಿಂಗ್ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯ, ಉಚ್ಚ ನ್ಯಾಯಾಲಯ ಮತ್ತು ವರಿಷ್ಠ ನ್ಯಾಯಾಲಯಗಳು ಗಲ್ಲುಶಿಕ್ಷೆ ನೀಡಿದ್ದನ್ನು ಸಮರ್ಥಿಸಿಕೊಳ್ಳಲು "ಅಪರೂಪದಲ್ಲಿ ಅಪರೂಪದ" ಅಪರಾಧವೆಂಬ ವರ್ಗೀಕರಣವನ್ನು ಬಳಸಿದೆ. ಮೇ 9 ರಂದು ನಯನ ಪೂಜಾರಿಯ ಸಾಮೂಹಿಕ ಅತ್ಯಾಚಾರ ಮತ್ತು ಕತ್ತು ಹಿಸುಕಿ ಕೊಲೆ ಮಾಡಿದ ಪ್ರಕರಣದಲ್ಲಿ ಅಪರಾಧಿಗಳಿಗೆ ಶಿಕ್ಷೆ ವಿಧಿಸಲು ಇದೇ ಸಮರ್ಥನೆಯನ್ನು ಪೂನಾ ನ್ಯಾಯಾಲಯವು ಸಹ ಬಳಸಿದೆ. (ಈ ಪ್ರಕರಣದಲ್ಲಿ ನಯನ ಪೂಜಾರಿ ಎಂಬ 28 ವರ್ಷದ ಮಹಿಳಾ ಇಂಜಿನಿಯರ್ ಕೆಲಸದಿಂದ ಮರಳುತ್ತಿರುವಾಗ ಗುಂಪೊಂದು ಅಪಹರಿಸಿ, ಸಾಮೂಹಿಕ ಅತ್ಯಾಚಾರ ಮಾಡಿ, ಕತ್ತು ಹಿಸುಕಿ ಕೊಂದು ನಂತರ ಹೆಣ ಪತ್ತೆಯಾದರೆ ಗುರುತು ಪತ್ತೆಯಾಗಬಾರದೆಂದು ಮುಖವನ್ನೂ ಸಹ ವಿಕೃತಗೊಳಿಸಿದ್ದರು.) ಇದನ್ನೂ ಸಹ "ಅಪರೂಪದಲ್ಲಿ ಅಪರೂಪದ ಪ್ರಕರಣವೆಂದು" ಪರಿಗಣಿಸಿ ಮರಣದಂಡನೆಯನ್ನು ವಿಧಿಸಲಾಗಿತ್ತು. ಈ ಎರಡೂ ಪ್ರಕರಣಗಳು 2013ರಲ್ಲಿ ಅತ್ಯಾಚಾರ ಕಾನೂನುಗಳಿಗೆ ತರಲಾದ ತಿದ್ದುಪಡಿಯ ವ್ಯಾಪ್ತಿಗೆ ಬರದಿದ್ದರಿಂದ ಮರಣದಂಡನೆಯನ್ನು ಕೊಲೆ ಆರೋಪದಡಿಯಲ್ಲಿ



ವಿಧಿಸಲಾಗಿತ್ತು.

ಆದರೆ ಬಿಲ್ಕಿಸ್ ಬಾನೂ ಪ್ರಕರಣದಲ್ಲಿ ಮಾತ್ರ ತಾನೇ ಭೀಕರ ಅತ್ಯಾಚಾರಕ್ಕೆ ಗುರಿಯಾಗಿದ್ದರೂ, ಕಣ್ಣೆದುರಿಗೆ ನಡೆದ ತನ್ನ ಹಸುಳೆಯ ಕೊಲೆಗೆ ತಾನೇ ಪ್ರತ್ಯಕ್ಷ ಸಾಕ್ಷಿಯಾಗಿದ್ದರೂ ನ್ಯಾಯಾಲಯವು ಅಪರಾಧಿಗಳಿಗೆ ಮರಣದಂಡನೆಯನ್ನು ವಿಧಿಸಲು ನಿರಾಕರಿಸಿತು. ಬದಲಿಗೆ "ಇದು ಅತ್ಯಂತ ಹೀನಾಯವಾದ ದ್ವೇಷ ಮತ್ತು ವೈಷಮ್ಯವನ್ನು ತೋರಿಸುವ ಅಪರೂಪದ ಕಗ್ಗೊಲೆಗಳೇ ಆಗಿದ್ದರೂ" ಈ ಅಪರಾಧವನ್ನು ಎಸಗಿದ್ದವರು ಗುಂಪೊಂದರ ಸದಸ್ಯರಾಗಿದ್ದು ಮುಸ್ಲಿಮರ ವಿರುದ್ಧ "ದ್ವೇಷದಿಂದ ಕುದಿಯುತ್ತಿದ್ದರು" ಎಂಬುದನ್ನು ಮರಣದಂಡನೆಯನ್ನು ವಿಧಿಸದಿರಲು ಕಾರಣವೆಂದು ಸಮರ್ಥಿಸಿಕೊಂಡಿದೆ. ಹಾಗಾದರೆ ಕೋಮು ಉನ್ಮಾದದಿಂದ ಕೂಡಿರುವ ಸನ್ನಿವೇಶದಲ್ಲಿ ನಡೆಯುವ ಅತ್ಯಾಚಾರ ಮತ್ತು ಕೊಲೆಗಳು ಕಡಿಮೆ ತೂಕದ ಅಪರಾಧಗಳೇ?

ಈ ಅಪರಾಧವನ್ನು ಎಸಗಿದ ಅಪರಾಧಿಗಳಿಗೆ ಅಪರಾಧಿ ಹಿನ್ನೆಲೆಯಿರದಿರುವುದೂ ಸಹ ಅವರಿಗೆ ಮರಣದಂಡನೆ ವಿಧಿಸದಿರಲು ಮತ್ತೊಂದು ಕಾರಣವೆಂದು ನ್ಯಾಯಾಲಯವು ಹೇಳಿದೆ. ಆದರೆ ಅದೇ ಮಾನದಂಡವನ್ನು ಅನ್ವಯಿಸಿ ಹೇಳುವುದಾದರೆ ಜ್ಯೋತಿ ಸಿಂಗ್ ಪ್ರಕರಣದಲ್ಲಿ ಮರಣದಂಡನೆಯ ಶಿಕ್ಷೆಗೊಳಗಾದವರಿಗೂ ಅಪರಾಧಿ ಹಿನ್ನೆಲೆಯಿರಲಿಲ್ಲ. ಹಾಗಿದ್ದಲ್ಲಿ ಮರಣ ದಂಡನೆಯನ್ನು ಎಂಥಾ ಸಂದರ್ಭದಲ್ಲಿ ವಿಧಿಸಬಹುದೆಂಬುದರ ಬಗ್ಗೆ ಇರುವ ನ್ಯಾಯಿಕ ಮಾನದಂಡಗಳೇನು?

ಕಳೆದ ವರ್ಷ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯವು ತನ್ನ ಮರಣದಂಡನೆ ಸಂಶೋಧನಾ ಯೋಜನೆಯ ವರದಿಯನ್ನು ಬಿಡುಗಡೆ ಮಾಡಿತ್ತು. ಅದರಲ್ಲಿ ಮರಣದಂಡನೆಗೆ ಗುರಿಯಾದ ಅಪರಾಧಿಗಳ ಜೊತೆ ಸಂದರ್ಶನವೂ ಇತ್ತು. ಅದರ ಪ್ರಕಾರ ಮರಣದಂಡನೆಗೆ ಗುರಿಯಾಗಿರುವ ಶೇ.80ರಷ್ಟು ಅಪರಾಧಿಗಳು ಬಡವರು, ದಮನಿತ ಜಾತಿಗಳು ಅಥವಾ ಅಲ್ಪಸಂಖ್ಯಾತರೇ ಆಗಿದ್ದಾರೆ. ಇದಕ್ಕೆ ಮುಖ್ಯ ಕಾರಣ ನ್ಯಾಯಾಂಗ ವ್ಯವಸ್ಥೆಯು ಅವರ ಕೈಗೆಟುಕದಿರುವುದು. ಅವರಲ್ಲಿ ಕೆಲವಷ್ಟು ಜನರಿಗೆ ತಮ್ಮ ವಕೀಲರ ಹೆಸರೂ ಸಹ ಗೊತ್ತಿಲ್ಲ. ಈ ವರದಿಯನ್ನು ಬಿಡುಗಡೆ ಮಾಡುತ್ತಾ ಸುಪ್ರೀಂಕೋರ್ಟಿನ ನ್ಯಾಯಾಧೀಶರಾದ ನ್ಯಾಯಮೂರ್ತಿ ಮದನ್ ಬಿ ಲೋಕೂರ್ ಅವರು ಹೀಗೆ ಹೇಳಿದ್ದರು: "ಮರಣದಂಡನೆಯನ್ನು ವಿಧಿಸುವಾಗ ನಾವು ಒಂದು ಸ್ಪಷ್ಟವಾದ ನ್ಯಾಯಸಂಹಿತೆಯನ್ನು ಪಾಲಿಸುತ್ತಿದ್ದೇವೆ ಎಂದು ನನಗನಿಸುವುದಿಲ್ಲ. ಮರಣದಂಡನೆಯನ್ನು ವಿಧಿಸುವ ಉದ್ದೇಶ ಮುಂದೆ ಇಂಥ ಅಪರಾಧಗಳನ್ನು ತಡೆಗಟ್ಟುವುದೋ ಅಥವಾ ಅಪರಾಧಿಗಳನ್ನು ಸರಿತಿದ್ದುವುದೋ ಅಥವಾ ಅನ್ಯಾಯಕ್ಕೆ ಪ್ರತೀಕಾರವನ್ನು ತೀರಿಸಿಕೊಳ್ಳುವ ಉದ್ದೇಶವನ್ನು ಹೊಂದಿದೆಯೋ ಎಂಬುದು ಸ್ಪಷ್ಟವಿಲ್ಲ." ಅವರು ಸರಿಯಾಗಿಯೇ ಹೇಳಿದ್ದಾರೆ. ಒಂದು ನಾಗರಿಕ ಸಮಾಜದಲ್ಲಿ ಮರಣದಂಡನೆಯಂಥಾ ಶಿಕ್ಷೆಗೆ ಅವಕಾಶವಿರಕೂಡದು ಎಂದು ನಾವು ಪ್ರತಿಪಾದಿಸುತ್ತಿರುವ ಹೊತ್ತಿನಲ್ಲಿ ಅದು ಸಂಪೂರ್ಣವಾಗಿ ನಿಷೇಧವಾಗುವವರೆಗೂ ಅದನ್ನು ಸುಸಂಬದ್ಧವಾದ ಮತ್ತು ಸ್ಥಿರವಾದ ಮಾನದಂಡಗಳ ಪ್ರಕಾರ ಅನ್ವಯಿಸಬೇಕಾದದ್ದು ಅತ್ಯವಶ್ಯವಾಗಿದೆ. ■

...0 ⏮

...ದ ವರ್ಷದಲ್ಲಾದ್ರು ಅವು ಜನಗಳಿಗೆ ತಲುಪಂಗೆ ...ಲ್ಲಿ ಅಂದ್ರೆ ನಿರ್ಭಾಗ್ಯರಾಗೋರು ನೀವೆಯ."

"ಅಂಗ್ಯಲ್ಲ ಆಗದಿಲ್ಲ, ನೋಡ್ತಾಯಿರಿ ನಾವೆ ಬತ್ತಿವಿ."

"ಬತ್ತಿರಿ ಸರಿ. ಕಡಮೆ ಜನ ಬಂದ್ರೆ?"

"ಕರಟ್ಟಾಗೆ ಬತ್ತಿವಿ."

"ಕೆಜೆಪಿ, ರೆಡ್ಡಿ, ರಾಮುಲು ಪಾರ್ಟಿ ಬಿಜೆಪಿ ವಳಿಕೆ ...ರ್ಗವಲ್ಲ ಸಾರ್."

"ಅಗ್ನಿ, ನಂಜನಗೂಡು, ಗುಂಡ್ಲುಪ್ಯಾಟೆಲಿ ಮರ್ಜಾಗಿದ್ದೆ ...ಕ್ಷ ಎದುರಿಸಿದ್ರಲ್ಲವಾ?"

"ಅದ್ರು ಜೆಡಿಎಸ್ ಇದ್ರೆ ಗುಂಡ್ಲುಪೇಟೆ ನಿಮಿಗೆ ...ಲಿಲ್ಲ ಸಾರ್. ಅದ್ರಿಂದ ಜೆಡಿಎಸ್ ಕಡಿಗಣಿಸಬ್ಯಾಡಿ."

"ಕಡಿಗಣಿಸಿಲ್ಲ, ಅವ್ರುರ ಶಕ್ತಿ ಏನಂತ ಗೊತ್ತದೆ."

"ಎಷ್ಟೇ ಆಗ್ಲಿ ಅಲ್ಲಿದ್ದೋರಲವಾ. ಅದು ಅವ್ರುರ ಬಗ್ಗೆ ...ಸಿದ್ದಷ್ಟು ಸಿಟ್ಟಲ್ಲ ನಿಮಿಗೆ?"

"ಸಿಟ್ಟ್ಯಾಕ್ರ ಮಾಡಿಕಬೇಕು? ಇದೇನು ನಮ್ಮನೆ ವಿಷಯನೆ. ...ಕಾರಣದಲ್ಲಿ ವೈಯಕ್ತಿಕ ದ್ವೇಷ, ಸಿಟ್ಟಿರಬಾರ್ದು."

"...ಮ್ಮ ಮೇಲೆ ಸಿಟ್ಟು, ದ್ವೇಷ ಕಾರಿದ ಶ್ರೀನಿವಾಸ್ ...ದ್‌ರಿಂದ ನೀವೆಲ್ಲಿ ಎದ್ದು ನಿಂತ್ರಿ ಸಾರ್. ಇಲ್ಲ ಅಂದ್ರೆ ...ಲ್ಲ ಚುರುಕಾಗ್ತಿರಲಿಲ್ಲ, ಯಾವ್ದೊ ಮೇಲೆ ...ಸಂಗಿರತಿದ್ರು."

"ಅಂಗೇನು ಇಲ್ಲ, ಶ್ರೀನಿವಾಸ್ ಪ್ರಸಾದ್ ವಿನಾಕಾರಣ ತಮಗೆ ತಾವೇ ಪನಿಷ್‌ಮೆಂಟಿಗೊಳಗಾದ್ರು."

"ಆದ್ರೂ ಬಿಜೆಪಿಲೀಗ ವೈಸ್ ಪ್ರೆಸಿಡೆಂಟು ಸಾರ್."

"ಅದೇ ಈಗ ಬಿಜೆಪಿ ಸಮಸ್ಯೆ."

"ಇನ್ನೊಂದು ಕೊನೆ ವಿಷಯ ಸಾರ್. ಅಕಾಡೆಮಿ, ಪ್ರಾಧಿಕಾರ ಖಾಲಿ ಬಿದ್ದವೆ ಸಾರ್."

"ಖಾಲಿ ಬಿದ್ದವೆ ಸರಿ. ಅದರಿಂದ ಏನೂ ತೊಂದ್ರೆ ಆಗಿಲ್ಲ, ಯಲ್ಲ ಮಾಮೂಲಿ ತರ ನಡಕಂಡೊಗ್ತಾ ಅದೆ."

"ಕನ್ನಡ ಭಾಷೆ, ಸಂಸ್ಕೃತಿ, ಸಾಹಿತ್ಯ ಕಲೆ ಯಲ್ಲ ನಿಂತೋಗ್ಯದಂತೆ."

"ಯಾರಂಗಂದೋರು?"

"ಸಂಸ್ಕೃತಿ ಚಿಂತಕರು ಮತ್ತೆ ಪತ್ರಕರ್ತರು."

"ಸೀ... ಒಂದು ಇಲಾಖೆ ಕಾರ್ಯಕ್ರಮ ರೂಪಿಸಬಹುದಷ್ಟೇ. ಅದೇ ಯಲ್ಲಾನು ಸೃಷ್ಟಿ ಮಾಡಕ್ಕಾಗಲ್ಲ. ಆಡಳಿತಾಧಿಕಾರಿಗಳು ಯಲ್ಲಾನು ನೋಡಿಕಂಡು ಹೋಯ್ತಾ ಅವ್ರುರೆ."

"ನಿಮ್ಮ ಪಾರ್ಟಿ ವಳಮನಸ್ಸು ನೋಡಿದ್ರೆ, ಈ ಅಧ್ಯಕ್ಷರಾಗೋರು ಸಂಬಳ ತಗಂಡು, ಟಿಎ, ಡಿಎ ತಂಗದು ಮನಿಗೊಯ್ತರೇ ವರತೂ ಪಾರ್ಟಿಗಾಗಿ ಓಟು ಕೇಳಲ್ಲ ಕ್ಯಾನುವಾಸು ಮಾಡಲ್ಲ, ಅದ್ರಿಂದ ಸರಕಾರ ತಿಂದೋಗೊ ಇವ್ರುರು ನಿಧಾನಕ್ಕೆ ಬಂದು ಜಲ್ದಿ ಹೋಗ್ಲಿ ಅನ್ನೋ ಭಾವನೆ ಇದ್ದಂಗಿದೆ." ■

"ಥೂತ್ತೇರಿ!!!"

ಬರಲಿದೆ: ಕಾರ್ಮಿಕರ ಸದ್ದಡಗಿಸುವ ಹೊಸಾ ಸಂಹಿ



ಎಲ್ಲಾ ವಿಧದ ಪ್ರತಿರೋಧಗಳ ಹುಟ್ಟಡಗಿಸುವ ಅಪ್ಪಟ ಫ್ಯಾಸಿಸ್ಟ್ ತಂತ್ರವನ್ನು ಅನುಸರಿಸುತ್ತಿರುವ ಮೋದಿ ಸರ್ಕಾರದ ಕಾರ್ಯಚಟುವಟಿಕೆಗಳು ಇಂದು ಸಮಾಜದ ಸಕಲ ಕ್ಷೇತ್ರಗಳಿಗೂ ವಿಸ್ತರಿಸಿವೆ. ನ್ಯಾಯಕ್ಕಾಗಿ, ಪರಿಸರ ಸಂರಕ್ಷಣೆಗಾಗಿ ಹೋರಾಡುತ್ತಿರುವ ಜನಪರ; ದಲಿತ, ದಮನಿತಪರ ಸರ್ಕಾರೇತರ ಸಂಸ್ಥೆಗಳಿಗೆ ಹಣಕಾಸಿನ ಬರ ಉಂಟುಮಾಡುವ ಮೂಲಕ ಅವುಗಳ ಶಕ್ತಿಯನ್ನು ಉಡುಗಿಸಲಾಗುತ್ತಿದೆ. ಲವ್ ಜಿಹಾದ್, ಗೋಹತ್ಯಾ ನಿಷೇಧಗಳಂತಹ ಭಾವೋದ್ರೇಕಕಾರಿ ವಿಷಯಗಳ ಮೂಲಕ ಅಲ್ಪಸಂಖ್ಯಾತರನ್ನು ಮತ್ತು ದಲಿತರನ್ನು ಇನ್ನಷ್ಟು ಮೂಲೆಗುಂಪು ಮಾಡಲಾಗುತ್ತಿದೆ. ಇದರೊಂದಿಗೆ ಭಟ್ಟಂಗಿ ಸಮೂಹ ಮಾಧ್ಯಮಗಳು ಮತ್ತು ತನ್ನದೆ ಆದ ಹಲವಾರು ಸಾಮಾಜಿಕ ಜಾಲತಾಣಗಳು ಮತ್ತು ಬಾಡಿಗೆ ಟ್ರೋಲ್‌ಗಳ ಮೂಲಕ ಬುದ್ಧಿಜೀವಿಗಳ ಬಾಯ್ಮುಚ್ಚಿಸಲು ಎಲ್ಲಿಲ್ಲದ ಪ್ರಯತ್ನ ನಡೆಯುತ್ತಿದೆ. ವಿದ್ಯಾರ್ಥಿ ಸಮುದಾಯದಲ್ಲಿ ಹುಟ್ಟುತ್ತಿರುವ ಬಂಡಾಯ, ಪ್ರತಿರೋಧಗಳ ಕಿಚ್ಚನ್ನು ನಂದಿಸಲು ವಾಮಮಾರ್ಗಗಳನ್ನು ಬಳಸಲಾಗುತ್ತಿದೆ.

ಇಂತಹ ಪರಿಸ್ಥಿತಿಯಲ್ಲೂ ಮೋದಿ ಸರ್ಕಾರದ ಇನ್ನಿತರ ಕೆಲವು ಪ್ರಯತ್ನಗಳು ತೀವ್ರ ಹಿನ್ನಡೆ ಅನುಭವಿಸಿವೆ. ಆರಂಭದಲ್ಲಿ ಅದು ತನ್ನ ವಿವಾದಾತ್ಮಕ ಕಾರ್ಪೋರೇಟ್‌ಪರ, ರೈತವಿರೋಧಿ ಭೂಸ್ವಾಧೀನ ಕಾಯ್ದೆಯನ್ನು ಜಾರಿಗೊಳಿಸಲು ಹೊರಟು ಕೈಸುಟ್ಟುಕೊಂಡುದನ್ನು ಮರೆಯಲು ಸಾಧ್ಯವೆ? ಕಾರ್ಮಿಕರ ಭವಿಷ್ಯನಿಧಿ ನಿಯಮಗಳಿಗೆ ತನಗನುಕೂಲಕರವಾದ ತಿದ್ದುಪಡಿಗಳನ್ನು ಮಾಡಿದಾಕ್ಷಣ ಅದಕ್ಕೆ ಗಾರ್ಮೆಂಟ್ ವಲಯದಿಂದ ಅನಿರೀಕ್ಷಿತ ಹಾಗೂ ಅಭೂತಪೂರ್ವ ಪ್ರತಿರೋಧ ವ್ಯಕ್ತವಾದ ಮರುಗಳಿಗೆಯಲ್ಲೆ ತಿದ್ದುಪಡಿಗಳನ್ನು ಬಿಸಿತುಪ್ಪದಂತೆ ಉಗುಳಬೇಕಾಯಿತು! ಇಷ್ಟಾದರೂ ಪಾಠ ಕಲಿಯದ ಮೋದಿ ಸರ್ಕಾರ ಈಗ ಹಟ ಬಿಡದ ತ್ರಿವಿಕ್ರಮನಂತೆ ತನ್ನ ತಂತ್ರಗಾರಿಕೆಯನ್ನು ಕಾರ್ಮಿಕ ವಲಯಕ್ಕೂ ವಿಸ್ತರಿಸುವ ಪ್ರಯತ್ನದಲ್ಲಿ ತೊಡಗಿದೆ. ಅದೀಗ ಸಿದ್ಧಪಡಿಸಿರುವ ಹೊಸ ಕಾರ್ಮಿಕ ಸಂಹಿತೆಯ ಕರಡುಪ್ರತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಅದರಲ್ಲಿ ಹತ್ತುಹಲವು ಕಾರ್ಮಿಕ ವಿರೋಧಿ ಅಂಶಗಳಿರುವ ವಿಚಾರ ಬಯಲಾಗುತ್ತದೆ. ಮಹಿಳೆಯರಿಗೆ ಹೆರಿಗೆ ಸೌಲಭ್ಯಗಳನ್ನು ನಿರಾಕರಿಸಲಿರುವ, ಕಾರ್ಮಿಕ ಸಂಘಗಳನ್ನು ಅಪ್ರಸ್ತುತಗೊಳಿಸಲಿರುವ ಈ ನೂತನ ಸಂಹಿತೆ ನಿಜಕ್ಕೂ ಕಾರ್ಮಿಕರ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಬಂದೊದಗಿರುವ ಬಹುದೊಡ್ಡ ಗಂಡಾಂತರವಾಗಿದೆ.

ಮೋದಿ ಸರ್ಕಾರದ ಕಾರ್ಮಿಕ ಹಾಗೂ ಉದ್ಯೋಗ ಸಚಿವಾಲಯ ಇಂದು ಹೊಸ ಕಾರ್ಮಿಕ ಸಂಹಿತೆಯ ಭಾಗವಾಗಿ 4 ಶಾಸನಗಳನ್ನು ಮಾಡಲು ಉದ್ದೇಶಿಸುತ್ತಿದೆ. ತಾನು ಇದನ್ನು ಮಾಡುತ್ತಿರುವುದು ವೇತನ, ಔದ್ಯೋಗಿಕ ಸಂಬಂಧಗಳು, ಸಾಮಾಜಿಕ ಭದ್ರತೆ, ಸುರಕ್ಷತತೆ, ಆರೋಗ್ಯ ಮತ್ತು ದುಡಿಮೆಯ ಪರಿಸ್ಥಿತಿಗಳಿಗೆ ಸಂಬಂಧಪಟ್ಟ 44 ಕಾರ್ಮಿಕ ಕಾಯ್ದೆ ಮತ್ತು ಸಂಹಿತೆಗಳ ಸರಳೀಕರಣ, ಏಕೀಕರಣ ಹಾಗೂ ಸುಧಾರಣೆಗೋಸ್ಕರ ಎಂದು ಅದು ಹೇಳಿಕೊಂಡಿದೆ. ತರುವಾಯ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣಗಳಿಗೆ ಸಂಬಂಧಪಟ್ಟ ಕಾರ್ಮಿಕ ಸಂಹಿತೆಯ ಕರಡನ್ನು ಸಿದ್ಧಪಡಿಸಿ ಅದನ್ನು ತನ್ನ ಜಾಲತಾಣದಲ್ಲಿ ಪ್ರಕಟಿಸಿದೆ. ಮೊದಲು ಸಲಹೆಸೂಚನೆಗಳಿಗೆ ಪೂರ್ತಿ ಒಂದು ತಿಂಗಳ ಸಮಯ ಕೂಡ ನೀಡದೆ ಅವೆಲ್ಲವನ್ನು ಏಪ್ರಿಲ್ 15ರ ಒಳಗಾಗಿ ಕಳುಹಿಸಬೇಕೆಂದು ತಾಕೀತುಮಾಡಿತ್ತು, ನಂತರದ ಬೆಳವಣಿಗೆಯಲ್ಲಿ ಕೊಟ್ಟ ದಿನಾಂಕವನ್ನು ಮೇ 15ರ ತನಕ ಮುಂದುವರಿಸಲಾಗಿದೆ.

ಸದರಿ ಕಲ್ಯಾಣ ಸಂಹಿತೆ ಮುಖ್ಯವಾಗಿ ಕಾರ್ಮಿಕರ, ಮಾಲಿಕರ, ಮಾಲಿಕತ್ವ ಸಂಸ್ಥೆಗಳ ನೋಂದಣಿ, ದೇಣಿಗೆ ಸಂಗ್ರಹ, ಕಾರ್ಯನೀತಿ, ಆಡಳಿತ ವ್ಯವಸ್ಥೆ ಮತ್ತು ಅತಿಯಾದ ನಿಯಂತ್ರಣ ಹಾಗೂ ದಂಡನೆಯ ವ್ಯವಸ್ಥೆಗಳ ಕುರಿತಾಗಿದೆ ಎಂದು ತಿಳಿದುಬರುತ್ತದೆ. ಈ ಉದ್ದೇಶಿತ ಸಂಹಿತೆಯ ಪರಿಣಾಮ ದೇಶದ ಒಟ್ಟು 70 ಕೋಟಿ ಕಾರ್ಮಿಕರ ಮೇಲಾಗಲಿದೆ. ಆದರೆ ಇವರಲ್ಲಿ ಶೇಕಡಾ 92ರಷ್ಟು ಮಂದಿ ಅಸಂಘಟಿತ ಮತ್ತು ಅನೌಪಚಾರಿಕ ವಲಯಗಳಲ್ಲಿ ದುಡಿಯುವವರು. ಆದುದರಿಂದಲೆ ಈ ಕಲ್ಯಾಣ ಸಂಹಿತೆಯ ಗುಣಾವಗುಣಗಳನ್ನು ಅತ್ಯಂತ ಎಚ್ಚರಿಕೆಯಿಂದ ಪರಿಗಣಿಸುವುದು ಅವಶ್ಯವಾಗಿದೆ.

ಕಾರ್ಮಿಕ ಪದಕ್ಕೆ 9 ವಿಭಿನ್ನ ಅರ್ಥ ನಿರೂಪಣೆಗಳಿರುವ ಅಸಲಿಯತ್ತನ್ನು ಈ ಸಂಹಿತೆಯಲ್ಲಿ ಒಪ್ಪಿಕೊಳ್ಳಲಾಗಿದೆ. ಹೀಗಿದ್ದರೂ ಅದರ ಮುಖ್ಯ ವಿಭಾಗಗಳಲ್ಲಿ ಕಾರ್ಮಿಕರಿಗೆ ಸಂಬಂಧಿಸಿದ ವಿಚಾರಗಳನ್ನು ಉಲ್ಲೇಖಿಸುವ ಸಂದರ್ಭಗಳಲ್ಲಿ ಭಿನ್ನ ಭಿನ್ನ ಗುಂಪುಗಳನ್ನು ಗುರುತಿಸಲಾಗಿಲ್ಲ. ಭಾರತದಲ್ಲಿ ದುಡಿಯುವ ವರ್ಗ ಎಂದರೆ ಅದೊಂದು ನಾನಾ ಬಗೆಯ ಕೂಟಗಳ ಜಟಿಲ ಮಿಶ್ರಣ. ಇದರಲ್ಲಿ ಮನೆಕೆಲಸದವರಿದ್ದಾರೆ, ಗುತ್ತಿಗೆ ಕಾರ್ಮಿಕರಿದ್ದಾರೆ, ಸಂಘಟಿತ ಮತ್ತು ಅಸಂಘಟಿತ ವಲಯಗಳಲ್ಲಿ ದುಡಿಯುವ ಕಾರ್ಮಿಕರಿದ್ದಾರೆ ಅಥವಾ ಔಪಚಾರಿಕ ಮತ್ತು ಅನೌಪಚಾರಿಕ ಆರ್ಥಿಕ ಕ್ಷೇತ್ರಗಳಲ್ಲಿ ದುಡಿಯುವವರಿದ್ದಾರೆ. ಅಸ್ತಿತ್ವದಲ್ಲಿರುವ ಕಾಯ್ದೆಗಳನ್ನು ಸರಳೀಕರಿಸುವ ನೆಪದಲ್ಲಿ ಭಾರತೀಯ ಕಾರ್ಮಿಕರ ಅಗಾಧ ಪ್ರಭೇದಗಳನ್ನು ಮತ್ತು ಅವರ ಸಾಮಾಜಿಕ ಸಾಂಸ್ಕೃತಿಕ ಹಿನ್ನೆಲೆಗಳನ್ನು ಮರೆಗೆ ಸರಿಸಲಾಗಿದೆ.

ಕಾನೂನುಗಳ ಏಕೀಕರಣಕ್ಕೆ ಭಾರಿ ಅವಸರ ಮಾಡುತ್ತಿರುವ ಮೋದಿ ಸರ್ಕಾರ ಕಾರ್ಮಿಕರನ್ನು ಈ ಪ್ರಕ್ರಿಯೆಯಿಂದ ಹೆಚ್ಚುಕಮ್ಮಿ ದೂರ ಇರಿಸಿದೆ. ಒಂದು ಕಡೆ ಕಾರ್ಮಿಕರ ಭಾಗವಹಿಸುವಿಕೆ ಹೆಚ್ಚುಕಮ್ಮಿ ಶೂನ್ಯ ಎಂದಾಗಿದ್ದರೆ ಮತ್ತೊಂದು ಕಡೆ ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹ ಎಂಬುದು ಬರೀ ಕಾಟಾಚಾರಕ್ಕೆ ಎಂದಾಗಿದೆ. ಕಾರಣವೇನೆಂದರೆ ಸಂಹಿತೆಯ ಕರಡುಪ್ರತಿ ಕೇವಲ ಜಾಲತಾಣದಲ್ಲಿ ಲಭ್ಯವಿದೆ ಮತ್ತು ಅದು ಕೇವಲ ಇಂಗ್ಲಿಷ್ ಭಾಷೆಯಲ್ಲಿದೆ. ಪರಿಣಾಮವಾಗಿ ಅಧಿಕಾಂಶ ಕಾರ್ಮಿಕರಿಗೆ ತಮ್ಮ ಅಭಿಪ್ರಾಯ, ಸಲಹೆ, ಸೂಚನೆಗಳನ್ನು ನೀಡುವ ಅವಕಾಶ ಇಲ್ಲದಂತಾಗಿದೆ.

ಪ್ರಸ್ತಾಪಿತ ಸಂಹಿತೆಯಡಿ ಒಂದು ರಾಷ್ಟ್ರೀಯ ಮಂಡಳಿಯನ್ನು ಸ್ಥಾಪಿಸಲಾಗುವುದಂತೆ. ಇದರಲ್ಲಿ ಒಟ್ಟು 21 ಸದಸ್ಯರು ಕಾರ್ಯಾಚರಿಸಲಿದ್ದಾರಂತೆ. ಆದರೆ ಇವರ ಪೈಕಿ ಕಾರ್ಮಿಕರ ಪ್ರತಿನಿಧಿಗಳ ಸಂಖ್ಯೆ ಎಷ್ಟು ಗೊತ್ತೆ? ಬರೀ 3! ಅಷ್ಟೇ ಅಲ್ಲ, ಇವರ ನೇಮಕ ಮಾಡುವುದು ಕೂಡ ಕಾರ್ಮಿಕ ಸಂಘಗಳಲ್ಲ, ಸರ್ಕಾರ ಅಂತೆ! ಈ ಮೂವರಲ್ಲಿ ಕನಿಷ್ಠ ಒಬ್ಬರಾದರೂ ಮಹಿಳೆ ಆಗಿರಬೇಕು ಎನ್ನುವಲ್ಲಿ ಲಿಂಗ ತಾರತಮ್ಯವೂ ಕಾಣಿಸುತ್ತಿದೆ.

ಆದರೆ ಕೇಂದ್ರ ಮತ್ತು ರಾಜ್ಯ ಸಮಿತಿಗಳಲ್ಲಿ ಇಷ್ಟೂ ಇಲ್ಲ. ನಿಜವಾಗಿ ಪ್ರತಿನಿಧಿಗಳನ್ನು ನೇಮಿಸುವುದು ಕಾರ್ಮಿಕ ಸಂಘಗಳ ಹಕ್ಕು. ಆದರೆ ಇಲ್ಲಿ ಆ ಅಧಿಕಾರವನ್ನು ಸರ್ಕಾರಕ್ಕೆ ನೀಡಿರುವುದು ಅಥವಾ ಇನ್ನೂ ಸರಿಯಾಗಿ ಹೇಳುವುದಾದರೆ, ಸರ್ಕಾರವೆ ವಹಿಸಿಕೊಂಡಿರುವುದು ಪ್ರಜಾತಂತ್ರ ವಿರೋಧಿ ಕ್ರಮವಾಗಿದೆ. ಇನ್ನೊಂದು ಪ್ರಮುಖ ವಿಚಾರವೆಂದರೆ ಇದರಿಂದಾಗಿ ಬಹುದೊಡ್ಡ ಸಂಖ್ಯೆಯಲ್ಲಿರುವ ಅಸಂಘಟಿತ, ಅನೌಪಚಾರಿಕ ವಲಯಗಳ ಕಾರ್ಮಿಕರನ್ನು ಕೇಳುವವರಿಲ್ಲ ಎಂಬಂತಾಗಲಿದೆ.

ಪ್ರಸಕ್ತವಾಗಿ ಕಾರ್ಮಿಕರ ಹಕ್ಕುಗಳ ವಿಚಾರದಲ್ಲಿ ತ್ರಿಪಕ್ಷೀಯ ಮಾತುಕತೆಗಳಿಗೆ ಅವಕಾಶ ಇದೆ. ಆದರೆ ಅತ್ಯಂತ ತಿರೋಗಾಮಿಯಾಗಿರುವ ಈ ಹೊಸ ಸಂಹಿತೆ ಕಾರ್ಮಿಕ ಸಂಘಗಳಿಗೆ ಮಾತುಕತೆಗಳಲ್ಲಿ ಯಾವ ಪಾತ್ರವೂ ಇಲ್ಲದಂತೆ ನೋಡಿಕೊಳ್ಳುತ್ತದೆ. ಅದರಲ್ಲಿ ಹರಿಬಿಡಲಾಗಿರುವ ಹೊಸ ಚಿಂತನೆಯ ಪ್ರಕಾರ ಕಾರ್ಮಿಕ ಕಲ್ಯಾಣಕ್ಕೆ ಸಂಬಂಧಿಸಿದ ನೀತಿ ಮತ್ತು ನಿಯಂತ್ರಣಗಳ ಕಾರ್ಯವನ್ನು ರಾಷ್ಟ್ರೀಯ ಸಾಮಾಜಿಕ ಭದ್ರತಾ ಮಂಡಳಿ, ರಾಷ್ಟ್ರೀಯ ಸಮಿತಿ ಮತ್ತು ರಾಜ್ಯ ಸಮಿತಿಗಳಂತಹ ಸಾಮಾಜಿಕ ಭದ್ರತಾ ಸಂಸ್ಥೆಗಳ ಕೈಗೊಪ್ಪಿಸಲಾಗುವುದು. ಇಲ್ಲಿ ಕಾರ್ಮಿಕ ಸಂಘಗಳಿಗೆ ಯಾವ ಪಾತ್ರವನ್ನೂ ನೀಡದಿರುವುದನ್ನು ಗಮನಿಸಬೇಕಾಗಿದೆ. ಪ್ರಧಾನಮಂತ್ರಿಯ ಅಧ್ಯಕ್ಷತೆಯಲ್ಲಿರುವ ರಾಷ್ಟ್ರೀಯ ಮಂಡಳಿಗೆ ಅಪಾರ ಆಡಳಿತಾತ್ಮಕ, ನಿಯಂತ್ರಕ ಮತ್ತು ಆರ್ಥಿಕ ಅಧಿಕಾರಗಳನ್ನು ನೀಡಲಾಗಿದ್ದು ಅದರಲ್ಲಿ ಪ್ರಾವಿಡೆಂಟ್ ಫಂಡ್ ಮತ್ತು ನಿಧಿಗಳ ನಿಯಂತ್ರಣ, ಸಂಬಂಧಪಟ್ಟ ನಿಯಮಗಳ ರಚನೆ ಮುಂತಾದವು ಸೇರಿವೆ. ಅರ್ಥಾತ್ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆ ಅತಿಯಾದ ಕೇಂದ್ರೀಕರಣಕ್ಕೆ ತುತ್ತಾಗಲಿದೆ. ಒಟ್ಟಾರೆಯಾಗಿ ಕಾರ್ಮಿಕರ ಪ್ರಜಾತಾಂತ್ರಿಕ ಹಕ್ಕುಗಳಿಗೆ ಭಾರಿ ಅಪಾಯ ಕಾದಿದೆ.

ಹೆರಿಗೆ ಸೌಲಭ್ಯ ಕಾಯ್ದೆ 1961 ಇದರಡಿ ಇದುವರೆಗೆ ಎಲ್ಲಾ ಮಹಿಳೆಯರಿಗೂ ಸಿಗುತ್ತಿದ್ದ ಸೌಲಭ್ಯಗಳು ಇನ್ನು ಮುಂದೆ ಕೇವಲ ಎರಡು ಮಕ್ಕಳಿರುವವರಿಗೆ ಮಾತ್ರ ಎಂದಾಗಲಿದೆ. ಸಂಹಿತೆ ಒಂದು ಕಡೆ ಮಹಿಳೆಯರನ್ನು ಹೆರಿಗೆಗೆ ಮುನ್ನ ಮತ್ತು ನಂತರದಲ್ಲಿ ಉದ್ಯೋಗಕ್ಕೆ ಹಚ್ಚಬಾರದೆಂದು ಹೇಳುತ್ತದಾದರೂ ಇನ್ನೊಂದು ಕಡೆ ಹೆರಿಗೆಗೆ ಮುಂಚಿನ ಒಂದು ವರ್ಷದಲ್ಲಿ ಕನಿಷ್ಠ 80 ದಿನ ಕೆಲಸ ಮಾಡಿರಬೇಕು ಎಂಬ ನಿಬಂಧನೆಯನ್ನು ವಿಧಿಸುತ್ತದೆ! ಪ್ರಾಯೋಗಿಕವಾಗಿ ನೋಡಿದರೆ ಸ್ಥಾಯಿ ನೌಕರರಿಗಷ್ಟೆ ಅನ್ವಯಿಸುವ ಈ ನಿಯಮದಿಂದಾಗಿ ಸಾಮಾನ್ಯವಾಗಿ ಗುತ್ತಿಗೆಯಲ್ಲಿ ದುಡಿಯುವ ದೊಡ್ಡ ಸಂಖ್ಯೆಯ ಬಡ ಮಹಿಳೆಯರೆಲ್ಲ ಹೆರಿಗೆ ಸೌಲಭ್ಯಗಳಿಂದ ವಂಚಿತರಾಗಲಿದ್ದಾರೆ.



ನೂತನ ಸಂಹಿತೆಯ ಪ್ರಕಾರ ಪ್ರತಿಯೊಬ್ಬ ಮಾಲಿಕ, ಕಾರ್ಮಿಕ ಮತ್ತು ಪ್ರತಿಯೊಂದು ಮಾಲಿಕ-ಕಾರ್ಮಿಕ ಸಂಬಂಧ ನೋಂದಣಿಯಾಗಬೇಕಾಗಿದೆ. ಆದರೆ ಇಲ್ಲಿ ಇಡೀ ಪ್ರಕ್ರಿಯೆಯಲ್ಲಿ ಅಸ್ಪಷ್ಟತೆ ಮಾತ್ರವಲ್ಲ, ಹಲವೊಂದು ಗೊಂದಲಗಳೂ ಇವೆ. ಅಸಂಘಟಿತ ಅಥವಾ ಅನೌಪಚಾರಿಕ ವಲಯಗಳಲ್ಲಿ ಒಂದಕ್ಕಿಂತ ಹೆಚ್ಚು ಮಾಲಿಕರನ್ನು ಹೊಂದಿರುವ ಕಾರ್ಮಿಕರಿಗೆ (ಉದಾ: ಕೃಷಿ, ಮನೆಕೆಲಸ ಇತ್ಯಾದಿಗಳಲ್ಲಿರುವವರು) ಸ್ವಯಂಘೋಷಣೆ ಮಾಡುವ ಅವಕಾಶ ನೀಡಲಾಗಿಲ್ಲ. ನೋಂದಣಿ ಪ್ರಾಧಿಕಾರದ ಅರ್ಹತೆ ಹಾಗೂ ಗುರುತುಚಹರೆಗಳ ಬಗ್ಗೆ ಸ್ಪಷ್ಟತೆ ಇಲ್ಲ. ಇಂತಹ ಬೃಹತ್ತಾದ ನೋಂದಣಿ ಕಾರ್ಯಾಚರಣೆಯಲ್ಲಿ ನಿಧಿಗಳನ್ನು ನೋಡಿಕೊಳ್ಳುವ ಕೆಲಸಕ್ಕೆ, ಸೇವೆ ಒದಗಿಸುವ ಕೆಲಸಕ್ಕೆ, ಹಣಕಾಸು ವಿತರಿಸುವ ಕೆಲಸಕ್ಕೆ, ದಾಖಲೆ ಇರಿಸುವ ಕೆಲಸಕ್ಕೆ ಮತ್ತು ಇನ್ನಿತರ ಕೆಲಸಗಳಿಗೆ ಖಾಸಗಿ ಸಂಸ್ಥೆಗಳನ್ನು ನೇಮಿಸುವ ಬಗ್ಗೆ ಬರೆಯಲಾಗಿದೆ. ಇದನ್ನು ನೋಡುವಾಗ ಸರ್ಕಾರ ಇಲ್ಲಿ ಎಲ್ಲವನ್ನೂ ಖಾಸಗೀಕರಣ ಮಾಡಲು ಹೊರಟಿರುವ ಹಾಗೆ ಕಾಣುತ್ತಿದೆ. ಮತ್ತೊಂದು ವಿಷಯವೆಂದರೆ ಸಂಘಟಿತ, ಅಸಂಘಟಿತ ವಲಯಗಳೆರಡರಲ್ಲೂ ಮಹಿಳೆಯರ ಸಂಖ್ಯೆ ಗಣನೀಯ ಮಟ್ಟದಲ್ಲಿದ್ದರೂ ಸಾಮಾಜಿಕ ಭದ್ರತಾ ಸಂಸ್ಥೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಕುರಿತು ಏನೂ ಹೇಳಲಾಗಿಲ್ಲ.

ಹೊಸ ಸಂಹಿತೆಯಲ್ಲಿ ಅತ್ಯಧಿಕ ಸಮಸ್ಯೆಗಳನ್ನು ಎದುರಿಸುತ್ತಿರುವ ಅಸಂಘಟಿತ, ಅನೌಪಚಾರಿಕ ವಲಯದ ಕಾರ್ಮಿಕರನ್ನು ನಿರ್ಲಕ್ಷಿಸಲಾಗಿದೆ. ಸಂಹಿತೆ ರಚನೆಯ ಸಂದರ್ಭದಲ್ಲಿ ಮಾಡಲಾಗಿರುವ ಪೂರ್ವಕಲ್ಪನೆಗಳು ಸರಿಯಾಗಿಲ್ಲ. ಆ ಪೂರ್ವಕಲ್ಪನೆಗಳು ಈ ರೀತಿ

* ಎಲ್ಲಾ ಕಾರ್ಮಿಕರು ಸದಾ ನಿಯಮಿತವಾಗಿ ಪ… ಸಂಭಾವನೆ ಪಡೆಯುತ್ತಾರೆ. ಇದರಿಂದಾಗಿ ಅ… ಪ್ರತಿ ತಿಂಗಳು ಕನಿಷ್ಠ ಆದಾಯ ಸಿಗುತ್ತಿದೆ.
* ಎಲ್ಲಾ ಕಾರ್ಮಿಕರೂ ತಮಗೆ ಸಿಗಬೇಕಿರುವು… ಯಾರದೆ ಸಹಾಯವಿಲ್ಲದೆ ವೈಯಕ್ತಿಕವಾಗಿ ಮಾ… ನಡೆಸಬಲ್ಲರು.
* ಸಂಘಟಿತ-ಅಸಂಘಟಿತ, ಔಪಚಾರಿಕ-ಅನೌಪ… ವಲಯಗಳಲ್ಲಿ ದುಡಿಯುವವರ ಮಧ್ಯೆ ಗುರು… ಸಾಧ್ಯವಾಗುವಷ್ಟು ಭಿನ್ನತೆ ಇಲ್ಲ. ಎಲ್ಲಾ ಕಾಮಿ… ಏಕರೂಪವಾಗಿದ್ದಾರೆ.
* ಏಕೀಕರಣದ ಕುರಿತು ವಿಚಾರಪ… ಪುನರ್‌ಪರಿಶೀಲನೆ ನಡೆಸುವ ಅಗತ್ಯವಿದೆ.

ಈ ನೂತನ ಸಂಹಿತೆ ಜಾರಿಗೆ ಬಂದರೆ ಪ್ರತಿ… ಪ್ರಜೆಗೂ ಸಾಮಾಜಿಕ ಭದ್ರತೆ ದೊರೆಯಲಿದೆ… ಮೋದಿ ಸರ್ಕಾರ ವ್ಯಾಪಕವಾಗಿ ಪ್ರಚಾರ ಮಾಡ… ಆದರೆ ಸಂಹಿತೆಯ ಕರಡನ್ನು ಸೂಕ್ಷ್ಮ ಪರಿಶೀ… ಒಡ್ಡಿದಾಗಷ್ಟೆ ಇದರ ಅಸಲಿಯತ್ತೇನೆಂದು ತಿಳಿಯ… ನೂತನ ಸಂಹಿತೆ ಪ್ರಕಾರ ಸಾಮಾಜಿಕ ಭದ್ರತಾ ಸ… ದೊರೆಯಬೇಕಿದ್ದರೆ ಪ್ರತಿಯೊಬ್ಬ ಕಾರ್ಮಿಕ ಕಡ್ಡಾಯ… ಸಾಮಾಜಿಕ ಭದ್ರತಾ ನಿಧಿಗೆ ದೇಣಿಗೆ ನೀಡಬೇಕು. … ನೋಂದಣಿ ಪ್ರಕ್ರಿಯೆಯಲ್ಲಿರುವ ಅಸ್ಪಷ್ಟತೆ ಮತ್ತು ಜಟಿ… ಪರಿಣಾಮವಾಗಿ ಅಸಂಘಟಿತ, ಅನೌಪಚಾರಿಕ ವಲಯ… ದುಡಿಯುವ ದೊಡ್ಡ ಸಂಖ್ಯೆಯ ಕಾರ್ಮಿಕರು ಈ ಸಾ… ಭದ್ರತೆಯ ವ್ಯಾಪ್ತಿಯಿಂದ ಹೊರಗುಳಿಯಲಿ… ಗಮನಾರ್ಹ ವಿಷಯವೆಂದರೆ ಕನಿಷ್ಠ ವೇತನದ … ನಿರ್ಧಾರ ತಳೆಯುವುದು ಆಯಾ ಕ್ಷೇತ್ರಗಳಲ್ಲಿ ಎಂದ… ಆದರೆ ಕೆಲವೊಮ್ಮೆ ಒಂದೇ ಕ್ಷೇತ್ರದೊಳಗೆ (ಉದಾ: … ಕೂಡ ಭೌಗೋಳಿಕವಾಗಿ ವಿಭಿನ್ನ ಕನಿಷ್ಠ ವೇತನಗಳಿ… ಅನೌಪಚಾರಿಕ ವಲಯದಲ್ಲಿ ದುಡಿಯುವ ಹೆಚ್ಚಿ… ಕಾನೂನಿನಪ್ರಕಾರ ಕನಿಷ್ಠ ವೇತನ ಸಿಗುತ್ತಿಲ್ಲ. … ಪರಿಸ್ಥಿತಿಗಳು ಇರುವಾಗ ಇವರೆಲ್ಲರಿಂದ ನಿಯಮಿ… ಸಾಮಾಜಿಕ ಭದ್ರತಾ ನಿಧಿಗೆ ದೇಣಿಗೆ ನೀಡಲು ಸಾ… ಗೃಹಿಣಿಯರು, ನಿರುದ್ಯೋಗಿಗಳು, ಅಂಗವಿಕಲರು… ಕಮ್ಮಿ ವೇತನ ಪಡೆಯುವ ದಿನಗೂಲಿಗಳು ಮು… ವರಿಗೂ ದೇಣಿಗೆ ನೀಡುವ ಸಾಮರ್ಥ್ಯ ಇರುವು…


ಈ ಸಂದರ್ಭದಲ್ಲಿ ಉದಾಹರಣೆ… ಗೋಶಾಲೆಗಳಲ್ಲಿ ದುಡಿಯುವ ಕಾರ್ಮಿಕರ ದು… ವಿಚಾರವನ್ನು ಎತ್ತಿಕೊಳ್ಳಬಹುದು. ವಾಸ್ತವ … ಗೋಹಕ್ಕುಗಳ ಬಗ್ಗೆ ಭಾರಿ ಕಾಳಜಿ ತೋರಿಸುವ ಮ… ಮಾನವ ಹಕ್ಕುಗಳನ್ನು ಪೂರ್ತಿ ಕಡೆಗಣಿಸುತ್ತಿದ್ದಾರೆ… ಮಹಾನ್ ಗೋಪ್ರೇಮಿಗಳೆಂದು ಹೇಳಿಕೊಳ್ಳುವ … ಗೋವುಗಳನ್ನು ನೋಡಿಕೊಳ್ಳುವ ನೌಕರರನ್ನು ತೀರ ಕ… ನೋಡಿಕೊಳ್ಳುತ್ತಿದ್ದಾರೆ. ಇದಕ್ಕೆ ಅತ್ಯುತ್ತಮ ಉದಾ… ಜೈಪುರದ ಹಿಂಗೊನಿಯ ಗೋಶಾಲೆ. ಇಲ್ಲಿರುವ 1… ಗೋವುಗಳನ್ನು ನೋಡಿಕೊಳ್ಳಲು ಕೇವಲ 240 ನೌ… ಇಟ್ಟುಕೊಳ್ಳಲಾಗಿದೆ. ಇಲ್ಲಿ ನೌಕರರಿಗೆ ಇಎಸ್‌ಐ … ಇಲ್ಲ. ಅಪಘಾತಕ್ಕೀಡಾಗಿ ಮನೆಯಲ್ಲೆ ಶುಶ್ರೂಷೆ … ಬೇಕಾಗಿರುವವರಿಗೆ ಸಂಬಳ ನೀಡಲಾಗುತ್ತಿಲ್ಲ. ಇತ್ತೀಚಿನ ನಿದರ್ಶನವೆಂದರೆ ಗೋವಿನ ಏಟಿನಿ… ಮೂಳೆ ಮುರಿತಕ್ಕೊಳಗಾಗಿ ಕೆಲಸಕ್ಕೆ ಹೋಗ… ಮನೆಯಲ್ಲಿರಬೇಕಾಗಿ ಬಂದಿರುವ ವ… ಕರ್ಮಚಾರಿಯೊಬ್ಬರ ಕತೆ.

ನೂತನ ಸಂಹಿತೆ ಎಲ್ಲಾ ಕಾರ್ಮಿಕರಿಗೂ … ಒದಗಿಸಲು ಪ್ರಯತ್ನಿಸುತ್ತದೆ ಎಂಬ ಸಾ… ಗ್ರಹಿಕೆಯೊಂದನ್ನು ಬಿತ್ತಲಾಗಿದ್ದು ಅದನ್ನು ಪ್ರ… ಅಗತ್ಯವಿದೆ. ನಿರ್ಧಾರ ಪ್ರಕ್ರಿಯೆಯಲ್ಲಿ ಕಾ… ಭಾಗವಹಿಸುವಿಕೆಯ ಪ್ರಜಾಸತ್ತಾತ್ಮಕ ಪ್ರಕ್ರಿಯೆಗೆ ತಿಲ… ನೀಡಲಾಗಿರುವುದನ್ನೂ ಪ್ರಶ್ನಿಸಬೇಕಾಗಿದೆ.

ವಿಶೇಷವಾಗಿ ಸಂಹಿತೆಯಲ್ಲಿ ಕಾರ್ಮಿಕರ … ಬದಲು ಕಾರ್ಮಿಕರ ಸೌಲಭ್ಯಗಳು ಎಂಬ ಪ… ಗಮನಾರ್ಹವಾಗಿದ್ದು ಇದೆಲ್ಲವೂ ಸರ್ಕಾರ ಕೊಡು… ಬಕ್ಷೀಸು ಎಂಬ ಭಾವನೆಯನ್ನು ಬಿತ್ತುವಂತಿವೆ. … ತ್ರಿಪಕ್ಷೀಯ ಮಾತುಕತೆಗಳನ್ನು ಇಲ್ಲವಾಗಿಸುವ… ಕಾರ್ಮಿಕ ಸಂಘಗಳನ್ನು ನಾಶಪಡಿಸುವುದು ಎ… ಇದರ ಹಿಂದೆ ಕಾರ್ಮಿಕರ ಹಕ್ಕುಗಳನ್ನು ದಮ… ಮತ್ತು ಇಡೀ ಕಾರ್ಮಿಕ ಚಳವಳಿಯನ್ನೆ ಕೊನೆಗ… ಹುನ್ನಾರವೊಂದು ಅಡಗಿರುವಂತೆ ತೋರುತ್ತದೆ.

■ ಸುರೇಶ್ ಭಟ್ ಬಾಕ್ರಬ…

(ಆಧಾರ: *12-5-17ರ thewire…* ಪ್ರೇಮ್‌ದಾಸ್ ಪಿಂಟೊ, ಶ್ರುತಿ ಜೈನ್ ಲೇಖನ…



ರಾಮನಿಂದ ದೇಶೋದ್ಧಾರ ಆಗಲಿಲ್ಲ

■ ಪ್ರೊ| ಕೆ. ಎಸ್. ಭಗವಾನ್


ರಾಮ ಮಾಡಿರುವುದೆಲ್ಲ ಯಜ್ಞ ರಕ್ಷಣೆ; ಯಜ್ಞವು ...ಢನಂಬಿಕೆ, ಕಂದಾಚಾರ, ಅಜ್ಞಾನಗಳ ನೆಲೆವೀಡು. ...ಜ್ಞ ತನ್ನ ಸತ್ವವನ್ನು ವೈಜ್ಞಾನಿಕವಾಗಿ ಸ್ಥಾಪಿಸಿಲ್ಲ, ಯಜ್ಞ ...ನಾದ ರಾಮ ಯಜ್ಞ ಮಾಡಿಯೇ ಸೀತೆಯನ್ನು ವಾಪಸ್ಸು ...ಯಬಹುದಿತ್ತಲ್ಲ? ಅವನು ಏಕೆ ಯುದ್ಧ ಮಾಡಿದ? ...ಕ್ಷಸರೆಂದು ಕರೆದು ಇವರನ್ನೆಲ್ಲ ರಾಮ ಏಕೆ ಸಂಹಾರ ...ಮಾಡಿದ ಅಂದರೆ, ಇವರು ಯಜ್ಞಗಳನ್ನು ...ಡ್ಡಿಪಡಿಸುತ್ತಿದ್ದರೆಂದು. ಅಂದರೆ ಯಜ್ಞ ಪೊಳ್ಳು. ಪೂಜೆ ...ನಸ್ಕಾರ ಯಜ್ಞ ಯಾಗಗಳನ್ನೇ ಧರ್ಮದ ಸಾರ ಎಂದು ...ದಿದ್ದ ವೈದಿಕರಿಗೆ ಅದರಲ್ಲಿ ಹುರುಳಿಲ್ಲ ಎಂದು ...ವುಂಟು ಮಾಡಿದ್ದು ಬುದ್ಧನ ಮಹಾ ಸಾಧನೆ. ...ಮೂರ್ಖ ಆಗಿ ಕಂದಾಚಾರಗಳೇ ತುಂಬಿದ್ದ ಮತಕ್ಕೆ ...ತರ್ಮೂಖತೆಯ ಅಗತ್ಯವನ್ನು ತೋರಿಸಿದ್ದು, ಅದನ್ನು ...ಚರಣೆಗೆ ತಂದದ್ದು ಬುದ್ಧ ಗುರುಗಳ ಹೆಚ್ಚುಗಾರಿಕೆ ...ತ್ತು ವೈಶಿಷ್ಟವಾಗಿದೆ. ಕಂದಾಚಾರಗಳೇ ಪ್ರಮುಖವಾಗಿ ...ರತಮ್ಮ ಇದ್ದರೆ ಮತವಾಗುತ್ತದೆ; ಆಧ್ಯಾತ್ಮಿಕ ತತ್ವಗಳು ...ಮಾನವಾಗಿ ಎಲ್ಲರೂ ಒಂದು, ಸಮಾನರು ಎಂಬ ನಡೆ ...ದ್ದರೆ ಧರ್ಮವಾಗುತ್ತದೆ. ಧರ್ಮ ವಿಶ್ವ ವಿಶಾಲವಾದುದು; ...ತ ಸಂಕುಚಿತವಾದುದು.

ಯಜ್ಞದಿಂದ ಮನುಷ್ಯ ಒಳ್ಳೆಯವನಾಗುವುದಿಲ್ಲ. ...ಜ್ಞದಿಂದ ಲೋಕಕ್ಕೆ ಏನೂ ಪ್ರಯೋಜನ ಇಲ್ಲ ಎಂದು ...ದ್ಧ ಭಗವಾನ್ ಮನದಟ್ಟು ಮಾಡಿದ್ದರು. ಅದರಿಂದಾಗಿ ...ರೋಹಿತರ ಪ್ರತಿಷ್ಠೆಗೆ ಮತ್ತು ಅವರ ಸುಖಜೀವನದ ...ರಿಗೆ ದೊಡ್ಡ ಪೆಟ್ಟು ಬಿತ್ತು. ವೈದಿಕರು ಯಜ್ಞಗಳನ್ನು ...ರೋಧಿಸುವ ಅಡ್ಡಿಪಡಿಸುವ ಜನರನ್ನು ರಾಕ್ಷಸರೆಂದು ...ರಿಸಿ ಅವರನ್ನು ರಾಮನಿಂದ ಕೊಲ್ಲಿಸಿದರು. ಅದಕ್ಕಾಗಿ ...ಮನನ್ನು ಬ್ರಾಹ್ಮಣರು ದೇವರನ್ನಾಗಿ ಮಾಡಿದ್ದಾರೆ.

ರಾಮನಿಂದ ದೇಶೋದ್ಧಾರ ಕೆಲಸ ಏನೂ ಆಗಿಲ್ಲ. ರಾಕ್ಷಸರನ್ನು ನಿರ್ನಾಮ ಮಾಡಿದ್ದರಿಂದ ರಾಮ ಒಬ್ಬ ಮಹಾ ಕೊಲೆಗಾರನಾಗಿದ್ದಾನೆಯೇ ಹೊರತು ಮಹಾತ್ಮನಾಗಿ ದೇವರಾಗಿ ಕಂಡುಬರುವುದಿಲ್ಲ. ರಾಮ ದೇವರಾಗಿದ್ದರೆ, ಅಂಗುಲಿಮಾಲನನ್ನು ಬುದ್ಧ ಸಾಧುವನ್ನಾಗಿ ಮಾಡಿದಂತೆ, ಅವರನ್ನೆಲ್ಲ ತಿದ್ದಬೇಕಿತ್ತು, ಪರಿವರ್ತಿಸಬೇಕಿತ್ತು. ರಾಕ್ಷಸರೆಂದು ರಾಮ ಕೊಂದವರೆಲ್ಲ ಯಾರೂ ರಾಕ್ಷಸರಲ್ಲ; ಅವರೆಲ್ಲ ವಿಚಾರವಂತರು, ಬ್ರಾಹ್ಮಣರ ಮೋಸವನ್ನು ಬಹಿರಂಗಪಡಿಸುತ್ತಿದ್ದ ಜನಹಿತ ಚಿಂತಕರು, ಸಮಾನತಾವಾದಿ ಬೌದ್ಧರು. ಬುದ್ಧ ಗುರುವರ್ಯರ ಸರ್ವ ಸಮಾನತಾ ಬೋಧನೆಯನ್ನು ಆಚರಣೆಗೆ ತಂದದ್ದರಿಂದ ಹಾರುವರು ಅವರನ್ನು ದ್ವೇಷಿಸುತ್ತಿದ್ದರು. ಕ್ರಿ. ಶ. 8 ನೇ ಶತಮಾನದಲ್ಲಿ ಆದಿ ಶಂಕರಾಚಾರ್ಯ ನಾಗಾರ್ಜುನಕೊಂಡಕ್ಕೆ ಹೋಗಿ ಬೌದ್ಧರನ್ನು ಹಾಗೂ ಬೌದ್ಧ ಸ್ಮಾರಕಗಳನ್ನು ನಾಶಮಾಡಿದ ಐತಿಹಾಸಿಕ ದಾಖಲೆಗಳಿವೆ. (ಇದೇ ಲೇಖಕನ 'ಶಂಕರಾಚಾರ್ಯ ಮತ್ತು ಪ್ರತಿಗಾಮಿತನ', ಪು. 32-50; 19 ನೇ ಮುದ್ರಣ 2016 ನೋಡಿ.) ಚಾತುರ್ವರ್ಣ ಹಿಂದೂ ಧರ್ಮದ ನಿಯಮ. ಇದನ್ನು ವೇದಗಳು ಪ್ರತಿಪಾದಿಸುತ್ತವೆ. ಇಂಥ ಮಾನವ ವಿರೋಧಿ ವೇದಗಳನ್ನು ಬುದ್ಧ ಮಾನ್ಯ ಮಾಡದೆ ತಿರಸ್ಕರಿಸಿದರು. ಬಸವಣ್ಣ "ವೇದಕ್ಕೆ ಒರೆಯ ಕಟ್ಟುವೆ; ಶಾಸ್ತ್ರಕ್ಕೆ ನಿಗಳವನಿಕ್ಕುವೆ" ಎಂದು ನಿರಾಕರಿಸಿದರು. ವಿಶ್ವಸಂಸ್ಥೆಯು ವಿಶ್ವಜ್ಞಾನಿ ಎಂದು ಪ್ರಶಂಸಿಸಿದ ಡಾ| ಅಂಬೇಡ್ಕರ್ "ವೇದಗಳಿಗೆ ಸಿಡಿಮದ್ದು ಹಾಕಿ: ಶಾಸ್ತ್ರಗಳಿಗೆ ಸಿಡಿಮದ್ದು ಹಾಕಿ, ವೇದಗಳಲ್ಲಿ ವಿಚಾರ ಇಲ್ಲ, ನೈತಿಕತೆ ಇಲ್ಲ. ಆದ್ದರಿಂದ ಅವುಗಳನ್ನು ನಾಶಮಾಡಬೇಕು" ಎಂದು ಕರೆಕೊಟ್ಟಿದ್ದಾರೆ (ರೈಟಿಂಗ್ಸ್ ಅಂಡ್ ಸ್ಪೀಚಸ್ ಪು. 75, ಭಾರತ ಸರಕಾರ, 2014).

"ಎಲ್ಲಾ ಸ್ಮೃತಿಗಳು ಸುಳ್ಳು; ಎಲ್ಲಾ ವೇದಗಳು ಸುಳ್ಳು; ಎಲ್ಲಾ ಶಾಸ್ತ್ರಗಳು ಸುಳ್ಳು ಎಂದು ತಿಳಿದುಕೊ" (ತೇಜೋಬಿಂದೋಪನಿಷತ್, 3. 48 - 56). ಹಾಗೆಯೇ ಪ್ರಮುಖ ದಶೋಪನಿಷತ್ತುಗಳಲ್ಲಿ ಒಂದಾದ 'ಮುಂಡಕೋಪನಿಷತ್' ಸಹ ವೇದಗಳು 'ಅಪರ' - ಕೀಳು ಎಂದು ಹೇಳುತ್ತದೆ (1. 1. 2-5). ವೇದಾಂತ ಎಂದರೆ ವೇದಗಳನ್ನು ಕೊನೆಗೊಳಿಸಿ ಬಂದ ಜ್ಞಾನ, ಮಾನವರೆಲ್ಲಾ ಒಂದು ಎಂಬ ಮಹಾಜ್ಞಾನ.

ಬಸವಣ್ಣನವರು ವೇದಗಳನ್ನು ಧಿಕ್ಕರಿಸಿದ ಮೇಲೆ ಅವರ ಅನುಯಾಯಿಗಳಾದ ಯಡಿಯೂರಪ್ಪನವರು, ಜಗದೀಶ್



ಶೆಟ್ಟರ್ ಮುಂತಾದವರು ಹಿಂದೂತ್ವವನ್ನು ಎತ್ತಿ ಹಿಡಿಯುವ ಬಿಜೆಪಿಯನ್ನು ಹೇಗೆ ಸೇರಿದ್ದಾರೆ? ಅಧಿಕಾರಕ್ಕಾಗಿ ಹೋಗಿದ್ದಾರೆಯೇ? ಅದರಿಂದ ಅವರು ಬಸವಣ್ಣನವರಿಗೆ ಮಹಾದ್ರೋಹ ಬಗೆದಂತಲ್ಲವೆ? ಹಾಗೆಯೇ ಅಂಬೇಡ್ಕರ್ ಹೆಸರನ್ನು ಜಪಿಸುವ ದಲಿತ ನಾಯಕರು ಗುಲಾಮಗಿರಿಯನ್ನು ವಿಧಿಸುವ ಹಿಂದೂತ್ವವನ್ನು ಸಹಿಸಲು ಹೇಗೆ -ಸಾಧ್ಯ? ಇವರಿಗೆಲ್ಲ ತಾತ್ವಿಕ ಶಕ್ತಿ ಇದ್ದರೆ, ಬಿಜೆಪಿ ವರಿಷ್ಠರಿಗೆ ಹೀಗೆ ಹೇಳಬೇಕು: ಕೇವಲ ರಾಜಕೀಯವನ್ನು ಮಾತ್ರ ಪಕ್ಷದ ಕಾರ್ಯಕ್ರಮದಲ್ಲಿ ಹೇಳಿ, ಹಿಂದೂ ದೇವರು, ಧರ್ಮದ ವಿಷಯಗಳನ್ನು ತರಬೇಡಿ. ಆರ್ಥಿಕ, ಸಾಮಾಜಿಕ ಸಮಸ್ಯೆಗಳ ಬಗ್ಗೆ ಕಾರ್ಯಕ್ರಮ ಇರಲಿ. ದೇವರು, ದೇವಸ್ಥಾನ, ಮಂದಿರ ಇತ್ಯಾದಿ ವಿಷಯಗಳನ್ನು ಪ್ರಸ್ತಾಪಿಸಬೇಡಿ; ರಾಜಕೀಯದಿಂದ ಮತವನ್ನು ಬೇರ್ಪಡಿಸಿ ಎಂದು ಹೇಳುವ ಎದೆಗಾರಿಕೆ, ಬಿಜೆಪಿಯಲ್ಲಿ ಇರುವ ಎಲ್ಲ ಅಬ್ರಾಹ್ಮಣರಿಗೆ ಇದೆಯೇ? ಇಲ್ಲ ಅಂದರೆ, ಅವರೆಲ್ಲ ಮೌನವಾಗಿ ವರ್ಣವ್ಯವಸ್ಥೆಯ ಗುಲಾಮಗಿರಿಯನ್ನು ಒಪ್ಪಿಕೊಂಡಿದ್ದಾರೆ ಎಂದೇ ಅರ್ಥ.

ಆದ್ದರಿಂದ ಅಸಮಾನತೆಯನ್ನೆ, ಭೇದಭಾವನೆಯನ್ನೇ ಧರ್ಮದ ತಿರುಳೆಂದು, ಚಾತುರ್ವರ್ಣ ವ್ಯವಸ್ಥೆಯನ್ನು ದೈವ ನಿಯಮ ಎಂದು ನಂಬಿಸಲು ವೈದಿಕರು ಹವಣಿಸುತ್ತಾರೆ. ಹೊಸ ಸಂವಿಧಾನ ಜಾರಿ ಆಗುವವರೆಗೆ (26 ನೇ ಜನವರಿ 1950) ಹಾಗೆಯೇ ನಡೆದುಕೊಳ್ಳುತ್ತಿದ್ದರು. ಅಬ್ರಾಹ್ಮಣರು ಹತ್ತಿರ ಬಂದರೆ "ಶೂದ್ರ ಮುಂಡೇದೇ, ದೂರ ಹೋಗು" ಎಂದು ಅಬ್ಬರಿಸುತ್ತಿದ್ದರು. ಈಗ ಸಮಾನತೆಯನ್ನೇ ಉಸಿರಾಡುವ ಹೊಸ ಸಂವಿಧಾನದ ಮೇಲೆ ಅವರಿಗೆ ಸಹಜವಾಗಿಯೇ ಅಸಮಾಧಾನ ಇದೆ. ಆದ್ದರಿಂದಲೇ ಅವರ ಮತೀಯ ಪಕ್ಷಗಳು, ಅವರ ಮಠಾಧಿಪತಿಗಳು (ವೇದ ವೇದ ಎಂದು ಭೇದ ಮಾಡುವವರು) ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಸಂವಿಧಾನಕ್ಕೆ ತಿದ್ದುಪಡಿ ತರುತ್ತೇವೆ, ಇಲ್ಲವೆ ಸಂವಿಧಾನವನ್ನೇ ಬದಲಾಯಿಸುತ್ತೇವೆ ಎಂದು ಆಗಾಗ್ಗೆ ಗುಡುಗುತ್ತಿದ್ದಾರೆ.

ಹಿಂದೂ ವ್ಯವಸ್ಥೆಯಲ್ಲಿ ಎರಡು ಬಗೆಯ ಗುಲಾಮಗಿರಿಗಳನ್ನು ಗುರುತಿಸಬಹುದು. ಒಂದು ಸ್ವದೇಶಿ ಗುಲಾಮಗಿರಿ; ಇನ್ನೊಂದು ವಿದೇಶಿ ಗುಲಾಮಗಿರಿ. ವಿದೇಶಿ ಗುಲಾಮಗಿರಿ ಎಲ್ಲರಿಗೂ ಸುಲಭವಾಗಿ ತಿಳಿಯುತ್ತದೆ. ಇಂಗ್ಲಿಷರು ಭರತಖಂಡವನ್ನು ವಶಪಡಿಸಿಕೊಂಡು ಸುಮಾರು ಇನ್ನೂರು ವರ್ಷಗಳ ಕಾಲ ಆಳಿದರು. ಅವರ ವಿರುದ್ಧ ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ಮಹಾ ಸ್ವಾತಂತ್ರ್ಯ ಸಂಗ್ರಾಮ ನಡೆಸಿ ಭಾರತ ವಿದೇಶಿ ಆಳ್ವಿಕೆಯನ್ನು ಕೊನೆಗೊಳಿಸಿತು. ಆದರೆ ಸ್ವದೇಶಿ ಗುಲಾಮಗಿರಿ ಹೊರಗಿನ ದಾಸ್ಯದಷ್ಟು ಸರಳವಾಗಿ ಅರ್ಥವಾಗುವುದಿಲ್ಲ.

ಹಿಂದೂ ಧರ್ಮ ಎಂದು ಹೇಳುವ ವೈದಿಕ ಮತ ಅಥವಾ ಬ್ರಾಹ್ಮಣ ಮತದಲ್ಲಿ ಚತುರ್ವರ್ಣಗಳಿವೆ. ಅದರ ಪ್ರಕಾರ ಎಲ್ಲಾ ಶೂದ್ರರು ಅಂದರೆ "ಅಬ್ರಾಹ್ಮಣರು ಬ್ರಾಹ್ಮಣರ ಗುಲಾಮರು: ದಾಸ್ಯಂ ಶೂದ್ರಂ ದ್ವಿಜನ್ಮನಾಂ" (ಮನುಸ್ಮೃತಿ 8. 410). ಇದನ್ನು ಎಲ್ಲಾ ಕಡೆ ಧರ್ಮದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ಸೇರಿಸಿಬಿಟ್ಟಿರುವುದರಿಂದ ಯಾರಿಗೂ ಅರ್ಥವಾಗುತ್ತಲೇ ಇಲ್ಲ. ಈ ಆಂತರಿಕ ದಾಸ್ಯತನ ಅರಿವಾಗುವುದು ಭಾರಿ ಸೂಕ್ಷ್ಮ ಸ್ವಭಾವದವರಿಗೆ, ಅಪಾರ ಆತ್ಮಗೌರವ ಉಳ್ಳವರಿಗೆ ಮಾತ್ರ. ಹಾಗಾಗಿ ಹೊರಗಿನ ದಾಸ್ಯದ ವಿರುದ್ಧ ಜನಜಾಗೃತರಾಗಿ ಒಟ್ಟಾಗಿ ಪ್ರತಿಭಟಿಸುವಂತೆ ಒಳಗಿನ ಗುಲಾಮಗಿರಿ ಎದುರು ಸಂಘಟಿತರಾಗುವುದಿಲ್ಲ, ಹೋರಾಡುವುದಿಲ್ಲ. ಚಾತುರ್ವರ್ಣವನ್ನು ಧರ್ಮ ಅಂತ ಮಾಡಿ ಮುಖ್ಯ ದೇವರುಗಳು ಎನ್ನುವ ರಾಮ ಮತ್ತು ಕೃಷ್ಣ ಅದರ ಪಾಲಕರು ಮತ್ತು ಪ್ರತಿಪಾದಕರು ಎಂದು ಮಾಡಿಬಿಟ್ಟಿದ್ದಾರೆ. ಇದನ್ನು ವಿಮರ್ಶೆ ಮಾಡಿದರೆ ದೇವರನ್ನೇ ನಿಂದಿಸುತ್ತಿದ್ದಾರಲ್ಲಾ! ಎಂದು ಹಾರುವರಿಗಿಂತ ಹೆಚ್ಚಾಗಿ ಅವಕಾಶವಾದಿ ಶೂದ್ರರೇ ಬಹಳ ಅಬ್ಬರಿಸುತ್ತಾರೆ. ಈ ಮತೀಯ ಗುಲಾಮಗಿರಿಯನ್ನು ದೇವಸ್ಥಾನಗಳ ಮೂಲಕ, ಜ್ಯೋತಿಷ್ಯ ಇತ್ಯಾದಿಗಳ ಮುಖಾಂತರ ಉಳಿಸಿಕೊಳ್ಳುವ ಪ್ರಯತ್ನ ನಿರಂತರವಾಗಿ ನಡೆಯುತ್ತಲೇ ಇದೆ. ■

ಮೋತಿಫರ್‌ನ ಗಾಯಾಳು ಹುಲಿ



ಇಂಗ್ಲಿಷ್ ಮೂಲ: ಆರ್ಥರ್ ಪೋವೆಲ್

■ ಕನ್ನಡಕ್ಕೆ: ವಸಂತ್ ನಡಹಳ್ಳಿ

ಅರಣ್ಯಪಾಲಕರದ್ದು ಒಂಟಿತನದ ಬದುಕಾದರೂ ...ಯ ಮನೆಗಳ ಜೊತೆ ಕಾಡಿನ ಅಧಿಪತ್ಯವೂ ಅವರ ...ಯಲ್ಲಿರುತ್ತದೆ. ಹಾಗಾಗಿ ಅವರು ಸಾಮಾನ್ಯವಾಗಿ ...ತ್ತಜೀವಿಗಳು. ಆದರೆ ಮೋತಿಫರ್‌ಗೆ ಹೋಗುವ ...ರಿಯಲ್ಲಿನ ಕೋಯೆಲ್ಲುರ್‍ರ ಅರಣ್ಯ ಚೌಕಿಗೆ ನಾನು ...ೇದಾಗ ಅಲ್ಲಿನ ಅರಣ್ಯಪಾಲಕ ಬಹಳ ದುಃಖಿಯಾಗಿದ್ದ. ...ದಲೇ ಅಲ್ಲಿಗೆ ತಲುಪಿದ್ದ ನನ್ನ ಶಿಕಾರಿಗಳು ಅವನ ...ಖವನ್ನು ಹೆಂಡದಲ್ಲಿ ಮುಳುಗಿಸಿ ಕಡಿಮೆ ಮಾಡಲು ...ಕರಿಸುತ್ತಿದ್ದರು! ದುಃಖದ ಕಾರಣ ಅವನ ಎಮ್ಮೆ ...ತ್ತು ಕರು ಹತ್ತಿರದ ಕಾಡಿನಲ್ಲಿ ಮೇಯುತ್ತಿರುವಾಗ ...ರತೆಯೊಂದು ಕರುವಿನ ಮೇಲೆ ಆಕ್ರಮಣ ಮಾಡಿದ್ದುದು ...ದು ಅವನು ಹೇಳಿದ. ಎಮ್ಮೆ ಮುನ್ನುಗ್ಗಿ ಚಿರತೆಯನ್ನು ...ಡಿಸಿದ್ದರೂ ಕರು ಸಾಯುವ ಸ್ಥಿತಿಯಲ್ಲಿತ್ತು.

ಕೆಲವೇ ನಿಮಿಷಗಳ ಹಿಂದೆ ನಾನು ಕನ್ಸ್ವಾರೋ ರಕ್ಷಿತ ...ಣ್ಯದಲ್ಲಿ ಕಾರಿನಲ್ಲಿ ಬರುವಾಗ ಚಿರತೆಯೊಂದು ಕಾರಿನ ...ಂದೆ ನಡೆದುಹೋಗುತ್ತಿತ್ತು. ಸ್ವಲ್ಪದೂರ ನಿಧಾನವಾಗಿ ...ನಲ್ಲಿ ಅದನ್ನು ಹಿಂಬಾಲಿಸಿದ ನಾನು ವೇಗವನ್ನು ...ಚ್ಚಿಸಿದಾಗ ಅದು ಗುರ್ರೆನ್ನುತ್ತಾ ಮರೆಯಾಗಿತ್ತು. ಇದೇ ...ತೆಯೇ ಕರುವಿನ ಮೇಲೆ ಹಲ್ಲೆ ಮಾಡಿರಬೇಕು ಅನ್ನಿಸಿತು. ...ರೆ ಕರುವಿನ ಕುತ್ತಿಗೆಯ ಮೇಲಿದ್ದ ಉಗುರಿನ ಗುರುತನ್ನು ...ೋಡಿದಾಗ ಇದು ಹುಲಿಯ ಕೆಲಸ ಎನ್ನಿಸಿದರೂ ...ಣ್ಯಪಾಲಕ ಇದಕ್ಕೆ ಒಪ್ಪಲಿಲ್ಲ. ಆ ಪಿಶಾಚಿ ಚಿರತೆಯನ್ನು ...ಲ್ಲುವವರೆಗೆ ತನ್ನ ಮನಸ್ಸಿಗೆ ಸಮಾಧಾನವಿಲ್ಲವೆಂದು ...ಳಾಡುತ್ತಿದ್ದ ಅವನನ್ನು ಸಮಾಧಾನಪಡಿಸುವುದು ...ಯೋಜಕವೆಂದು ಸುಮ್ಮನಾದೆ.

ಕರು ಆಗಲೇ ಸಾಯುವ ಸ್ಥಿತಿಯಲ್ಲಿತ್ತು. ಕೇವಲ ...ಗಂಟೆಗೆ ಮೊದಲು ತನ್ನ ಜೀವವನ್ನೇ ಪಣಕ್ಕಿಟ್ಟು ...ವನ್ನು ಉಳಿಸಿಕೊಂಡಿದ್ದ ಎಮ್ಮೆ ಈಗ ಅದು ...ಯುತ್ತಿರುವುದರ ಅರಿವಿಲ್ಲದೆ ಪಕ್ಕದಲ್ಲೇ ಮಲಗಿ ಹುಲ್ಲನ್ನು ...ಲುಕುತ್ತಿತ್ತು. ಈ ಮೂಕ ಪ್ರಾಣಿಗಳಿಗೆ ಮಾತುಗಳು ...ದ್ದರೆ ಎಂತಹ ರೋಮಾಂಚಕ ಸಾಹಸಗಳ ಕತೆಗಳನ್ನು ...ೇಳುತ್ತಿದ್ದವು ಎನ್ನಿಸಿತು. ಅವುಗಳ ಜೀವನದಲ್ಲಿ ...ಯುವ ದುರಂತಗಳು ಇಂತಹ ಘಟನೆಗಳನ್ನು ಕಣ್ಣಾರೆ ...ವರಿಗೆ ಮಾತ್ರ ಅನುಭವಕ್ಕೆ ಬರುತ್ತದೆ.

ಅರಣ್ಯ ವಸತಿಗೃಹಗಳಿಗೆ ಚಳಿಗಾಲದಲ್ಲಿ ಭಾರೀ ...ಸಿಕೆಯಾಗುತ್ತದೆ. ಹಲವಾರು ದಿನಗಳು ಕಾಯ್ದುಮೇಲೆ



ನನಗೆ ಮೋತಿಫರ್‌ನ ವಸತಿಗೃಹದಲ್ಲಿ ಉಳಿಯಲು ಸ್ಥಳ ಸಿಕ್ಕಿತ್ತು. ಹಾಗಾಗಿ ಉಳಿದ ನಾಲ್ಕು ದಿನಗಳ ಭರಪೂರ ಉಪಯೋಗ ಪಡೆಯಲು ನಿರ್ಧರಿಸಿದ್ದೆ. ಡೆಹ್ರಾಡೂನ್ ಅರಣ್ಯ ವಿಭಾಗದಲ್ಲಿ ಮೋತಿಫರ್ ಬೇಟೆಗೆ ಅತ್ಯುತ್ತಮ ಸ್ಥಳವೆಂದು ಪ್ರಸಿದ್ಧಿಯಾಗಿತ್ತು. ಹದಿನಾಲ್ಕು ವರ್ಷಗಳ ಹಿಂದೆ ನನಗೆ ಇಲ್ಲಿ ಬೇಟೆಯಾಡುವ ಅನುಮತಿ ಸಿಕ್ಕಾಗ ನಾನು ಮಾರ್ಚ್ ತಿಂಗಳ ಅಂತ್ಯದ ಹೊತ್ತಿಗೆ ಆರು ಬಲಿ ಎಮ್ಮೆಗಳನ್ನು ಶಿಕಾರಿಗಳೊಂದಿಗೆ ಮೊದಲೇ ಕಳಿಸಿದ್ದೆ. ಆದರೆ ನಾನು ಬರುವಷ್ಟರಲ್ಲಿ ನಾಲ್ಕು ಎಮ್ಮೆಗಳನ್ನು ಕಾಡಾನೆಗಳು ಕೊಂದುಹಾಕಿದ್ದವು ಮತ್ತು ಶಿಕಾರಿಗಳು ಕಾಡಿಗೆ ಹೋಗಲು ಭಯಪಡುತ್ತಿದ್ದರು. ಆನೆಗಳ ಗುಂಪು ಬೇಟೆಗಾರನ ಯೋಜನೆಯನ್ನೆಲ್ಲಾ ಬುಡಮೇಲು ಮಾಡುವ ಸಾಧ್ಯತೆಗಳಿರುತ್ತವೆ. ರೌಡಿ ಎಂದು ಘೋಷಿಸಲಾದ ಆನೆಗಳನ್ನು ಮಾತ್ರ ಬೇಟೆಯಾಡಲು ಅನುಮತಿ ಸಿಗುತ್ತಿತ್ತು. ಹಾಗಾಗಿ ನಾನು ಅಸಹಾಯಕನಾಗಿದ್ದೆ. ಆದರೆ ಈ ಬಾರಿ ನಾನು ಫೆಬ್ರುವರಿಯಲ್ಲೇ ಬಂದಿದ್ದರಿಂದ ಆನೆಗಳು ಗಂಗಾ ನದಿಯನ್ನು ದಾಟಿ ಇನ್ನೂ ಮೋತಿಫರ್‌ಗೆ ಬರುವ ಸಮಯವಾಗಿರಲಿಲ್ಲ.

ವಸತಿಗೃಹದಲ್ಲಿ ಇಳಿದುಕೊಂಡ ಕೂಡಲೇ ನಾನು ಸುತ್ತಲಿನ ಕಾಡುಗಳಲ್ಲಿ ಸುತ್ತಾಡತೊಡಗಿದೆ. ನಾನು ಹಲವಾರು ವರ್ಷಗಳಿಂದ ನೋಡದಿದ್ದ ಜಿಂಕೆಯ ಗುಂಪುಗಳನ್ನು ನೋಡಿ ಖುಷಿಯಾಯಿತು. ಎರಡನೇ ಮಹಾಯುದ್ಧದ ಸಮಯದಲ್ಲಿ ಅವುಗಳನ್ನು ಬೇಕಾಬಿಟ್ಟಿಯಾಗಿ ಬೇಟೆಯಾಡಿ ಎಷ್ಟೋ ಕಾಡುಗಳಲ್ಲಿ ಅವುಗಳ ಸಂತತಿಯನ್ನು ನಾಶಮಾಡಲಾಗಿತ್ತು. ಸುಮಾರು ಹೊತ್ತು ಅವುಗಳನ್ನು ನೋಡಿಕೊಂಡು ನಾನು ಹಿಂತಿರುಗುವಾಗ ಹುಲಿ ಮೂಳೆಗಳನ್ನು ಅಗಿಯುವಾಗ ಮಾಡುವಂತಹ ಶಬ್ದ ಕೇಳಿಬಂದಿತು. ಹಂದಿಗಳ ಗುಂಪೊಂದು ನನಗೆ ಹೆಸರು ಗೊತ್ತಿಲ್ಲದ ಯಾವುದೋ ಕಾಡಿನ ಹಣ್ಣನ್ನು ತಿನ್ನಲು ಅದರ ಕವಚವನ್ನು ಕಚ್ಚಿ ಒಡೆಯುತ್ತಿದ್ದವು. ಅವುಗಳಲ್ಲಿ ನಡೆಯುತ್ತಿದ್ದ ಸ್ಪರ್ಧೆಯನ್ನು ನೋಡಿದರೆ ಹಣ್ಣುಗಳು ಬಹಳ ರುಚಿಯಾಗಿರಬೇಕು ಎನ್ನಿಸಿತು. ಗುಂಪು ಕರಗಿ ಕೇವಲ 3-4 ಹಂದಿಗಳು ಉಳಿದುಕೊಂಡಾಗ ದಷ್ಟಪುಷ್ಟ ಹಂದಿಯೊಂದಕ್ಕೆ ಗುರಿಹಿಡಿದು ಗುಂಡುಹಾರಿಸಿದೆ. ನನ್ನ ಆಶ್ಚರ್ಯಕ್ಕೆ ಒಂದೇ ಗುಂಡಿಗೆ ಎರಡು ಹಂದಿಗಳು ಬಲಿಯಾಗಿದ್ದವು.

ಮರುದಿನ ಬೆಳಗ್ಗೆ ಕೋಯೆಲ್ಲುರ್‍ರದಿಂದ ಶಿಕಾರಿಗಳು ಮಾಹಿತಿಯೊಂದನ್ನು ತಂದಿದ್ದರು. ಅರಣ್ಯಪಾಲಕನ ಎಮ್ಮೆಕರುವನ್ನು ಕೊಂದ ಸ್ಥಳದ ಹತ್ತಿರ ಹುಲಿಯ ಹೆಜ್ಜೆಗುರುತುಗಳು ಕಂಡುಬಂದಿದ್ದವು. ಅದನ್ನೇ ಒಂದು ಮೈಲು ದೂರ ಅನುಸರಿಸಿಕೊಂಡು ಹೋದ ಶಿಕಾರಿಗಳು ಬಲಿಪಶುವೊಂದನ್ನು ಕಟ್ಟಿದ್ದರು. ಅಂದಿನ ಬೆಳಗ್ಗೆ ಹುಲಿ ಅದನ್ನು ಕೊಂದು ದಟ್ಟ ಅರಣ್ಯದಲ್ಲಿ ಎಳೆದುಕೊಂಡು ಹೋಗಿದ್ದನ್ನು ನೋಡಿದ ಅವರು ನನಗೆ ಸಮಾಚಾರ ತಿಳಿಸಲು ಬಂದಿದ್ದರು. ಉಪಾಹಾರ ಮುಗಿಸಿ ತಕ್ಷಣ ನಾನು ಕೋಯೆಲ್ಲುರ್‍ರಗೆ ಹೊರಟೆ.


ಹೆಜ್ಜೆ ಗುರುತುಗಳನ್ನು ನೋಡಿದ ನಾನು ಅದೊಂದು ಎಳೆಯ ಗಂಡುಹುಲಿಯೆಂದು ಹೇಳಿದರೆ ಶಿಕಾರಿಗಳು ಅದು ಹೆಣ್ಣುಹುಲಿಯೆಂದು ವಾದಿಸಿದರು. ಹೆಣ್ಣುಹುಲಿಯ ಪಾದ ಗಂಡಿನದಕ್ಕಿಂತ ಕಡಿಮೆ ಅಗಲವಿದ್ದು ಉದ್ದದಲ್ಲಿ ಹೆಚ್ಚಿರುತ್ತದೆ. ಅಲ್ಲದೆ ಬೆರಳುಗಳೂ ಕೂಡ ತೆಳುವಾಗಿರುತ್ತವೆ.

ಹುಲಿ ಬಲಿಪಶುವನ್ನು ಎಳೆದುಕೊಂಡು ಹೋಗಿ ದಟ್ಟ ಪೊದೆಗಳಡಿಯಲ್ಲಿ ಅಡಗಿಸಿತ್ತು. ಹತ್ತಿರದಲ್ಲೇ ಮಚಾನನ್ನು ನಿರ್ಮಿಸಿ ನಾಲ್ಕು ಗಂಟೆಯ ಸಮಯಕ್ಕೆ ನಾನು ಕುಳಿತುಕೊಂಡೆ. ಸುಮಾರು 5 ಗಂಟೆಯ ಹೊತ್ತಿಗೆ ಜಿಂಕೆಯ ಕೂಗು ಕೇಳಿಸಿತು. ಕಾಲುಗಂಟೆಯ ನಂತರ ಹುಲಿ ನನಗೆ ಗೊತ್ತಿಲ್ಲದಂತೆ ಸದ್ದಿಲ್ಲದೆ ಬಂದು ಮಾಂಸವನ್ನು ತಿನ್ನತೊಡಗಿತ್ತು. ಸಾಮಾನ್ಯವಾಗಿ ಹುಲಿಗಳು ತಿನ್ನುವ ಮೊದಲು ಶವವನ್ನು ಎತ್ತಿ ಅಲ್ಲಾಡಿಸಿ ಅಂಟಿಕೊಂಡ ಇರುವೆ ಮತ್ತಿತರ ಕ್ರಿಮಿಗಳನ್ನು ಉದುರಿಸುತ್ತವೆ. ಆದರೆ ಈ ಹುಲಿ ಅದನ್ನೂ ಮಾಡಿರಲಿಲ್ಲ. ಶಿಕಾರಿಗಳು ಸುತ್ತಲಿನ ಸ್ಥಳದಲ್ಲಿನ ಗಿಡಗಂಟಿಗಳನ್ನು ತೆಗೆದದ್ದರಿಂದ ಹುಲಿ ನನಗೆ ಸ್ಪಷ್ಟವಾಗಿ ಕಾಣುತ್ತಿತ್ತು. ಇನ್ನೂ ಹಗಲಿರುವಾಗಲೇ ಅದು ಬಂದಿರುವುದು ಆಶ್ಚರ್ಯವಾಗಿತ್ತು. ಹುಲಿಗೆ 40 ಅಡಿ ದೂರದಲ್ಲಿ ಕುಳಿತಿದ್ದ ನನ್ನ ಸುಳಿವು ಸಿಗದಿದ್ದರೂ ಅದು ಆಗಾಗ ತಲೆಯೆತ್ತಿ ನೋಡುತ್ತಿತ್ತು. ಬಾಲವನ್ನು ಉದ್ದವಾಗಿ ನೀಡಿಕೊಂಡು ಮೂಳೆಯನ್ನು ಕಡಿಯುತ್ತಾ ಕುಳಿತಿದ್ದ ಹುಲಿಯನ್ನು ನೋಡಿ ನನ್ನ ಬಳಿ ಬಂದೂಕಿನ ಬದಲು ಕ್ಯಾಮರಾ ಇದ್ದಿದ್ದರೆ ಚನ್ನಾಗಿತ್ತು ಅನ್ನಿಸಿತು. ಅದನ್ನು ಹೆದರಿಸಿ ಓಡಿಸಬೇಕೆನ್ನುವ ನನ್ನೊಳಗಿನ ಒತ್ತಡವನ್ನು ತಡೆದುಕೊಂಡು ಅರಣ್ಯಪಾಲಕನಿಗೆ ಅದನ್ನು ಕೊಲ್ಲುವುದಾಗಿ ಕೊಟ್ಟಿದ್ದ ಮಾತಿನಂತೆ ನಡೆಯಲು ಬೇಸರದಲ್ಲಿಯೇ ಬಂದೂಕನ್ನು ಎತ್ತಿ ಟ್ರಿಗರ್ ಒತ್ತಿದೆ.


ನಾನಂದುಕೊಂಡಂತೆ ಅದೊಂದು ಎಳೆಯ ಗಂಡುಹುಲಿಯಾಗಿತ್ತು. ಅದರ ಬಲಗಣ್ಣಿನ ಕೆಳಗಿನ ಕೆನ್ನೆಯ ಮೇಲೆ 3 ಇಂಚು ಉದ್ದದ ದಪ್ಪನಾದ ಹಂದಿಯ ಮುಳ್ಳೊಂದು ಹೊಕ್ಕಿತ್ತು. ಕೆಲವು 5 ಇಂಚು ಉದ್ದದ ಮುಳ್ಳುಗಳು ಗಲ್ಲದ ಮೇಲೆಯೂ ಚುಚ್ಚಲ್ಪಟ್ಟಿದ್ದವು. ಇದರಿಂದ ಹುಲಿಯ ಮುಖ ವಿಚಿತ್ರವಾಗಿ ಕಾಣುತ್ತಿತ್ತು. ಈ ಮುಳ್ಳುಗಳು ಮಾಂಸವನ್ನು ಜಗಿಯಲು ದವಡೆಯನ್ನು ಅಲ್ಲಾಡಿಸಿದಾಗ ಹುಲಿಗೆ ತೀವ್ರ ನೋವನ್ನು ಕೊಡುತ್ತಿತ್ತು. ಹಾಗಾಗಿ ಹುಲಿ ದನಕರುಗಳನ್ನು ಬೇಟೆಯಾಡುವ ಸುಲಭದ ಕೆಲಸಕ್ಕೆ ಕೈಹಾಕಿತ್ತು. ಈ ಮುಳ್ಳುಗಳು ಸಾಕಷ್ಟು ಸಮಯದಿಂದ ಅದರ ದೇಹದಲ್ಲಿದ್ದುದರಿಂದ ಹಳೆಯ ಪರಚು ಗಾಯದ ಕಲೆಯಂತೆ ಕಾಣುತ್ತಿತ್ತು. ಇದನ್ನು ಬಿಟ್ಟರೆ ಆರೋಗ್ಯವಂತವಾಗಿದ್ದ ಹುಲಿಯ ಚರ್ಮ ಆಕರ್ಷಕವಾಗಿತ್ತು. ಕಾರಿನ ಹಿಂದೆ ಹುಲಿಯ ಶವವನ್ನು ಕಟ್ಟಿಕೊಂಡು

▶▶ 15

ಸಂತೋಷದಿಂದಲೇ ಜ(ಭ)ಯ ಯಾರಿಗೆ




ಮೊನ್ನೆ ಬಿಜೆಪಿಯವರ ಎರಡು ದಿನಗಳ ಕಾರ್ಯಕಾರಿಣಿ ಸಭೆಯಲ್ಲಿ ಬಿಜೆಪಿ ಮತದಾರರ ವೇದಿಕೆಯ ಹೆಸರಲ್ಲಿ ಹಾಕಲಾಗಿದ್ದ ಸಂತೋಷದಿಂದಲೇ ಜಯವೆಂದು 'ಸಂತೋಷ'ವನ್ನು ಅಟ್ಟಕ್ಕೇರಿಸುವ ವಿಘ್ನ ಸಂತೋಷಿಗಳ ಪೋಸ್ಟರ್‌ಗಳನ್ನು ಜೈ ಸಂತೋಷಿ ಮಾ ದೇವಿಯ ಭಕ್ತಾಗ್ರೇಸರ ಯಡಿಯೂರಪ್ಪನವರ ಆಣತಿಯ ಮೇರೆಗೆ ಕಿತ್ತು ಬಿಸಾಕಿದ ಸುದ್ದಿ ಬಿಜೆಪಿ ವಲಯದೊಳಗೇ ಭಾರೀ ಚರ್ಚೆಗೆ ಕಾರಣವಾಗಿತ್ತಂತೆ. ರಾಜಕೀಯ ಕಾರಣಗಳಿಗಾಗಿ ಒಳಗೊಳಗೇ ಕತ್ತಿ ಮಸೆಯುತ್ತಿರುವ ಯಡ್ಡಿ – ಈಶುವಿನ ಪುರಾತನವಾದ ಕೋಳಿಜಗಳಕ್ಕೆ ಹಿಂದಿನಿಂದಲೇ ತಿದಿಯೂದಿ ದೊಡ್ಡದು ಮಾಡಿ ಬೇಳೆ ಬೇಯಿಸಿಕೊಳ್ಳಲು ಹವಣಿಸಿದ ಜನಿವಾರಿಗಳ ತಂತ್ರ ಮೇಲ್ನೋಟಕ್ಕೆ ಇದೀಗ ನಿಂತಂತೆ ಕಂಡರೂ ಸುಪ್ತವಾಗಿ ಇದು ಚಾಲ್ತಿಯಲ್ಲಿದ್ದೇ ಇರುತ್ತದೆ.



ಕಳೆದ ಸಂಚಿಕೆಯಲ್ಲಿ ರಷ್ಮಿತ್ ಸುಜೀರ್ ಕಾರ್ಕಳರವರು ಹೇಳಿದಂತೆ ಈ ಗೋವಾ ಪ್ರೇಮಿ ಸಂತೋಷನಂತವರ ಕೈಗೆ ಕರ್ನಾಟಕವನ್ನು ಒಂದುವೇಳೆ ಒಪ್ಪಿಸಿದ್ದೇ ಆದಲ್ಲಿ ಕರ್ನಾಟಕ ಬರ್ಬಾದ್ ಆಗುವುದರಲ್ಲಿ ಅನುಮಾನವೇ ಇರದು. ಅವರೇ ಉಲ್ಲೇಖಿಸಿರುವಂತೆ ಕೋಮುವಾದಿಗಳ ಪ್ರಯೋಗಾಲಯವೆಂದೇ ಎರಡು ಮೂರು ದಶಕಗಳಿಂದ ಕುಖ್ಯಾತವಾದ ಕರಾವಳಿ ಕರ್ನಾಟಕದ ಮೂಲ ಸೌಹಾರ್ದ ಹಿನ್ನೆಲೆಯನ್ನು 'ಹಿಂದೆ ನಿಂತು' (ಎಲ್ಲೂ ಮುನ್ನೆಲೆಯಲ್ಲಿ ಕಾಣಿಸಿಕೊಳ್ಳದೇ) ಹಾಳುಗೆಡವಿದ ಮಹತ್ಸಾಧನೆ ಯಾರದ್ದೆನ್ನುವ ಸತ್ಯ ಕರಾವಳಿಯಲ್ಲಿನ ಸಣ್ಣ ಮಗುವಿಗೂ ಗೊತ್ತು.

ಪ್ರತಿವರ್ಷ ಗೋವಾದ ಬೈನಾ ಮೊದಲಾದ ಪರಿಸರದಲ್ಲಿ ನಡೆಯುವ ಕನ್ನಡಿಗರ ಮೇಲಿನ ದೌರ್ಜನ್ಯ, ಮಹದಾಯಿ ವಿವಾದ ಇನ್ನಿತ್ಯಾದಿ ಪ್ರಮುಖ ವಿಚಾರಗಳ ಬಗ್ಗೆ ಎಲ್ಲೂ ಚಕಾರವೆತ್ತದೇ ಗೋವು, ಮತಾಂತರ, ಮುಸ್ಲಿಮ್ ದ್ವೇಷಗಳ ಬಗ್ಗೆ ಚಡ್ಡಿ ಬೈಠಕ್‌ಗಳಲ್ಲಿ ಶೂದ್ರರ ತಲೆಯಲ್ಲಿ ಕೋಮು ವಿಷ ತುಂಬಿ ಬಡಮಕ್ಕಳನ್ನು ಬಾವಿಗೆ ತಳ್ಳಿ ಆಳನೋಡುವ ತಲಬುಳ್ಳ ಈ ಸಂತೋಷನ ಕುಲ ಪಡೆ ಹಿಂದಿನ ಬಾಗಿಲಿನಿಂದ ಒಳಹೊಕ್ಕಿ ಕಾರ್ಯ ಸಾಧಿಸಿಕೊಳ್ಳುವ ತಂತ್ರದ ಅಸಲಿಯತ್ತೇ ಬೇರೆ ಇದೆ.

ದಳದವರ ಸ್ವಾರ್ಥದಿಂದಾಗಿ ಬಿಜೆಪಿ ಕರ್ನಾಟಕವನ್ನು ಆಳುವಂತಾದಂತೆ ಒಂದು ವೇಳೆ ಯಾವುದೋ ಕಾರಣದಿಂದ ಈ ನೆಲದಲ್ಲಿ ಸಂತೋಷಾಡಳಿತ ಬಂದದ್ದೇ ಆದಲ್ಲಿ ಈಗಾಗಲೇ ಕರಾವಳಿ ಕರ್ನಾಟಕದಲ್ಲಿ ಧಾರ್ಮಿಕ ವಿಷಬಿತ್ತುವ ಕಾರ್ಯ ನಡೆಸುತ್ತಿರುವ ಸಂತೋಷ ಕುಲಪಡೆಯ ಅಧೀನದಲ್ಲೇ ಇರುವಂತಹ ಕನ್ನಡದ ವಿದ್ವಾಂಸ ಕಲ್ಬುರ್ಗಿಯವರನ್ನು ಕೊಂದ ಗೋವಾ ಮೂಲದ 'ಸನಾತನ ಸಂಸ್ಥೆ' ಯಂತವುಗಳು ಮತ್ತಷ್ಟು ರಾಜಾರೋಷವಾಗಿ ಚಿಗಿತು ಹೆಮ್ಮರವಾಗಿ ಇಡೀ ಸೌಹಾರ್ದಮಯ ಕನ್ನಡನಾಡನ್ನೇ




ಆಹುತಿ ತೆಗೆದುಕೊಳ್ಳುವುದಂತೂ ಖಂಡಿತ.

-ವಿ. ರಮೇಶ, ಉಡುಪಿ

ಗೋರಕ್ಷಕರನ್ನೇ ಗಡಿ ಕಾಯಲು ಕಳುಹಿಸಬೇಕು

ಇಪ್ಪತ್ತು ಸಾವಿರ ಕೋಟಿ ವರಮಾನ ಹೊಂದಿರುವ ಬಾಬಾ ರಾಮ್ ದೇವ್ 100 ಪಾಕಿಗಳ ತಲೆ ಕಡಿದು ತರಬೇಕು ಎಂದು ವೀರಾವೇಶದ ಮಾತು ಆಡಿದನೇ ಹೊರತು ಹುತಾತ್ಮ ಯೋಧರ ಕುಟುಂಬಕ್ಕೆ ಒಂದು ಪೈಸೆ ಸಹಾಯ ಮಾಡಲಿಲ್ಲ, ಆದರೆ ಈಗ ಐಎಎಸ್ ಅಧಿಕಾರಿ ಆಗಿರುವ ಒಂದು ಮುಸ್ಲಿಂ ದಂಪತಿಗಳು ಒಬ್ಬ ಹುತಾತ್ಮ ಯೋಧನ ಮಗಳ ವಿದ್ಯಾಭ್ಯಾಸದ ವೆಚ್ಚ ಭರಿಸುವುದಾಗಿ ಹೇಳಿರುವುದು ನಿಜಕ್ಕೂ ಶ್ಲಾಘನೀಯ. ಇದರಿಂದ ಬಾಬಾ ರಾಮ್ ದೇವ ಮತ್ತು ಸಂಘ ಪರಿವಾರದ ಎಲ್ಲಾ ನಕಲಿ ದೇಶಭಕ್ತರ ಕೆನ್ನೆಗೆ ಹೊಡೆದಂತೆ ಸಹ ಆಗಿದೆ. ಪಾಕಿಗಳ ಅಷ್ಟು ತಲೆ ಕಡಿದು ತರಬೇಕು ಇಷ್ಟು ತಲೆ ಕಡಿದು ತರಬೇಕು ಎಂದು ಪೊಳ್ಳು ವೀರಾವೇಶ ತೋರಿಸುವ ಸಂಘಿ ಚಿರ್ಚಪ್ಪರನ್ನೆಲ್ಲಾ ಹಿಡಿದು ಪಾಕ್ ಗಡಿಗೆ ಕಳುಹಿಸಿ "ನೀವೇ ಹೋಗಿ ತಲೆ ಕಡಿದು ತನ್ನಿ, ನಾವು ನಿಮಗೆ ಬಹುಮಾನ ಕೊಡುತ್ತೇವೆ ಹಾಗೂ ಒಂದು ವೇಳೆ ನೀವು ಹುತಾತ್ಮರಾದರೆ ನಿಮ್ಮ ಕುಟುಂಬವನ್ನು ನಾವು ನೋಡಿಕೊಳ್ಳುತ್ತೇವೆ" ಎಂದು ಹೇಳಿದರೆ, ಆಗ ಈ ನಕಲಿ ದೇಶಭಕ್ತರಿಗೆ ಬುದ್ಧಿ ಬರಬಹುದು. ಮೊಟ್ಟ ಮೊದಲು ಬಾಬಾ ರಾಮ್ ದೇವನನ್ನು ಹಿಡಿದು ಪಾಕ್ ಗಡಿಯಲ್ಲಿ ಕೂಡಿಸಿ ಪಾಕಿಗಳ ಎದುರು ನಿನ್ನ ಯೋಗ ಕಸರತ್ತು ತೋರಿಸಿ ಪಾಕಿಗಳು ಯೋಗದಲ್ಲಿ ನಿರತರಾಗಿರುವಾಗ ಅವರಲ್ಲಿ ನೂರು ಪಾಕಿಗಳ ತಲೆ ಕಡಿದು ತರಲು ಹೇಳಬೇಕಿದೆ. ಆಗ ಇವನು ಮಹಿಳೆಯರ ಸಲ್ವಾರ್ ಕಮೀಜ್




ತೊಟ್ಟು ಗಡಿಯಿಂದ ತಪ್ಪಿಸಿಕೊಂಡು ಪಲಾಯನ ಮಾಡದಂತೆ ಯಾರಾದರೂ ಕಾವಲಿರಲೇಬೇಕು.

ಗೋರಕ್ಷಣೆಯ ನೆಪದಲ್ಲಿ ದೇಶವಿಡೀ ಕರಾಳ ಪರಿಸ್ಥಿತಿ ನಿರ್ಮಿಸಿರುವ ಗೋರಕ್ಷಕ ಪಡೆಯವರನ್ನೆಲ್ಲಾ ಹಿಡಿದು ಪಾಕ್ ಗಡಿಗೆ ಕಳುಹಿಸಿ ಅಲ್ಲಿ ಗೋಮಾಂಸ ತಿನ್ನುವ ಪಾಕಿಗಳಿಗೆ ಬುದ್ಧಿ ಕಲಿಸಲು ಹೇಳಬೇಕು. ಆಗ ಅವರ ನಿಜವಾದ ಗೋಭಕ್ತಿ ಮತ್ತು ದೇಶಪ್ರೇಮ ಎಷ್ಟಿದೆ ಎಂದು ಗೊತ್ತಾಗುತ್ತದೆ. ಭಾರತದೊಳಗೆ ನಿಸ್ಸಹಾಯಕ ಮುಸ್ಲಿಮರನ್ನು ಮತ್ತು ದಲಿತರನ್ನು ಗೋಮಾಂಸ ಸೇವನೆಯ ನೆಪದಲ್ಲಿ ಬಡಿಯುವುದಕ್ಕೂ ಪಾಕ್ ಗಡಿಯಲ್ಲಿ ಪಾಕ್ ಸೈನಿಕರೊಂದಿಗೆ ಹೊಡೆದಾಡುವುದಕ್ಕೂ ತುಂಬಾ ವ್ಯತ್ಯಾಸವಿದೆ ಎಂದು ಈ ಎಲ್ಲಾ ನಕಲಿ ರಾಷ್ಟ್ರಪ್ರೇಮಿಗಳಿಗೆ ಒಮ್ಮೆ ಗೊತ್ತಾಗಿ ಬಿಡಲಿ. ಇತ್ತೀಚೆಗೆ ಪಾಕಿಸ್ತಾನದ ಗಡಿಯಲ್ಲಿ ಪಾಕ್ ದುಷ್ಟರಿಂದ ಶಿರಚ್ಛೇದಕ್ಕೊಳಗಾಗಿ ಹುತಾತ್ಮನಾದ ಯೋಧ ಪ್ರೇಮ್ ಸಾಗರನ ಮನೆಗೆ ಯುಪಿಯ ಮುಖ್ಯಮಂತ್ರಿ ಯೋಗಿ ಸಾಂತ್ವನ ಹೇಳಲು ಬರುತ್ತಾನೆ ಎಂದು ಅಲ್ಲಿಯ ಸರಕಾರ ಆ ಯೋಧನ ಮನೆಗೆ ಏಸಿ, ಸೋಫಾ, ಫ್ರಿಜ್, ನೆಲಕ್ಕೆ ರತ್ನಗಂಬಳಿ ಮುಂತಾದ ಎಲ್ಲಾ ಐಷಾರಾಮಿ ಸವಲತ್ತುಗಳನ್ನು ಸರಕಾರದ ವತಿಯಿಂದ ಪೂರೈಸಿತು. ಆದರೆ ಯೋಗಿ ಬಂದು ಸಾಂತ್ವನ ಹೇಳಿ ಮರಳಿ ಹೋದ ಅರ್ಧ ಗಂಟೆಯಲ್ಲಿಯೇ ಆ ಹುತಾತ್ಮ ಯೋಧನ ಮನೆಯಿಂದ ಸರಕಾರಿ ಅಧಿಕಾರಿಗಳು ಏಸಿ, ಸೋಫಾ, ಫ್ರೀಜ್, ರತ್ನಗಂಬಳಿ, ಒಂದನ್ನೂ ಬಿಡದೇ ಕಿತ್ತೊಯ್ದರು. ಮಹಾ ದೇಶಭಕ್ತಿಯ ಪೋಜ್ ಕೊಡುವ ಢೋಂಗಿ ಯೋಗಿ ಮತ್ತು ಅವನ ಭೋಂಗಿ ಅಧಿಕಾರಿಗಳ ಹೃದಯ ಹೀನ ಅಪಾಥಭೂತಿತನಕ್ಕೆ ಇದಕ್ಕಿಂತ ಹೆಚ್ಚಿನ ಸಾಕ್ಷಿ ಬೇಕೆ?

-ಕೆ. ಲಕ್ಷ್ಮೀಕಾಂತ್ ರಾವ್, ಮಂಗಳೂರು

ಸರ್ಕಾರಿ ಬಸವಣ್ಣ ಕಾವೀಧಾರಿಯಲ್ಲ

ಮೊನ್ನೆ ಬಸವೇಶ್ವರ ಜಯಂತಿಯಂದು 'ಕೇಸರಿ ವಸ್ತ್ರ ಲಿಂಗಧಾರಿ ಬಸವಣ್ಣನ ಚಿತ್ರಕ್ಕೆ' ಸರಕಾರ ಅಸ್ತು ಎಂದಿದೆ ಎಂದು ಕೆಲವು ಹಿಂದೂತ್ವವಾದಿ ಪತ್ರಿಕೆಗಳು ತಲೆ ಬರಹದಲ್ಲಿ ಕಿರುಚಿದಾಗ ಓದುಗರಿಗೆ ಭಯವೆನಿಸಿದ್ದು ವಿವೇಕಾನಂದ, ನಾರಾಯಣ ಗುರುಗಳನ್ನು ಕೇಸರಿ ವಸ್ತ್ರದಲ್ಲಿ ಸುತ್ತಿದಂತೆ ಬಸವಣ್ಣನವರನ್ನೂ ಕೇಸರಿಯಲ್ಲಿ ಸುತ್ತಿಬಿಟ್ಟರೋ ಎಂದು. ಆದರೆ ಪುಣ್ಯಕ್ಕೆ ಸರಕಾರ ತನ್ನ ಎಲ್ಲ ಕಚೇರಿಗಳಲ್ಲಿ ಅಳವಡಿಸಲು ಆದೇಶಿಸಿರುವ ಚಿತ್ರದಲ್ಲಿ ಕೇವಲ ಬಸವಣ್ಣನವರ ಕೊರಳ ಸುತ್ತ ಇರುವ ಅವರ ಇಷ್ಟಲಿಂಗ ಮಾತ್ರ ಕೇಸರಿ ವಸ್ತ್ರದ ತುಂಡಿನಲ್ಲಿ ಸುತ್ತಿ ಅವರ ಕೊರಳಲ್ಲಿ



ಮಾಲೆಯಂತೆ ಚಿತ್ರಿಸಲಾಗಿದೆಯೇ ವಿನಹ ಅವರ ಮೈ ಮೇಲಿನ ವಸ್ತ್ರಗಳು ಕಾವಿ ಆಗಿರುವುದಿಲ್ಲ ಎಂದು ಸರಕಾರ ಸ್ಪಷ್ಟೀಕರಣ ಕೊಟ್ಟಿದೆ. ಬಸವಣ್ಣನವರ ಚಿತ್ರದಲ್ಲಿ ಅವರು ಬಿಳಿಶುಭ್ರ ವಸ್ತ್ರ ಧರಿಸಿರುವಂತೆ ಚಿತ್ರಿಸಲಾಗುತ್ತದೆ, ಅವರ ಕಿರೀಟವಿಲ್ಲದ ಸರಳ ರೂಪದಲ್ಲಿ ಕುಳಿತಿರುವ ಭಂಗಿಯಲ್ಲಿರುವ ಚಿತ್ರ ಮಾತ್ರ ಸರಕಾರಿ ಕಚೇರಿಗಳಲ್ಲಿ ಅಳವಡಿಸಲು ಸರಕಾರ ಆದೇಶ ಕೊಟ್ಟಿದೆ. ಹಣೆಗೆ ವಿಭೂತಿ, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಕೈಯಲ್ಲಿ ಲೇಖನಿ ಹಿಡಿದಿರುವ, ಕೊರಳಲ್ಲಿ ಕೇಸರಿ ಬಟ್ಟೆಯಲ್ಲಿ ಸುತ್ತಿದ ಲಿಂಗ ಧರಿಸಿರುವ ಏಕಚಿತ್ತದ 'ವಚನ ರಚನೆಯಲ್ಲಿ ನಿರತನಾದ ಬಸವಣ್ಣನವರ' ಚಿತ್ರವನ್ನು ಮಾತ್ರ ಸರಕಾರ ಅಂತಿಮಗೊಳಿಸಿದೆ. ಸರ್ಕಾರಿ ಕಚೇರಿಗಳಲ್ಲಿ ಕಡ್ಡಾಯವಾಗಿ ಅಳವಡಿಸಲು ರಾಜ್ಯ ಸರ್ಕಾರ ಅಧಿಕೃತಗೊಳಿಸಿರುವ ಈ ಕಲಾಕೃತಿಯನ್ನು ಬಳ್ಳಾರಿ ಜಿಲ್ಲೆಯ ಸಂಡೂರಿನ ಕಲಾವಿದ ವಿ.ಟಿ.ಕಾಳೆ ರಚಿಸಿದ್ದು, ಅವರ ಹೆಸರು ಉಲ್ಲೇಖಿಸುವುದನ್ನು ಸರ್ಕಾರ ಮರೆತಿರುವುದು ಮಾತ್ರ ಖೇದಕರ. ಈ ಸರಕಾರಿ ಬಸವಣ್ಣ ಒಂದು ವೇಳೆ ನಮ್ಮ ಸೋ ಕಾಲ್ಡ್ ವೀರಶೈವ ಸಂಶೋಧಕ ಚಿಂದಾನಂದ ಮೂರ್ತಿಯವರ ಕೈಯಲ್ಲಿ ಸಿಕ್ಕಿದ್ದರೆ ಬಸವಣ್ಣ ಸಂಪೂರ್ಣ ಕಾವಿಧಾರಿಯಾಗಿಯೇ ಅವತರಿಸುತ್ತಿದ್ದದ್ದು ಖಚಿತ.

-ಮಲ್ಲಿಕಾರ್ಜುನ ಶೆಟ್ಟರ್, ಬೆಳಗಾವಿ

ಮೋದಿಗೂ, ಟ್ರಂಪಣ್ಣನಿಗೂ ಇರುವ ವ್ಯತ್ಯಾಸ

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್1ಬಿ ವಿಸಾದ ಮೇಲೆ ನಿರ್ಬಂಧ ಹೇರಿರುವುದರಿಂದ ಮುಂದಿನ ಮೂರು ವರ್ಷಗಳಲ್ಲಿ ಭಾರತದಲ್ಲಿ ಸುಮಾರು ಆರು ಲಕ್ಷ ಐಟಿ ಉದ್ಯೋಗಗಳಿಗೆ ಕತ್ತರಿ ಬೀಳಲಿದೆಯಂತೆ. ಪ್ರತಿ ವರ್ಷ ಅಂದಾಜು 1.75 ಲಕ್ಷದಿಂದ 2 ಲಕ್ಷದಂತೆ ಮುಂದಿನ ಮೂರು ವರ್ಷಗಳಲ್ಲಿ 5 ರಿಂದ 6 ಲಕ್ಷದಷ್ಟು ಐಟಿ ಉದ್ಯೋಗಿಗಳು ಕೆಲಸ ಕಳೆದುಕೊಳ್ಳಲಿದ್ದಾರೆ ಎಂದು ಹೆಡ್ ಹಂಟರ್ಸ್ ಇಂಡಿಯಾ ಸಂಸ್ಥೆ ಮೊನ್ನೆ ಹೇಳಿದೆ. ಕ್ಲೌಡ್‌ನಂತಹ ಹೊಸ ತಂತ್ರಜ್ಞಾನಗಳಿಗೆ ಒಗ್ಗಿಕೊಳ್ಳಲು 35 ವರ್ಷ ಅದಕ್ಕಿಂತ ಹೆಚ್ಚಿನ ವಯೋಮಾನದ ಸಿಬ್ಬಂದಿಗೆ ಸಾಧ್ಯ ಕಾರಣ ಅಂತಹ ಸಿಬ್ಬಂದಿ ಕೆಲಸ ಕಳೆದುಕೊಳ್ಳ ಎಂದು ಸಂಸ್ಥೆಯ ಅಧ್ಯಕ್ಷರು ತಿಳಿಸಿದ್ದಾರೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪರ ದೋಷ ಇಲ್ಲ, ಕಾರಣ ಅವರು ಚುನಾವಣೆಯಲ್ಲಿ ಮತದ ಕೊಟ್ಟ ವಾಗ್ದಾನ ನೆರವೇರಿಸಿದ್ದಾರೆ ಅಷ್ಟೇ. ಅದು ಕರ್ತವ್ಯವಾಗಿತ್ತು, ಅದರಿಂದ ಭಾರತದ ಟೆಕ್ಕಿಗಳ ಹೋದರೆ ಅದಕ್ಕೆ ಟ್ರಂಪ್ ಜವಾಬ್ದಾರರಲ್ಲ.

ಆದರೆ ನಮ್ಮ ಪ್ರಧಾನಿಯನ್ನು ನೋಡಿ. ಚುನಾವಣೆಯ ಸಮಯ ಪ್ರತಿಯೊಬ್ಬ ಭಾರತೀಯನ ರೂ.15 ಲಕ್ಷ ವಿದೇಶದಲ್ಲಿರುವ ಕಪ್ಪು ಹಣ ಹಾಕುವುದಾಗಿ ವಾಗ್ದಾನ ಮಾಡಿದ್ದರು. ಆದರೆ 15 ಲಕ್ಷ ನಮ್ಮ ಖಾತೆಗೆ ಹಾಕುವುದು ಬಿಡಿ ನಿಷೇಧದಿಂದ ಭಾರತೀಯರ ಬೆನ್ನಿಗೇ ಭಯಂ ಇರಿದರು. ಡೊನಾಲ್ಡ್ ಟ್ರಂಪ್ ತನ್ನ ದೇಶದವರಿಗೆ ದ್ರೋಹ ಮಾಡಿಲ್ಲ, ಜತೆಗೆ ಸ್ಥಳೀಯರಿಗೇ ನೌಕರಿ ತನ್ನ ಚುನಾವಣಾ ವಾಗ್ದಾನವನ್ನು ಟ್ರಂಪ್ ಮೂರೇ ಅನುಷ್ಠಾನಗೊಳಿಸಿ ಭೇಷ್ ಅನಿಸಿಕೊಂಡರು.

'ವೈರಿಯ ವೈರಿ ಮಿತ್ರ' ಎಂಬ ನಾಣ್ಣುಡಿ ಟ್ರಂಪ್ ಸಹ ಮುಸ್ಲಿಮರನ್ನು ದ್ವೇಷಿಸುತ್ತಾರೆ ಎಂಬ ಕಾರಣಕ್ಕೆ ಭಾರತದ ಸಂಘ ಪರಿವಾರದವರು ಅಧ್ಯಕ್ಷೀಯ ಚುನಾವಣೆಯಲ್ಲಿ ಟ್ರಂಪ್ ಗೆಲ್ಲಬ ದೇಶದೆಲ್ಲೆಡೆ ಹೋಮ ಹವನ ಯಜ್ಞ ಮಾಡಿದ್ದೇ ನಂತರ ಟ್ರಂಪಣ್ಣ ಗೆದ್ದಾಗಲಂತೂ ಭಾರತದ ಪಡೆಗಳವರು ಟ್ರಂಪಣ್ಣನ ಮುಖವಾಡ ತೊಟ್ಟು ಹಂಚಿ ಬೀದಿಯಲ್ಲಿ ಕುಣಿದಿದ್ದೇ ಕುಣಿದಿದ್ದು. ತಮ್ಮ



ಹೋಮ ಹವನಗಳಿಗೆ ಒಲಿದು ಟ್ರಂಪ್‌ನನ್ನು ಗೆಲ್ಲಿ ಇವರು ಮತ್ತೆ ದೇವರಿಗೆ ವಿಶೇಷ ಥ್ಯಾಂಕ್ಸ್ ಪೂಜೆ ಮಾಡಲು ಮರೆಯಲಿಲ್ಲ, ಅಮೆರಿಕದಲ್ಲಿ ಭಾರತೀಯರ ಕಲ್ಯಾಣಕ್ಕಾಗಿ ಈ ಸಂಘಿಗಳು ಹೋಮ ಹವನ ಪೂಜೆ ಮಾಡಲೇ ಇಲ್ಲ, ಹಾಗಿ ಅಮೆರಿಕದಲ್ಲಿರುವ ಭಾರತೀಯ ಟೆಕ್ಕಿಗಳ ಉಳಿಯುವುದಾದರೂ ಹೇಗೆ ಸಾಧ್ಯ ಹೇಳಿ?


ಜನವರಿಯಲ್ಲಿ ಟ್ರಂಪ್ ಅಮೆರಿಕದ ಅಧಿಕಾರ ವಹಿಸಿಕೊಂಡ ದಿನ ಅವರು ಯಹೂದಿ ಬೌದ್ಧ ಮತ್ತು ಹಿಂದೂ ಪುರೋಹಿತರನ್ನು ಕರೆಸಿ ನಿಮಿಷದ ಆಶೀರ್ವಚನ ಮಾಡಿಸಿದರು. ಆದರೆ ಭಾ ಮಾಧ್ಯಮಗಳು ಮಾತ್ರ ವೈಟ್‌ಹೌಸಿನಲ್ಲಿ ನಾರಾಯಣಾಚಾರ್ಯ ಎಂಬ ವೈದಿಕನ ಆಶೀ ದೃಶ್ಯ ಮಾತ್ರ ಪ್ರಸಾರ ಮಾಡಿದರು. ಅಷ್ಟೇ ಅಲ್ಲ, ಭಾ ವಾಸ್ತು ತಜ್ಞರ ಸಲಹೆ ಕೇಳಿ ಟ್ರಂಪ್ ತನ್ನ ವೈಟ್ ಕಿಟಕಿ ಬಾಗಿಲು ಫರ್ನಿಚರ್ ಬದಲಾಯಿಸಿದರು ಸುಳ್ಳು ಸುದ್ದಿ ಸಹ ಮಾಧ್ಯಮಗಳಲ್ಲಿ ಸಂಘಿಗಳು ಬಿಟ್ಟು ತಮ್ಮ ವೈದಿಕ ಕಂದಾಚಾರಗಳೆಲ್ಲಾ ವಿಳು ದಾಟಿ ಅಮೆರಿಕದ ಅಧ್ಯಕ್ಷನ ಕಚೇರಿಗೆ ಹಾಗೂ ತಲುಪಿದೆ ಎಂದು ಪೊಳ್ಳು ಪ್ರಚಾರ ಮಾಡಿದರು ನಂತರ ಆಗಿದ್ದೇನು?

ಟ್ರಂಪ್ ಅಧಿಕಾರಕ್ಕೆ ಬಂದ ಮೇಲೆ ಹಿಂದಿ ತಿಂಗಳಲ್ಲಿ ಎಂಟು ಭಾರತೀಯರನ್ನು ಜನಾಂಗ ಹಿನ್ನೆಲೆಯಲ್ಲಿ ಬರ್ಬರ ಕೊಲೆ ಮಾಡಲಾಗಿದೆ. ಗೆಲುವಿಗಾಗಿ ಹೋಮ ಹವನ ಪೂಜೆ ಮಾಡಿದ ವಿಷಯದ ಬಗ್ಗೆ ಪ್ರತಿಕ್ರಿಯಿಸಲೇ ಇಲ್ಲ, ಅಮೆರಿಕದ ಭಾರತೀಯರೆಲ್ಲಾ ಈಗ ಭಯದ ವಾತಾವರಣದಲ್ಲಿ ದೂಡುತ್ತಿದ್ದಾರಂತೆ. ಇದಕ್ಕಾಗಿಯೇ ಭಾರತದ ಟ್ರಂಪ್‌ನ ಗೆಲುವಿಗೆ ಪೂಜೆ ಹೋಮ ಯಜ್ಞ ಟ್ರಂಪ್ ಸಹ ಮೋದಿಯಂತೆ ಮುಸ್ಲಿಂ ದ್ವೇ ಒಂದೇ ಕಾರಣಕ್ಕೆ ಭಾರತದ ಸಂಘಿಗಳಿಗೆ ಟ್ರಂ ಪ್ರಿಯನಾಗಿದ್ದು. ಆದರೆ ಕೊನೆಗೆ ಯಾರು ಉ ಹಿಂದೂಗಳನ್ನು ಕೊಲ್ಲುತ್ತಿರುವ ಮುಸ್ಲಿಂ ದ್ವೇಷಿ ಆಡಳಿತವೇ ಅಥವಾ ಲಕ್ಷಾಂತರ ಭಾರತೀಯ ಹಿಂದೂಗಳಿಗೆ ಜೀವನಾಧಾರ ನೌಕರಿ ಒದಗಿಸಿರುವ ಮುಸ್ಲಿಂ ದೇಶಗಳೇ?

-ಹರೀಶ್ ಎಂ ಆರ್.

'ಬೆದೆಗಾತಿ' ಎಂದದ್ದು ಸರಿಯೇ?

'ಮಂಗಳೂರು: ತಂಗಿ ತಲಬೂ ಸಂಘಿ ಸಂಚೂ!!' ಶೀರ್ಷಿಕೆ ಅಡಿ ಹಿಂದೂಗಳ ಹೆಣವಿಟ್ಟುಕೊಂಡು ಆಗಸ ಭೂಮಿ ಒಂದು ಮಾಡಿ ಅಲ್ಪಸಂಖ್ಯಾತರ ಮೇಲೆ ಮಸಲತ್ತು ಮಸೆಯುವ ಸಂಘಪರಿವಾರದ ದ್ವೇಷರಾಜಕಾರಣವನ್ನು, ಧರ್ಮಾಂಧತೆಯನ್ನು, ಸಾಮಾಜಿಕ ಹೊಣೆಗೇಡಿತನವನ್ನು ಖಂಡಿಸಿರುವುದು ಸೂಕ್ತವಾಗಿದೆ. ತನಿಖೆ ನಡೆಸಿ ಅಪರಾಧಿಗಳನ್ನು ಬಯಲಿಗೆಳೆದಿರುವ ಎಸಿಪಿ ವಾಲೆಂಟೈನ್ ಡಿಸೋಜಾ ಅವರಿಗೆ ಅಭಿನಂದನೆಗಳೊಂದಿಗೆ, ಕರಾವಳಿಯ ಪೊಲೀಸರ ಮೇಲಿನ ಅಲ್ಪಸಂಖ್ಯಾತರ ಅನುಮಾನ ಬಲವಾಗಲು ತಡೆಯೊಡ್ಡಬಹುದೇನೋ. ಆದರೆ ಈ ವರದಿಯಲ್ಲಿ ಅಪರಾಧಿಯಾಗಿರುವ ಒಡಹುಟ್ಟಿದ ಅಣ್ಣನನ್ನೇ ಕೊಲ್ಲಲು ಕುಮ್ಮಕ್ಕು ನೀಡಿರುವ ಹೆಣ್ಣೊಬ್ಬಳ ಕುರಿತು 'ಬೆದೆಗಾತಿ', 'ತೆವಲುತನ' ಪದಗಳು ಅತಿರಂಜಿತವಾಗಿವೆ ಎನ್ನಿಸುತ್ತದೆ. ಅಲ್ಲದೇ ಇಷ್ಟವಿಲ್ಲದ ಗಂಡನೊಡನೆ ಬದುಕಲೇಬೇಕೆಂಬ 'ಪುರುಷಾಧಿಪತ್ಯ'ದ ಧೋರಣೆಯೊಂದಿಗೆ ವರದಿಯಾಗಿರುವುದು ಮಹಿಳಾ ನೇತೃತ್ವದ ಪತ್ರಿಕೆಯೊಂದರ ಪ್ರಗತಿಪರ ನಡೆಯ ಬಗ್ಗೆ ಅನುಮಾನ ಮೂಡುವಂತಾಗಿದೆ. ವರದಿಯಲ್ಲಿ ಸಂಘಪರಿವಾರದ ಅಂಗಸಂಘಟನೆಗಳನ್ನು ಹಿಂದೂ ಸಂಘಟನೆಗಳು ಎಂದು 3 ಬಾರಿ ಬಳಸಲಾಗಿದೆ. ಹಿಂದೂ ಸಂಘಟನೆಗಳು ಎಂದು ಬಳಸುವ ಬದಲಾಗಿ ಹಿಂದೂತ್ವ ಸಂಘಟನೆಗಳು ಎಂದು ಬಳಸಬಹುದೇ ಯೋಚಿಸಬೇಕಾಗಿ ಮನವಿ.



- ತ್ರಿಮೂರ್ತಿ, ಈ ಮೇಲ್ ಮೂಲಕ

ಬೆಂಗಳೂರು Bengaluru ಅಂತರರಾಷ್ಟ್ರೀಯ ಸಿನಿಮೋತ್ಸವ

■ ಕಿಷ್ಣನಿರಾಜ್ 12


ಇದ್ದು ಆಗುವುದೋ? ಆಗಿ ಇರುವುದೋ?

ಅನನ್ಯ ಸಿನಿಮಾ ನಿರ್ಮಾಣ ತಂತ್ರಗಾರಿಕೆಯಲ್ಲಿ ಪದವಿ ಪಡೆದಿರುವವರು. ತಮ್ಮ ಅಧ್ಯಯನ ಭಾಗವಾಗಿ ಮಾಡಿದ 'ಕಪ್ಪು ಕಲ್ಲಿನ ಸೈತಾನ' (ಬೋಳುವಾರ್ ಮಹಮ್ಮದ್ ಕುಂಞಯವರ ಕಥೆ ಆಧರಿಸಿದ್ದು) ಹಾಗು 'ಬ್ರೇಕಿಂಗ್ ಬೈನರೀಸ್' ಎಂಬ ಸಾಕ್ಷ್ಯಚಿತ್ರಗಳ ಮೂಲಕ ತಮ್ಮ ಕಲಾ ಸಂವೇದನೆಯನ್ನು ಅಭಿವ್ಯಕ್ತಿಸಿದವರು. ಅಂತರ್ಲಿಂಗಗಳನ್ನು ಕುರಿತ ಅವರ ಸಾಕ್ಷ್ಯಚಿತ್ರ 'ಬ್ರೇಕಿಂಗ್ ಬೈನರೀಸ್' ನಿತ್ಯ ಬದುಕಿನಲ್ಲಿ ಗಂಡಾಗಿದ್ದರೂ ಹೆಣ್ಣಾಗಿದ್ದರೂ ಅನುಭವಿಸುವ ನಿತ್ಯ ದುಃಖಗಳು ಒಂದೆಯಾಗಿರುವಾಗ, ನಾವ್ಯಾಕೆ ಅಂತರ್ಲಿಂಗಿಗಳ ಬಗ್ಗೆ ಅವರು ಸಮಾಜಭಾವದಿಂದ ಹೊರಗೆ ಎಂದು ನೋಡುತ್ತೇವೆ ಎಂಬ ಸಮಸ್ಯೆಯನ್ನು ಎತ್ತುವ ಚಿತ್ರ. ಈ ಚಿತ್ರದಲ್ಲಿ ಅನನ್ಯ ಸಾಮಾನ್ಯರ ನಿತ್ಯ ಬವಣೆಗಳ ದೃಶ್ಯಾವಳಿಗಳ ಮೂಲಕ ಅಂತರ್ಲಿಂಗಿಗಳ ಬಗೆಗಿನ ಅಸ್ಪೃಶ್ಯತೆ, ಪುರುಷಾಧಿಕಾರದ ವೈಚಾರಿಕ ನಿರ್ಮಿತಿಯಲ್ಲವೇ ಎನ್ನುವುದನ್ನು ಬಲು ಸೂಕ್ಷ್ಮ ದೃಶ್ಯಾವಳಿಗಳ ಮೂಲಕ ಮೆಲುದನಿಯಲ್ಲಿ ಎತ್ತುತ್ತಾರೆ. ಮೆಲುದನಿ (Under statement) ಅನನ್ಯರ ಸಿನಿಮಾ ಕಲಾವಂತಿಕೆಯ ಗುಣ.

ಸಿನಿಮಾದ ಕಥಾ ಸಾರಾಂಶ

ಒಬ್ಬ ಯುವ ಸಿನಿಮಾ ನಿರ್ದೇಶಕಿ, ಈಗ ಮೃತನಾಗಿರುವ ಯಕ್ಷಗಾನದ ಹೆಣ್ಣು ವೇಷಧಾರಿಯೊಬ್ಬನ ಬದುಕಿನ ಕಥನವನ್ನು ಅರಿಯಲು ಹೊರಟಿದ್ದಾಳೆ. ಇದು ಅವಳ ಸಿನಿಮಾಕ್ಕೆ ಸಂಶೋಧನೆಯೋ? ಅಥವ ಹರಿಕಥೆ ಹೇಳುವ ತನ್ನ ಪಿತೃವಿನ ಬದುಕಿನ ಸಾರ್ಥಕತೆಯ ಸತ್ಯಾಸತ್ಯತೆಯೋ? ಎಂಬುದು ಅಸ್ಪಷ್ಟ. ನಿರ್ದೇಶಕಿ ಪಾತ್ರ ಕಥನದ ಹುಡುಕಾಟವು, ತನ್ನ ಬದುಕಿನ ಅರ್ಥವಂತಿಕೆಯ ಹುಡುಕಾಟವೂ ಹೌದು ಎಂಬ ಧಾವಂತದಲ್ಲಿ ನಿರ್ದೇಶಕಿ ಇದ್ದಾಳೆ. ಅವಳು ಹುಡುಕಲು ಹೊರಟ ಪಾತ್ರಧಾರಿಯ ಹೆಸರು 'ಹರಿ' ಹೌದೋ? ಅಲ್ಲವೋ? ಎಂಬುದನ್ನು ಅವಳು ಸಂದರ್ಶಿಸುವ, ಅವನು ಇದ್ದ ಯಕ್ಷಗಾನ ಮೇಳದ ಕಲಾವಿದರು ದೃಢೀಕರಿಸುವುದಿಲ್ಲ. ಆದರೆ ಸಾವನ್ನಪ್ಪಿದ ಸ್ತ್ರೀವೇಷಧಾರಿಯ ಬಗ್ಗೆ ಎಲ್ಲರೂ ತಮ್ಮ ಕಥನ ಬಿಚ್ಚಿಕೊಳ್ಳುತ್ತಾರೆ. ಹಲವು ನಾಮ ಹಲವು ರೂಪಣೆಗಳ ಗೋಜಲಿನಲ್ಲಿ 'ಹರಿ' ಎಂದು ಗುರುತಿಸಬಹುದಾದ ಸ್ತ್ರೀವೇಷಧಾರಿಯ ಕಥನವು ಬಿಚ್ಚಿಕೊಳ್ಳತೊಡಗುತ್ತದೆ. ಈ 'ಹರಿ' ಎಷ್ಟು ಖ್ಯಾತ ಸ್ತ್ರೀವೇಷಧಾರಿಯೆಂದರೆ, ರಂಗದ ಹಿನ್ನೆಲೆಯಲ್ಲಿ ಹೆಂಗಸರು ಬಂದು ತಮ್ಮ ಹೆಣ್ಣು ಬದುಕಿನ ದುಃಖ ದುಮ್ಮಾನ ತೋಡಿಕೊಳ್ಳುತ್ತಾರೆ; ಪ್ರೇಕ್ಷಕರಾಗಿ ಅವನಲ್ಲಿ ಕಥನದ ಸ್ತ್ರೀಪರ ಪಾತ್ರಧಾರಿಯನ್ನು ಕಾಣುತ್ತಾರೆ. ರಂಗದ ಹಿಂದೆ ಬಂದು ಹೆಣ್ಣೆಂಬಂತೆ ತಮ್ಮ ಕತೆ ಹೇಳಿಕೊಳ್ಳುವ ಹೆಂಗಸರು, ರಾತ್ರಿಯಿಡೀ ರಂಗದ ಮುನ್ನೆಲೆಯಲ್ಲಿ ತಾನು ಅಭಿನಯಿಸುವ ಯಕ್ಷಗಾನ ಪ್ರಸಂಗದ ಸ್ತ್ರೀವೇಷವನ್ನು ಅನುಭವಿಸುವವರ ಮಟ್ಟಿಗೆ ತಾನೊಂದು ಹೆಣ್ಣು; ಬೆಳಗಾಗಿ ಆಟ ಮುಗಿದು, ವೇಷ ಕಳಚಿ, ಮತ್ತೊಂದು ರಾತ್ರಿಯ ಪ್ರಸಂಗಕ್ಕೆ ಕತ್ತಲಕೋಣೆಯಲ್ಲಿ ವಿರಮಿಸುವಾಗ ತಾನೊಂದು ಗಂಡು ಎಂಬ ಇರುವಿಕೆಯೇ 'ಹರಿ'ಗೆ ಕಿರಿಕಿರಿಯಾಗತೊಡಗುತ್ತದೆ. ತಾನು ಗಂಡಾಗಿ 'ಇದ್ದು' ರಾತ್ರಿಯ ವೇಳೆ ವೇಷದಲ್ಲಿ ತಲ್ಲೀನವಾಗಿ ಹೆಣ್ಣು 'ಆಗುವೆನೋ'? ಅಥವ ತಾನು ಹೆಣ್ಣಾಗಿ 'ಇದ್ದು' ಹಗಲು ಗಂಡು 'ಆಗುವೆನೋ'? ತನ್ನ ಲಿಂಗದ ಗುರುತು ಯಾವುದು ಎಂಬ ತೊಳಲಾಟ 'ಹರಿ'ಯನ್ನು ಆವರಿಸಿಕೊಳ್ಳುತ್ತದೆ. ಅವನು ಗಂಡಾಗಿ 'ಇದ್ದು' ವೇಷದಲ್ಲಿ ಹೆಣ್ಣು ಆಗುತ್ತೇನೆ ಎಂದು ಲೋಕಕ್ಕೆ ಸಾಬೀತು ಪಡಿಸಲು ಹೋದಷ್ಟೂ, ಅವನ ಮೇಳ, ಊರು-ಕೇರಿ, ಕೊನೆಗೆ ಅವನ ಕುಟುಂಬವೂ ಅವನ ಈ 'ಇರುವ-ಆಗುವ' ತುಮುಲವನ್ನು ಸಹಜತೆಯನ್ನು ಒಪ್ಪಿ ಬದುಕಲಾಗದ ಐಲು ಎಂದು ತಳ್ಳಿಹಾಕುತ್ತದೆ. ಕಲಾವಿದನ ಬದುಕಿನ ಈ ತುಮುಲವನ್ನು, ಅವನ ಕಲೆಯನ್ನು ಕೊಂಡಾಡುವ ಪುರುಷ ಯಜಮಾನಿಕೆಯ ಸಮಾಜವು ಆಸರೆಕೊಟ್ಟು ಸಂಗೆಹರಿಸದಂಥ ಅಂತರ್ಗತ ಹಿಂಸೆಯ ಸಮಾಜ ಎಂದು ಮನಗಂಡು 'ಹರಿ' ಒಂದು ಬಂಡಾಯವೇಳುತ್ತಾಳೆ. ರಾತ್ರಿಯ ಸ್ತ್ರೀವೇಷವೇ ಸಮಾಜ ತನಗೆ ನೀಡುವ ಅಸ್ತಿತೆಯಾದರೇ, ಹಗಲಲ್ಲೂ ತಾನು ಹೆಂಗಸರು ಉಡುವ ಬಟ್ಟೆ ತೊಟ್ಟೇ ಜೀವಿಸುವ ಛಲ ತೊಡುತ್ತಾನೆ. ಇದೀಗ ಸಮಾಜಕ್ಕೂ ಅವನ ಕುಟುಂಬಕ್ಕೂ ಒಂದು ಸವಾಲಾಗುತ್ತದೆ. ಕುಟುಂಬ ಹಾಗು ಸಮಾಜದಿಂದ ಬಹಿಷ್ಕೃತನಾಗಿ ಅವನು ಬದುಕಲು ನಿರ್ಧರಿಸುತ್ತಾನೆ. ಈ ಸಂದಿಗ್ಧ ಸಮಯದಲ್ಲಿ, ಇವನ ಕಲಾವಂತಿಕೆಯನ್ನು ಅರಿತಿರುವ, ಭೂಮಿಯುಳ್ಳ ಸ್ಥಿತಿವಂತನಾಗಿದ್ದರೂ, ಸ್ವತಃ ಊರೂರು ತಿರುಗುವ ಯಕ್ಷಗಾನ ಕಲಾವಿದನಾಗಿದ್ದು ತನ್ನ ಸಂಸಾರ ಕಳೆದುಕೊಂಡ ಗಂಡಸೊಬ್ಬ 'ಹರಿ'ಯ ಸ್ಥಿತಿಯನ್ನರಿತು ಅವನಿಗೆ ಆಸರೆಯಾಗುತ್ತಾನೆ. ಆದರೆ, ಈ ಆಸರೆಯನ್ನೂ ಸಮಾಜವು ಅನೈತಿಕ ಕೂಡುವಿಕೆಯ ನೆಪದಲ್ಲಿ ಕಾನೂನು ಕಟ್ಟೆ ಹತ್ತಿಸುತ್ತದೆ. ಈಗ 'ಹರಿ' ಅನೈತಿಕ ವ್ಯವಹಾರ ಮಾಡುವ ಒಂಬ ಕ್ರಿಮಿನಲ್' ಆಗಿಬಿಡುತ್ತಾನೆ. ಅವನು ಕೊನೆಯಾಗಿ ಕಾಣಿಸಿಕೊಳ್ಳುವುದು ಮಹಾಭಾರತದ ಅಂಬೆಯ ಪಾತ್ರ ಮಾಡುವಾಗ - ಆಟದ ವೇಳೆ ಪೊಲೀಸರು ತಲಾಯಿಸುತ್ತಿರುವುದು ಪಾತ್ರಕ್ಕೂ, 'ಹರಿ'ಗೂ ಒಂದು ದುಃಸ್ವಪ್ನವಾಗಿ ಬಿಡುತ್ತದೆ. ಮರುದಿನ ಬೆಳಗ್ಗೆ ನದಿಯಲ್ಲಿ ಮೀಯಲು ಹೋದವನು ಮತ್ತೆ ಲೋಕಕ್ಕೆ ಕಾಣಿಸಿಕೊಳ್ಳುವುದಿಲ್ಲ.

'ಹರಿ'ಯ ನಿಜ ಕತೆ ಏನು? ಅವನು ಹೇಗೆ ಕಾಣೆಯಾದ? ಊರವರು ಆಡಿಕೊಳ್ಳುವ ಹಾಗೆ ಆತ್ಮಹತ್ಯೆ ಮಾಡಿಕೊಂಡನೆ? ಅಥವ ಕೆಲವರು ಅದು 'ಆತ್ಮಹತ್ಯೆ' ಮಾಡಿಕೊಳ್ಳುವ ಅಳ್ಳೆದೆಯಲ್ಲ ಎಂದರೆ ಅದು ಸಾಮಾಜಿಕ ವ್ಯವಸ್ಥೆ ಒರೆಸಿ ಹಾಕಿದ ಬದುಕೇ? ಎಂಬುದನ್ನು ಯುವ ನಿರ್ದೇಶಕಿ ಹುಡುಕಿ ಹೊರಟಿದ್ದಾಳೆ. ಸಮಾಜದ ಹಲವು ಜನರ ಕಣ್ಣೋಟದಲ್ಲಿ ಕಾಣುವ 'ಹರಿ'ಯ ಕಥೆಯ ತುಣುಕುಗಳಷ್ಟೇ ಅವಳಿಗೆ ಸಿಕ್ಕುವುದು. ಈ ತುಂಡುಗಳನ್ನು ಹೇಗೆ ಜೋಡಿಸಿದರೂ 'ಹರಿಕಥೆ' ಪೂರ್ಣವಾಗದಾಗ, ನಿರ್ದೇಶಕಿಗೆ ಸಿಗುವುದು ಒಂದು ಕಾಲದೇಶದ ಸಾಮಾಜಿಕ ಯಜಮಾನ ವ್ಯವಸ್ಥೆಯಲ್ಲಿ ನಿತ್ಯವೂ ಅಂತರ್ಗತವಾಗಿರುವ 'ಇರುವಿಕೆ-ಆಗುವಿಕೆ'ಯ ತೊಳಲಾಟ; ಅದು ಕಡೆಕಡೆದು ಹುಟ್ಟುವ ಅದೃಶ್ಯ ಹಿಂಸೆ. ಅವಳ ಎದುರಾಗುವ ಸವಾಲು ಈ ಅಂತರ್ಗತ ಹಿಂಸೆಯನ್ನು ಯಾವ ರೂಪಕದಲ್ಲಿ ಹೇಳಬೇಕು ಎನ್ನುವುದು. 'ಹರಿಕಥೆ'ಯ ಹುಡುಕಾಟದಲ್ಲಿ ನಿರ್ದೇಶಕಿಗೆ ಸಮಾಜದಲ್ಲಿ ಅವ್ಯಾಹತವಾಗಿರುವ ಲಿಂಗ ಹಿಂಸೆಯ ಹಲವು ವಾಸ್ತವಿಕ ಬಗೆಗಳ ಪರಿಚಯವಾಗುತ್ತದೆ; ಆ ವಾಸ್ತವಿಕ ಹಿಂಸೆಯು 'ಹರಿ'ಗೂ ಕಂಡಿತ್ತೇ? ತನ್ನ ವ್ಯಕ್ತಿಗತ ಸಮಸ್ಯೆ ಎನಿಸಿದ್ದು ವಿಸ್ತಾರವಾದ ಸಾಮಾಜಿಕ ಲಿಂಗ ಹಿಂಸೆಯ ಭಾಗವಾಗಿದೆ ಎಂದರಿತು ಛಲವಂತ 'ಹರಿ' ಕುಸಿದನೇ? ಎಂಬ ಗೋಜಲು ಸೇರಿಕೊಳ್ಳುತ್ತದೆ.



ಈ ಸಿನಿಮಾ ಯಾಕೆ ಮುಖ್ಯ

ಮನುಷ್ಯನ ಅಸ್ತಿತ್ವದ 'ಇರುವಿಕೆ-ಆಗುವಿಕೆ'ಯ ತಲ್ಲಣಗಳನ್ನು ಕತೆಗಳಾಗಿ ಕನ್ನಡದ ಖ್ಯಾತ ಕತೆಗಾರರು ದಾಖಲಿಸಿದ್ದಾರೆ. ಕನ್ನಡ ಭಾಷೆಯಲ್ಲಿ ಈ ತಲ್ಲಣಗಳನ್ನು ಶಕ್ತವಾಗಿ ಹೇಳುವ ಪರಂಪರೆಯಲ್ಲಿ ಕತೆಗಾರ ಗೋಪಾಲಕೃಷ್ಣ ಪೈ 'ಹರಿಕಥಾ ಪ್ರಸಂಗ'ವೆಂಬ ಕತೆಯನ್ನು ಬರೆದಿದ್ದಾರೆ. ಅನನ್ಯರ ಈ ಸಿನಿಮಾ ಆ ಕತೆಯನ್ನು ಆಧರಿಸಿದೆ. ಯಕ್ಷಗಾನ ಸ್ತ್ರೀವೇಷಧಾರಿಯೊಬ್ಬನ ಅಸ್ತಿತ್ವದ ತಲ್ಲಣಗಳನ್ನು ನಿರೂಪಿಸಲು ಕನ್ನಡ ಭಾಷೆ ಪಕ್ವವಾಗಿದೆ. ಆದರೆ ಅಗೋಚರ ಹಿಂಸೆಯ ತಲ್ಲಣವನ್ನು ದೃಶ್ಯ ಮಾಧ್ಯಮವಾದ ಸಿನಿಮಾದಲ್ಲಿ, ಎರಡು ತಾಸಿನ ಸಿನಿಮಾ ನಿರೂಪಣೆಯಾಗಿಸುವುದು ಸುಲಭದ ಕೆಲಸವಲ್ಲ. ಭಾಷಾ ಪರಂಪರೆ ರೂಪಿಸಿದ ಭಾಷೆಯ ಶಕ್ತಿಯ ಮೂಲಕ ಅಗೋಚರವಾದದ್ದನ್ನು ಓದುಗರಿಗೆ ಮುಟ್ಟಿಸುವುದು (ಅಮೂರ್ತ ಅನ್ನೋದು ಏನಿದೆಯೋ ಅದು) ಒಂದು ಬಗೆಯ ಸೃಜನಶೀಲತೆಯಾದರೆ, ದೃಶ್ಯ ಮಾಧ್ಯಮವಾದ ಸಿನಿಮಾದಲ್ಲಿ ನಿರೂಪಿಸುವುದು ದುಪ್ಪಟ್ಟು ಸೃಜಶೀಲತೆ ಕೇಳುವ ಕೆಲಸ. ಇಂಥ ಸಾಹಸಕ್ಕೆ ಅನನ್ಯ ತಮ್ಮ ಮೊದಲ ಕಥಾಚಿತ್ರದಲ್ಲೇ ಕೈ ಹಾಕಿದ್ದಾರೆ.


ಕತೆಯೊಂದು ಚಿತ್ರಕತೆಯಾಗುವುದು, ಚಿತ್ರಕತೆಯು ಕ್ಯಾಮೆರಾ ಕಲೆ, ಸಂಕಲನ ಕಲೆಗಳ ಮೂಲಕ ಒಂದು ದೃಶ್ಯ ನಿರೂಪಣೆಯಾಗುವಾಗ ಕತೆ ಪಡೆದುಕೊಳ್ಳುವ ಸ್ಥಿತ್ಯಂತರಗಳು ಬಹು ಮುಖ್ಯವಾದವು. ದೃಶ್ಯ ಕಲೆಗೆ ರೂಪಾಂತರಿಸುವಾಗ, ಮೂಲ ಕತೆಯ ವಸ್ತುವಿಗೆ ಭಿನ್ನ ಬಗೆಯ ಅರ್ಥವಂತಿಕೆಗಳನ್ನು ಸೃಜಿಸದೇ ಹೋದಲ್ಲಿ ಅದು ಬರಿ ತಾಂತ್ರಿಕ ಅನುವಾದ ಮಾತ್ರವಾಗುತ್ತದೆ. ಅನನ್ಯರ ಮೂಲ ಕತೆಯ ದೃಶ್ಯ ನಿರೂಪಣೆ, ವ್ಯಕ್ತಿಗತ ಅಸ್ತಿತ್ವದ ತಲ್ಲಣವನ್ನು (ಪ್ರೇಕ್ಷಕನ ದೃಷ್ಟಿಯಲ್ಲಿ) ಅನಾಯಾಸವಾಗಿ ಒಂದು ಕಾಲದೇಶದಲ್ಲಿ ಸಹಜವಾಗಿರುವ ಅಗೋಚರ ಸಾಮುದಾಯಿಕ ಲಿಂಗ ಹಿಂಸೆಯ ವ್ಯಾಖ್ಯಾನವಾಗಿಸುವುದು, ಪ್ರಸ್ತುತ ಸಿನಿಮಾದ ಸೃಜನಶೀಲತೆಯ ಹೆಚ್ಚುಗಾರಿಕೆ.

ಯಾರಿಂದಲೋ ಬಲ್ಲ 'ಹರಿ'ಯ (ಅದು ಆ ಪಾತ್ರದ ನಿಜ ನಾಮ ಹೌದೋ ಅಲ್ಲವೋ ಎನ್ನುವುದು ಸಿನಿಮಾದುದ್ದಕ್ಕೂ ಸಂದಿಗ್ಧವಾಗಿ ಬರುತ್ತದೆ. 'ಗಿರಿ'ಗಿಂತ ಭಿನ್ನವಾದ ವ್ಯಕ್ತಿ 'ಹರಿ' ಎನ್ನುವುದು ಹೆಸರಿನ ಲೌಕಿಕ ರೂಢಿ) ದುರಂತ ಕಥನವನ್ನು ದಾಖಲಿಸುವುದಕ್ಕೆ ಬಂದ ಯುವ ನಿರ್ದೇಶಕಿಗೆ, ಕಥನದ ಆಳ-ಗೋಜಲುಗಳು ನಿಧಾನಕ್ಕೆ ತೆರೆದುಕೊಳ್ಳುವುದು, ಅವುಗಳ ಆಳ ಹೆಚ್ಚಾಗುತ್ತಿದ್ದಂತೆ ದೃಶ್ಯಾವಳಿಗಳ ಚಿತ್ರಣದಲ್ಲಿ 'ಹರಿಕಥೆ' ನಿಧಾನವಾಗಿ ಬಿಚ್ಚಿಕೊಳ್ಳುವುದು. 'ಹರಿ'ಯ ಜತೆ ಒಡನಾಟದಲ್ಲಿದ್ದವರ ಮೂಲಕವಷ್ಟೇ 'ಹರಿಕಥೆ'ಯನ್ನು ಪಡೆಯಬಹುದಾದ ನಿರ್ದೇಶಕಿಗೇನೇ, 'ಹರಿ'ಯ ಬದುಕಿನ ಮೂರ್ತರೂಪವು, ಕಥಿಸುವವರ ಕಥನಾ ನಿರೂಪಣೆಯ ಪ್ರಾಮಾಣಿಕತೆಯ ಪ್ರಮಾಣದಲ್ಲಿ ದೃಶ್ಯಗಳಲ್ಲಿ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಒಂದು ಮುಕ್ಕಾಲು ತಾಸಿನ ಈ ಸಿನಿಮಾವನ್ನು ಹದಿನೈದು ನಿಮಿಷಗಳ 7 ಖಂಡಗಳ ಹಾಗೆ ವಿಭಜಿಸಿದರೆ, ಹರಿಯ ಪಾತ್ರ ಕಾಣಿಸಿಕೊಳ್ಳುವುದು ಎರಡನೇ ಖಂಡದಲ್ಲಿ, ಆ ನಂತರದ 6 ಖಂಡಗಳ ದೃಶ್ಯಾವಳಿಗಳಲ್ಲಿ 'ಹರಿ'ಯ ಬದುಕು ವ್ಯಕ್ತಿಗತದಿಂದ ಸಾಮಾಜಿಕ ಲಿಂಗ ಯಜಮಾನಿಕೆಯ ದೃಶ್ಯಾವಳಿಗಳಾಗಿ ಗರಿಬಿಚ್ಚುತ್ತದೆ. ಅನನ್ಯ 'ಹರಿಕಥಾ ಪ್ರಸಂಗ'ವನ್ನು ಸಿನಿಮಾ ಮಾಡಲು ಹೊರಟಾಗ, ಕತೆ ಸಿನಿಮಾವಾಗುವಾಗ ಎದುರಾಗುವ ಸವಾಲುಗಳ ಪರಿಯನ್ನು ಅನಾವರಣಗೊಳಿಸುವಂತೆ ಈ ಖಂಡಗಳಿವೆ. ಒಂದೊಂದು ಖಂಡದಲ್ಲೂ ಭಿನ್ನ ನಿರೂಪಕರ ನಿರೂಪಣೆಯ ಮೂಲಕ ಈ ಸಿನಿಮಾವೂ 'ರಷೋಮನ್ ಎಫೆಕ್ಟ್'ನಲ್ಲಿ (ಖ್ಯಾತ ನಿರ್ದೇಶಕ ಕುರಾಸೋವನ ಪ್ರಭಾವಿ ಸಿನಿಮ 'ರಷೋಮನ್'ನ ಸಿನಿಮಾದ ನಿರೂಪಣ ವೈಶಿಷ್ಟ್ಯಕ್ಕೆ ದಕ್ಕಿರುವ ರೂಪಕ) ವ್ಯಕ್ತಿಗತವಾದುದ್ದನ್ನು ಸಾಮುದಾಯಿಕ ನೆಲೆಯ ದುರಂತವಾಗಿ ಕಟ್ಟಿಕೊಳ್ಳತೊಡಗುತ್ತದೆ.

ಸಿನಿಮಾ ಮಾಡುವ ಬಗೆಯೇ, ಸಿನಿಮಾದ ತಾತ್ವಿಕತೆಯ ಹುಡುಕಾಟವಾಗುವ ಬಗೆಯಾಗುವ ವಿಶಿಷ್ಟತೆಯನ್ನು ಈ ಸಿನಿಮಾದಲ್ಲಿ ಗುರುತಿಸಬಹುದು. ಇಷ್ಟೊಂದು ಕಷ್ಟಕರ ಸಂವೇದನೆಯ ವಸ್ತುವನ್ನು ಇಟ್ಟುಕೊಂಡು ಸಿನಿಮಾ ಮಾಡುವಾಗ, ಒಂದು ನಿಲುವಿನಿಂದ ಏರುದನಿಯಲ್ಲಿ ಮಾತನಾಡುವುದಕ್ಕೆ ಪ್ರಚೋದನೆಗಳಿರುತ್ತವೆ. ಹಲವು ಕಥನಗಳ ಮೂಲಕ 'ಹರಿ'ಯ ಬದುಕನ್ನು ಕಟ್ಟಿಕೊಡಲು ಹೊರಟ ನಿರ್ದೇಶಕಿಗೆ, ಒಂದು ನಿರೂಪಣೆಯನ್ನು ಕೇಂದ್ರವಾಗಿಟ್ಟುಕೊಂಡು ಇತರ ನಿರೂಪಣೆಗಳನ್ನು ಉಪ ಪ್ರಸಂಗಗಳಾಗಿ (ಯಕ್ಷಗಾನದ ತಾಳಮದ್ದಳೆಗಾರರ ಹುಮ್ಮಸ್ಸಿನಂತೆ) ಹೆಣೆಯುವ ಸಂಭಾವ್ಯತೆ ಇತ್ತು. ಆದರೆ, ಅನನ್ಯ ಆ ಮಾರ್ಗವನ್ನು ತ್ಯಜಿಸುತ್ತಾರೆ, ಎಲ್ಲಾ ನಿರೂಪಣೆಗಳೂ ಸಮನಾಗಿ 'ಹರಿಕಥೆ'ಯ ನಿರೂಪಣೆಗಳಾಗುವುದಾದರೆ, ನಿಮ್ಮ 'ಹರಿಕಥೆ'ಯನ್ನು ನೀವೂ ಕಟ್ಟಿಕೊಳ್ಳಬಹುದು ಎಂಬ ನಿಲುವಿನಿಂದ ಪ್ರತಿ ನಿರೂಪಣೆಯನ್ನೂ ಅನನ್ಯ ಇಳಿದನಿಯಲ್ಲಿ ಕಟ್ಟಿಕೊಡುತ್ತಾರೆ. 'ಇಳಿದನಿ' ಅನನ್ಯರ ಅನನ್ಯತೆ ಎಂದು ನನಗನ್ನಿಸುತ್ತಿದೆ.

ಇಳಿದನಿಯ ಸಿನಿಮಾಗಳು ಸಾಮಾಜಿಕ ಯಜಮಾನಿಕೆಯನ್ನು ತಣ್ಣಗೆ ಕಟ್ಟಿಕೊಟ್ಟು, ನಿರ್ದೇಶಕರ ನಿಲುವನ್ನು ಖಾಲಿಯಾಗಿ ಬಿಡುವ ಸಾಧ್ಯತೆಯೂ ಇದೆ-ಕಲೆಯಲ್ಲಿ ಅದು ಅಪರಾಧವಾಗಕೂಡದು. ಆದರೆ ಅನನ್ಯ ತನ್ನ ಇಳಿದನಿಯ ದೃಷ್ಟಿಯನ್ನು ಸಿನಿಮಾದ ಕೊನೆಯ ಖಂಡದಲ್ಲಿ ಮಾಡುತ್ತಾರೆ. 'ಹರಿ' ನದಿ ನೀರಲ್ಲಿ ಸ್ನಾನಕ್ಕಿಳಿಯುವ ದೃಶ್ಯವಂತೂ ಅಕ್ಕಮಹಾದೇವಿ, ಅಲ್ಲಮ, ಬಸವಣ್ಣನವರ ವಚನಗಳೂ ಹಾಗು ಎ.ಕೆ.ರಾಮಾನುಜನ್‌ರ ಎರಡು ಪದ್ಯಗಳ ತಾತ್ವಿಕತೆಯ ದೃಶ್ಯ ಪ್ರತಿಮೆಯ ಹಾಗೆ ಕಾಣುತ್ತವೆ. ಕನ್ನಡ ಭಾಷೆಯ ಅತ್ಯುತ್ತಮ ಕಾವ್ಯ ಪ್ರತಿಮೆಗಳನ್ನು ದೃಶ್ಯ ಪ್ರತಿಮೆಗಳಲ್ಲಿ ನೆನಪಿಸುವ ಸಿನಿಮಾವಿದು.

(ಹಿಂದಿನ ಬರಹಗಳಲ್ಲಿ, ಅನ್ಯದೇಶ-ಭಾಷೆಗಳ ನಿರ್ದೇಶಕರನ್ನು ಏಕವಚನದಲ್ಲಿ ಸಂಬೋಧಿಸಿರುವೆನು-ಅವರು ನಮ್ಮವರೇ ಎಂಬ ಪ್ರೀತಿ ಮೂಡಲಿ ಎಂಬ ಸಲುವಾಗಿ. ಈ ಬರಹದಲ್ಲಿ, ನನಗಿಂತ ಕಿರಿಯರಾದ ಅನನ್ಯರನ್ನು ಬಹುವಚನದಲ್ಲಿ ಸಂಬೋಧಿಸಿರುವೆ - ಹತ್ತಿರದಲ್ಲೇ ಇರುವ ಹುಡುಗಿಯ ಪ್ರತಿಭೆಗೆ ಗೌರವ ಸೂಚಕವಾಗಿ. ಕನ್ನಡ ಭಾಷಿಕ ಪರಂಪರೆಯಲ್ಲಿ ಈ ಎರಡೂ ಬಗೆಯ ಸಂಬೋಧನೆಗಳೂ, ಗೌರವ-ಪ್ರೀತಿಯ ಸೂಚಕಗಳಾಗಿವೆ ಎನ್ನುವುದನ್ನು ಕನ್ನಡದ ಜಾಣೆ-ಜಾಣೆಯರು ಅರಿಯುವರು ಎನ್ನುವುದು ಪಾಮರನ ವಿನಂತಿ.) ■



ಹರಿಕಥಾ ಪ್ರಸಂಗ (2016)
ನಿರ್ದೇಶನ: ಅನನ್ಯ ದೇಶ: ಭಾರತ
ಚಿತ್ರಕಥೆ: ಅನನ್ಯ, ಗೋಪಾಲ ಕೃಷ್ಣ ಪೈ, ಗಿರೀಶ್ ಕಾಸರವಳ್ಳಿ
ಛಾಯಾಗ್ರಹಣ: ಉದಿತ್ ಖುರಾನ, ಬಾಲಜಿ ಮನೋಹರ್
ಸಂಕಲನ: ಮೋಹನ್ ಕಾಮಕ್ಷಿ

---

13 ◀◀ ಗಾಯಾಳು ಹುಲಿ..

...ರುತ್ತಿದ್ದಾಗ ಲಂಗೂರ್ ಕೋತಿಗಳು ಅಪಾಯದ ಕರೆಯನ್ನು ...ಡುತ್ತಿದ್ದವು. ಮರುದಿನ ಬೆಳಗ್ಗೆ ಚರ್ಮವನ್ನು ಬಿಡಿಸಲು ಶವವನ್ನು ಮರದ ಬುಡಕ್ಕೆ ತಂದಾಗ ಕೋತಿಗಳು ದೊಡ್ಡ ...ಬ್ಬಿಸಿದವು. ಮರದ ಮೇಲಿನಿಂದ ಗಲಾಟೆ ಮಾಡುತ್ತಿದ್ದ ಅವುಗಳ ಪ್ರತಿಕ್ರಿಯೆ ತಿಳಿಯಲು ನಾನೊಂದು ಉಪಾಯ ಮಾಡಿದೆ. ಕೋತಿಗಳು ಕುಳಿತಿದ್ದ ಮರಗಳ ನಡುವಿನ ...ದೊಂದರಲ್ಲಿ ಅರ್ಧ ಮರೆಯಾಗಿಸಿ ಶವವನ್ನು ಇರಿಸಿ ...ದೆ. ದೊಡ್ಡ ಗಂಡುಕೋತಿಯೊಂದು ನಿಧಾನವಾಗಿ ...ರದಿಂದ ಇಳಿಯುತ್ತಾ ಕೊನೆಗೆ ಹುಲಿಯ ಶವದ ಹತ್ತಿರ ...ದಿತು. ಅದನ್ನು ನೋಡಿದ ಇತರ ಕೋತಿಗಳೂ ನೆಲಕ್ಕೆ ...ದು ಹುಲಿಯ ಹತ್ತಿರವೇ ಸುತ್ತಾಡತೊಡಗಿದವು. ...ತಿಗಳ ಇಂತಹ ಸ್ವಭಾವದ ಉಪಯೋಗವನ್ನು ಚಿರತೆ ...ತ್ತು ಹುಲಿಗಳು ಪಡೆಯಬಹುದು ಎಂದು ನನಗನ್ನಿಸಿತು. ...ನ ಕೋತಿಗಳೆದುರು ತನ್ನ ಶೌರ್ಯ ಪ್ರದರ್ಶನ ಮಾಡಲು ಯಾವುದಾದರೊಂದು ಕೋತಿ ತೀರ ಹತ್ತಿರಕ್ಕೆ ಹೋದಾಗ ಹುಲಿ ಚಿರತೆಗಳಿಗೆ ಬಲಿಯಾಗುತ್ತಿದ್ದಿರಬಹುದು. ಅದಿಲ್ಲದಿದ್ದರೆ ಆ ಕಾಡುಪ್ರಾಣಿಗಳು ಕೋತಿಗಳನ್ನು ಹಿಡಿಯುವುದು ಸಾಧ್ಯವೇ ಇಲ್ಲ; ಚುರುಕಾದ ಚಲನೆ ಮತ್ತು ಅದ್ಭುತ ದೃಷ್ಟಿಯನ್ನು ಹೊಂದಿರುವ ಇವುಗಳು ಅಪಾಯದ ಸಮಯದಲ್ಲಿ ಮರಗಳಲ್ಲಿ ಹಾರುವುದನ್ನು ನೋಡಿಯೇ ಆನಂದಿಸಬೇಕು. 30 ಅಡಿ ಕೆಳಗೆ ಮತ್ತು 20 ಅಡಿ ದೂರಕ್ಕೆ ಒಮ್ಮೆಲೇ ಮರದಿಂದ ಮರಕ್ಕೆ ಜಿಗಿಯುವ ಇವುಗಳ ಚಾಕಚಕ್ಯತೆಯನ್ನು ಎತ್ತರದ ಬೆಟ್ಟಗಳಲ್ಲಿ ಹೆಚ್ಚಾಗಿ ನೋಡಬಹುದು.

ವಸತಿಗೃಹಕ್ಕೆ ಬಂದು ಹುಲಿಯ ಚರ್ಮವನ್ನು ಬಿಡಿಸುತ್ತಿರುವಾಗ ಕೆಲವೇ ಫರ್ಲಾಂಗ್ ದೂರದ ಬೆಟ್ಟದಲ್ಲಿ ಜಿಂಕೆಗಳು ಅಪಾಯದ ಕರೆಯನ್ನು ಮೊಳಗಿಸುತ್ತಿದ್ದವು. ನಾನು ಒಬ್ಬ ಶಿಕಾರಿಯನ್ನು ಕರೆದುಕೊಂಡು ಹೊರಟೆ. ನೇರವಾಗಿ ಜಿಂಕೆಗಳಿದ್ದಲ್ಲಿಗೆ ಹೋಗದೆ ಅವುಗಳನ್ನು ಬಳಸಿಕೊಂಡು ಗುಡ್ಡದ ತುದಿಯನ್ನೇರಿ ನಿಧಾನವಾಗಿ ಇಳಿಯತೊಡಗಿದೆವು. ಕೆಳಗಿದ್ದ ಬಿದಿರು ಮೆಳೆಯನ್ನು ತಲುಪಿದಾಗ ನಮ್ಮಿಂದ ಸುಮಾರು 200 ಅಡಿ ದೂರದಲ್ಲಿ ಮೂರು ಜಿಂಕೆಗಳು ಒಟ್ಟಾಗಿ ಮೇಯುತ್ತಿದ್ದುದನ್ನು ನೋಡಿದೆವು. ಆಗಾಗ ಹತ್ತಿರದ ಹುಲ್ಲಿನ ಪೊದೆಯ ಕಡೆಯಿಂದ ಬರುತ್ತಿದ್ದ ಗಾಳಿಯನ್ನು ಮೂಸುತ್ತಾ ಅದೇ ದಿಕ್ಕಿನಲ್ಲಿ ದೃಷ್ಟಿಯನ್ನು ನೆಟ್ಟು ತಮ್ಮ ಕೂಗನ್ನು ಮುಂದುವರೆಸಿದ್ದವು. ಅಲ್ಲಿ ಯಾವುದೋ ಅಪಾಯವಿರುವುದು ಖಾತ್ರಿಯಿದ್ದರೂ ನನ್ನ ಕಣ್ಣಿಗೆ ಏನೂ ಕಾಣುತ್ತಿರಲಿಲ್ಲ. ನನ್ನ ದೂರದರ್ಶಕದ ಮೂಲಕ ನೋಡಿದಾಗ ಚಿರತೆಯೊಂದು ಹುಲ್ಲಿನ ಮರೆಯಿಂದ ಹೊರಟು ಬಿದಿರು ಮೆಳೆಯೊಂದರ ಹಿಂದೆ ಅಡಗಿಕೊಳ್ಳುತ್ತಿರುವುದು ಕಾಣಿಸಿತು.. ತಕ್ಷಣ ನಾನು ಮರೆಯಿಂದ ಈಚೆ ಬಂದಿದ್ದರೆ ಚಿರತೆ ಅಥವಾ ಜಿಂಕೆ ನನ್ನನ್ನು ನೋಡಿ ಓಡಿಹೋಗುವ ಸಾಧ್ಯತೆಗಳಿದ್ದವು. ಕೆಲವೇ ಕ್ಷಣಗಳಲ್ಲಿ ಹಿಂದಿನಿಂದ ಜಿಂಕೆಗಳ ಮೇಲೆ ಆಕ್ರಮಣ ಮಾಡಲು ಚಿರತೆ ನಮ್ಮ ಕಡೆಗೇ ಬರತೊಡಗಿತು! ಅದು ಇನ್ನೂ ನಮ್ಮನ್ನು ನೋಡಿರಲಿಲ್ಲ, ಸುಮಾರು 100 ಅಡಿ ಹತ್ತಿರ ಬರುವವರೆಗೂ ಕಾದು ನಾನು ಬಂದೂಕನ್ನು ಚಲಾಯಿಸಿದೆ. ಪ್ರಾಣಾಂತಿಕ ಏಟು ಬಿದ್ದರೂ ಅದು ಘರ್ಜಿಸುತ್ತಾ ಹುಲ್ಲುಗಳಲ್ಲಿ ಮರೆಯಾಯಿತು. ಆದರೆ ಕೆಲವೇ ಅಡಿ ಮುಂದೆ ಹೋಗಿ ಕುಸಿದುಬಿದ್ದಿತು.

ಜಿಂಕೆಗಳು ಹಗಲು ಹೊತ್ತಿನಲ್ಲಿ ವಸತಿಗೃಹದ ಹತ್ತಿರ ಮೇಯಲು ಏಕೆ ಬರುತ್ತವೆ ಎಂದು ನಿಮಗೆ ಆಶ್ಚರ್ಯವಾಗಬಹುದು. ಇವುಗಳನ್ನು ಕಾನೂನುಬಾಹಿರವಾಗಿ ಕೊಲ್ಲಲು ಬರುವವರು ಅರಣ್ಯಪಾಲಕನಿರುವ ಸ್ಥಳದ ಹತ್ತಿರ ಈ ಪ್ರಯತ್ನ ಮಾಡಲಾರರು ಎಂದು ಅವುಗಳು ತಮ್ಮ ಅನುಭವದಿಂದ ಕಂಡುಕೊಂಡಿರಬಹುದು!! ಮೇಲ್ನೋಟಕ್ಕೆ ಹುಚ್ಚುತನವೆನ್ನಿಸುವ ಅವುಗಳ ವರ್ತನೆ ಎಷ್ಟು ಅರ್ಥವತ್ತಾಗಿದೆಯಲ್ಲವೇ?

(ಮುಂದುವರೆಯುವುದು)

Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 31-05-2017 RNI No. KARKAN20

ಡಬ್ಬಿಂಗ್ ಬರೋದು ಗ್ಯಾರಂಟಿ!!



ಕನ್ನಡ ಸಿನಿಮಾ ರಂಗದಲ್ಲಿ ಮತ್ತೆ ಡಬ್ಬಿಂಗ್ ಚರ್ಚೆ ಶುರುವಾಗಿದೆ. 'ಬಾಹುಬಲಿ' ಸಿನಿಮಾ ಖ್ಯಾತಿಯ ರಾಜಮೌಳಿ ಕನ್ನಡದಲ್ಲಿ ಡಬ್ಬಿಂಗ್ ಆಗಬೇಕು ಎಂದು ಮಾತಾಡಿದ್ದಾರೆ. ಇದೇ ಹೊತ್ತಿನಲ್ಲಿಯೇ ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಿಂದ ಇಂಗ್ಲಿಷ್ ಮತ್ತು ಹಿಂದಿಯಲ್ಲಿ ತೆರೆಕಂಡ 'ಡಾ.ಬಾಬಾಸಾಹೇಬ್ ಅಂಬೇಡ್ಕರ್' ಸಿನಿಮಾವನ್ನು ಡಬ್ ಮಾಡುವ ಕುರಿತು ಸಿದ್ಧತೆ ನಡೆದಿದೆ. ಸಮಾಜ ಕಲ್ಯಾಣ ಇಲಾಖೆಯ ಸಚಿವ ಎಚ್.ಆಂಜನೇಯ ಕೂಡ ಡಬ್ಬಿಂಗ್ ಮಾಡುವ ಗಟ್ಟಿ ನಿರ್ಧಾರ ತಾಳಿದ್ದಾರೆ. ಹಾಗಾಗಿ ಮತ್ತೊಂದು ಸುತ್ತಿನ ಚರ್ಚೆ ಕೂಡ ಶುರುವಾಗಿದೆ. ಡಬ್ಬಿಂಗ್ ತಡೆಯುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ, ಆದರೆ, ಡಬ್ಬಿಂಗ್‌ನಿಂದಾಗಿ ಕನ್ನಡ ಮತ್ತು ಕರ್ನಾಟಕಕ್ಕೆ ನಾನಾ ತೊಂದರೆಗಳು ಆಗಲಿವೆ. ಹಾಗಾಗಿ ಕನ್ನಡ ಪರ ಸಂಘಟನೆಗಳು ಈ ಕ್ರಿಯೆಯನ್ನು ವಿರೋಧಿಸುತ್ತಲೇ ಬಂದಿವೆ. ನ್ಯಾಯಾಂಗನಿಂದನೆಯ ಭಯವಿದ್ದರೂ, ಬಹಿರಂಗವಾಗಿಯೇ ಸ್ಟಾರ್ ನಟರು ಕೂಡ ಡಬ್ಬಿಂಗ್ ಅನ್ನು ವಿರೋಧಿಸುತ್ತಾ ಬಂದಿದ್ದಾರೆ. ಏನೇ ವಿರೋಧಗಳಿದ್ದರೂ ಸ್ವತಃ ಸರ್ಕಾರವೇ ಡಬ್ಬಿಂಗ್ ಸಿನಿಮಾ ತಯಾರಿಕೆಗೆ ಮುಂದಾಗಿದ್ದರಿಂದ ಕನ್ನಡದಲ್ಲಿ ಡಬ್ಬಿಂಗ್ ಗ್ಯಾರಂಟಿ ಅನ್ನುವ ಮಾತು ಕೇಳಿ ಬಂದಿವೆ. ಈಗಾಗಲೇ ಎರಡು ಡಬ್ಬಿಂಗ್ ಸಿನಿಮಾಗಳು ರಿಲೀಸ್ ಆದರೂ, ತೀವ್ರ ವಿರೋಧದ ಹಿನ್ನೆಲೆಯಲ್ಲಿ ಅವುಗಳಿಗೆ ಉತ್ತಮ ಪ್ರತಿಕ್ರಿಯೆ ಸಿಕ್ಕಿರಲಿಲ್ಲ, ಇನ್ಮುಂದೆ ಏನಾಗುತ್ತದೆಯೋ ಕಾದು ನೋಡಬೇಕು.

ದ್ರಾವಿಡ್ ಒಪ್ಪಿಲ್ಲ ಸಿನಿಮಾ ಆಗಲ್ಲ!!

ಕ್ರಿಕೆಟ್ ಆಟಗಾರ ರಾಹುಲ್ ದ್ರಾವಿಡ್ ಅವರ ಜೀವನವನ್ನು ಆಧರಿಸಿದ ಸಿನಿಮಾ ಮಾಡುವುದಾಗಿ 'ರಂಗಿತರಂಗ' ಸಿನಿಮಾದ ನಿರ್ದೇಶಕ ಅನೂಪ್ ಭಂಡಾರಿ ಮತ್ತು ನಟ ನಿರೂಪ್ ಮಾಧ್ಯಮಗಳಿಗೆ ಹೇಳಿಕೊಂಡು ತಿರುಗುತ್ತಿದ್ದಾರೆ. 'ರಂಗಿತರಂಗ'ದಂತಹ ಹೊಸ ರೀತಿಯ ಸಿನಿಮಾ ನೀಡಿರುವ ಈ ತಂಡದ ಬಗ್ಗೆ ನಿರೀಕ್ಷೆ ಇಟ್ಟುಕೊಂಡಿರುವ ಸ್ಯಾಂಡಲ್‌ವುಡ್ ಕೂಡ ಇದನ್ನು ನಿಜವೆಂದೇ ನಂಬಿತ್ತು; ಈಗ ಅಸಲಿ ಕಾರಣ ಹೊರಬಿದ್ದಿದೆ. ತಮ್ಮ ಬದುಕಿನ ಕುರಿತಾದ ಸಿನಿಮಾ ಬರುತ್ತಿರುವ ವಿಷಯ ಸ್ವತಃ ರಾಹುಲ್ ದ್ರಾವಿಡ್‌ಗೂ ಗೊತ್ತಿಲ್ಲವಂತೆ.



ಈವರೆಗೂ ರಂಗಿನ ಸಹೋದರರು ಕೂಡ ರಾಹುಲ್ ಜತೆ ಮಾತಾಡಿಲ್ಲವಂತೆ. ಆದರೆ, ಸುದ್ದಿ ಮಾತ್ರ ರಂಗುರಂಗಾಗಿ ಬರುತ್ತಲೇ ಇದೆ.

ರಾಹುಲ್ ಒಪ್ಪಿಗೆ ಪಡೆಯದೇ ಸಿನಿಮಾ ಹೇಗೆ ಮಾಡುತ್ತೀರೆಂದು ನಿರ್ದೇಶಕರನ್ನು ಕೇಳಿದಾಗ, ಅವರಿಂದ ಬಂದ ಉತ್ತರ ಇನ್ನೂ ತಮಾಷೆಯಾಗಿದೆ. "ನಾನು ಮತ್ತು ನನ್ನ ಸಹೋದರ ಕಾಲೇಜು ದಿನಗಳಿಂದಲೂ ಕ್ರಿಕೆಟ್ ಆಡುತ್ತಾ ಬಂದಿದ್ದೇವೆ. ಈಗಲೂ ಆಡುತ್ತೇವೆ. ನಿರೂಪ್ ಕ್ರಿಕೆಟ್ ಶೈಲಿ ರಾಹುಲ್ ದ್ರಾವಿಡ್ ಅವರನ್ನು ಹೋಲುತ್ತದೆ ಎಂದು ಹೇಳಿದ್ದೆ. ಹಾಗಾದರೆ ದ್ರಾವಿಡ್ ಕುರಿತಾಗಿ ಸಿನಿಮಾ ಮಾಡಿ ಅಂತ ಜನರು ಹೇಳಿದರು. ನನಗೂ ಅಂಥದ್ದೊಂದು ಸಿನಿಮಾ ಮಾಡುವ ಆಸೆ ಇದೆ ಅಂತ ಹೇಳಿದೆ. ಸುದ್ದಿ ಬೇರೆ ಬೇರೆ ರೀತಿಯಲ್ಲಿ ತಿರುವು ಪಡೆದಿದೆ. ನಾವಿನ್ನೂ ಯಾರನ್ನೂ ಈ ಕುರಿತು ಕಾಂಟ್ಯಾಕ್ಟ್ ಮಾಡಿಲ್ಲ" ಅಂತಾರೆ. ಪುಟಗಟ್ಟಲೇ ಸುದ್ದಿ ಬರೆದವರು ಅನೂಪ್ ಮಾತು ಕೇಳಿ ಬೆಚ್ಚಿಬಿದ್ದಿದ್ದಾರೆ.



ಪ್ರಿಯಾಂಕಾ ಉಪೇಂದ್ರ ಹೊಸ ಸಿನಿಮಾ

ಪ್ರಿಯಾಂಕಾ ಉಪೇಂದ್ರ ಮತ್ತೊಂದು ಹೊಸ ಸಿನಿಮಾವನ್ನು ಒಪ್ಪಿಕೊಂಡಿದ್ದಾರೆ. ಕ್ರೈಂ ಸ್ಟೋರಿಯನ್ನು ಆಧರಿಸಿದ ಸಿನಿಮಾದಲ್ಲಿ ಅವರು ವಿಭಿನ್ನ ಪಾತ್ರವನ್ನು ಮಾಡುತ್ತಿದ್ದಾರಂತೆ. ಸಿನಿಮಾದ ವಿಶೇಷತೆ ಅಂದರೆ, ಲೇಖಕಿ ರೇಖಾರಾಣಿ ಈ ಸಿನಿಮಾದ ನಿರ್ದೇಶಕಿ. ಕೌಟುಂಬಿಕ ದೌರ್ಜನ್ಯ ಕುರಿತ ವಿಷಯವೊಂದನ್ನು ರೇಖಾರಾಣಿ ಆಯ್ಕೆ ಮಾಡಿಕೊಂಡಿದ್ದು, ಅದು ನೈಜ ಘಟನೆಗಳನ್ನು ಆಧರಿಸಿದ ಕತೆ ಅಂತೆ.

"ಕೋಲ್ಕತಾದಲ್ಲಿ ಮಹಿಳೆಯೊಬ್ಬರನ್ನು ಎರಡು ದಶಕಗಳ ಕಾಲ ಒಂದೇ ಕೋಣೆಯಲ್ಲಿ ಕೂಡಿಡಲಾಗಿತ್ತು, ಆ ಘಟನೆಯೇ ಇಂದು ಸಿನಿಮಾವಾಗಿ ಮೂಡಿ ಬರುತ್ತಿದೆ. ನಾವು ಇಂದು ಮನುಷ್ಯರನ್ನು ಮನುಷ್ಯರಂತೆ ನೋಡುತ್ತಿಲ್ಲ, ಹಾಗಾಗಿ ದೌರ್ಜನ್ಯಗಳು ಹೆಚ್ಚಾಗುತ್ತಿವೆ. ಅಂತಹ ಕತೆಯೊಂದರಲ್ಲಿ ನಾನು ನಟಿಸುತ್ತಿದ್ದೇನೆ. ನಿಜಕ್ಕೂ ಪಾತ್ರ ಚೆನ್ನಾಗಿದೆ" ಅನ್ನುವುದು ಪ್ರಿಯಾಂಕಾ ಮಾತು.

ಸದ್ಯ ಸ್ಕ್ರಿಪ್ಟ್ ಕೆಲಸದಲ್ಲಿ ಬಿಜಿ ಆಗಿದ್ದಾರೆ ರೇಖಾರಾಣಿ. ಈ ನಡುವೆ ಪ್ರಿಯಾಂಕಾ ಕೂಡ ಮತ್ತೊಂದು ಸಿನಿಮಾ ಒಪ್ಪಿಕೊಂಡಿದ್ದಾರೆ. ಈ ಚಿತ್ರದ ಶೂಟಿಂಗ್ ಮುಗಿದ ನಂತರ ಹೊಸ ಸಿನಿಮಾದ ಚಿತ್ರೀಕರಣ ಶುರುವಾಗಲಿದೆ.

ಮತ್ತೊಂದು ಅಡುಗೆಗೆ ಸಜ್ಜಾದ ಭ



ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಯೋಗರಾಜ ನಿರ್ದೇಶನದ 'ಮುಗುಳುನಗೆ' ಸಿನಿಮಾಗಿಂತಲೂ ಮುಂ ಹೆಸರೇ ಅನುರಾಗಿ' ಸಿನಿಮಾ ಸೆಟ್ಟೇರಬೇಕಿತ್ತು, ಗಣೇಶ್ ಕಾ ಸಿಕ್ಕಿಹು ಅನ್ನುವ ಕಾರಣಕ್ಕೆ 'ಮುಗುಳುನಗೆ' ಚಿತ್ರಕ್ಕೆ ಆ ಹೇಳಿದರು ಭಟ್. ಇದರಿಂದಾಗಿ ಸಹಜವಾಗಿಯೇ 'ಹೆ ಅನುರಾಗಿ' ಸಿನಿಮಾದ ನಿರ್ಮಾಪಕರಿಗೆ ನಿರಾಶೆ ಆಗಿ ಸಿನಿಮಾದ ಮೂಲಕ ತಮ್ಮ ಮಗ ಆಕಾಶ್‌ನನ್ನು ಸಿನಿಮಾ ಪರಿಚಯಿಸಬೇಕೆಂದು ಆಸೆ ಪಟ್ಟಿದ್ದ ಸುರೇಶ್ ನಾಗಪಾಲ ಸಿನಿಮಾ ಮಾಡದೇ ಸುಮ್ಮನಾಗಿದ್ದರು. ಈಗ ಮತ್ತೆ ಮನಸ್ಸಲ್ಲಿ ಆಸೆಯ ಬೀಜ ಬಿತ್ತುತ್ತಿದ್ದಾರೆ ಯೋಗರಾಜ್ ಭಟ್. ಅ ಹೊಸ ರೀತಿಯ ಕತೆಯನ್ನು ಬರೆದುಕೊಂಡಿರುವುದಾಗಿ ಹೇಳಿರು ಈ ಬಾರಿ ಮಾತಿಗೆ ತಪ್ಪದೇ ಸಿನಿಮಾ ಮಾಡುವುದಾಗಿ ಪ್ರಮಾಣ ಮಾ

ಹಳೆಯ ಸ್ಕ್ರಿಪ್ಟ್‌ನಲ್ಲಿಯೇ ಒಂದಷ್ಟು ಬದಲಾವಣೆ ಮಾಡಿ ಶೂ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. 'ಮುಗುಳುನಗೆ' ಸಿನಿಮಾಗಾಗಿ ಒಂದ ಹಾಕಿದ್ದಾರೆ ಭಟ್, ಹಾಗಾಗಿ ಅವರ ಕೈಲಿ ದುಡ್ಡಿಲ್ಲ, ಅಲ್ಲದೆ ಬ್ಯಾನರ್‌ನಲ್ಲಿ 'ಗಾಳಿಪಟ 2' ಸಿನಿಮಾ ಮಾಡಬೇಕು. ಹಾಗಾಗಿ 'ಅನುರಾ ಮತ್ತೆ ಒಪ್ಪಿಕೊಂಡಿದ್ದಾರೆ ಅನ್ನುತ್ತಿದೆ ಗಾಂಧಿನಗರ.

ರಜನಿ ರಾಜಕೀಯ ಗಿಮಿ

ತಮಿಳುನಾಡಿನ ರಾಜಕಾರಣದಲ್ಲಿ ರಜನೀಕಾಂತ್ ಹೆಸರು ಕೇಳಿಬರುತ್ತಿದೆ. ಅದರಲ್ಲೂ ತಲೈವಾ ಬಿಜೆಪಿಯ ಅಭ್ಯರ್ಥಿ ಬಿಂಬಿಸಲಾಗುತ್ತಿದೆ. ರಜನಿಯನ್ನು ತಮ್ಮ ಪಕ್ಷಕ್ಕೆ ಕರೆತರಲು ಏನೆಲ್ಲ ಮಾಡ ಎಲ್ಲವನ್ನೂ ಭಾರತೀಯ ಜನತಾ ಪಕ್ಷ ಮಾಡಿದೆ. ಸ್ವತಃ ರಜನಿ ಕೂಡ ಮೋದಿಯನ್ನು ಹಾಡಿಹೊಗಳಿದ್ದಾರೆ. ಜತೆಗೆ ರಾಜಕೀಯ ಸೇರಲು ರೀತಿಯಲ್ಲೂ ರಜನಿ ಸಿದ್ಧವಾಗುತ್ತಿದ್ದು, ಅದರ ಭಾಗವಾಗಿ ಅಭಿಮಾನಿಗಳನ್ನು ಭೇಟಿ ಮಾಡುವ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. "ರಾಜಕಾರಣಕ್ಕೆ ಬರುವ ಮನಸ್ಸಿಲ್ಲ, ಅದು ನನ್ನ ಕ್ಷೇತ್ರವೂ ಅಲ್ಲ" ಅಂತಿದ್ದ ರಜನಿ, ಈಗ ದೇವರ ಇಚ್ಛೆ ಇದ್ದರೆ ತಾವು ರಾಜಕೀಯಕ್ಕೆ ಬರುವುದಾಗಿಯೂ ಹೇಳಿಕೆ ನೀಡುತ್ತಿದ್ದಾರೆ.



ಜತೆಗೆ ಮತ್ತೊಂದು ಕಾರಣದಿಂದಾಗಿ ರಜನಿ ಸುದ್ದಿಯಲ್ಲಿದ್ದಾರೆ. ಇದನ್ನೂ ಕೂಡ ರಾಜಕೀಯ ಗಿಮಿಕ್ ಎಂದು ಬಣ್ಣಿಸಲಾಗುತ್ತಿದೆ. ಸದ್ಯ ರಜನೀಕಾಂತ್ ಭೂಗತ ಪಾತ ಮಸ್ತಾನ್ ಜೀವನ ಕುರಿತಾದ ಸಿನಿಮಾ ಮಾಡುತ್ತಿದ್ದಾರೆಂದು ಊಹಾಪೋ ಹರಿಬಿಟ್ಟಿದ್ದು, ಮಸ್ತಾನ್ ಮಗ ಜೀವ ಬೆದರಿಕೆ ಕೂಡ ಹಾಕಿದ್ದಾನೆಂ ನಡೆದಿದೆ. ಮಸ್ತಾನ್ ಮಗನ ವಿರುದ್ಧ ರಜನಿ ಅಭಿಮಾನಿಗಳು ತಿರುಗಿ

ಈ ಎಲ್ಲದರ ಕುರಿತು ರಜನಿಕಾಂತ್ ಗೆಳೆಯರು ಹೇಳುವುದ "ರಜನಿಕಾಂತ್ ಕೂಡಲೇ ಯಾರಿಗೂ ಅರ್ಥವಾಗಲ್ಲ, ಅವರು ಯಾರ ಕೇಳುವುದಿಲ್ಲ, ರಾಜಕೀಯಕ್ಕೆ ಅವರು ಬರಬಾರದು ಅನ್ನುವುದ ಅಭಿಪ್ರಾಯ. ಆದರೆ, ನಿರ್ಧಾರ ಅವರಿಗೆ ಬಿಟ್ಟಿದ್ದು. ಸದ್ಯದ ಸ್ಥಿತಿ ನೋ ಅವರು ಖಂಡಿತಾ ರಾಜಕಾರಣ ಪ್ರವೇಶ ಮಾಡುತ್ತಾರೆ ಅನಿಸುತ್ತಿದೆ"

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com